the Heads of Departments that they must closely follow the discussion in the House so that they may know the intensity of the feelings of the representatives of the people. Now what has happened is, nobody seems to take notice of what takes place or what transpires here. Except some Deputy Ministers even Ministers are not here. There is a feeling that what we say here is taken only as a ritual without meeting any serious consideration. I would therefore urge the Government that unless they want to take interest in the subjects that are discussed here, I do not think any purpose will be served. I feel the dignity of the House is not maintained.

Sri S. NIJALINGAPPA.—The hon'ble member Sri Siddaveerappa has just brought to my notice and I will took into it.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಮುಖ್ಯ ಮಂತ್ರಿಗಳು ಡಿಫಿಸಿಟ್ ಫೈನಾನ್ಸಿಂಗಿಗೂ ಈ ಸಭೆಗೂ ಸಂಬಂಧವಿಲ್ಲವೆಂದು ಹೇಳಿದರು. ಆದರೆ ಆರ್ಥಿಕ ದೊರಣೆಯನ್ನು ಇವತ್ತಿನ ದಿನ ಮುಖ್ಯ ಮಂತ್ರಿಗಳು ಹೊರಗೆ ಹೇಳುವುದು ನ್ಯಾಯವೇ? ಸರಿಯೇ? ಹಾಗೆ ಮಾಡಬಾರದೆಂದು ಅಧ್ಯಕ್ಷರು ಅವರಿಗೆ ತಿಳಿಸಬೇಕು.

BUDGET ESTIMATES FOR 1968-69

General Discussion—(*Debate Contd.*)

ಶ್ರೀ ಅಜೀಜ್‌ಸೇಟ್.—ಸ್ವಾಮಿ, ಈಗ ನಮ್ಮ ಮುಂದಿರುವ ಸರ್ಪ್ಲಸ್ ಬಜೆಟ್ ವಿಷಯದಲ್ಲಿ ಮಾತನಾಡಲು ನಾನು ನಿಂತಿದ್ದೇನೆ. ಅನೇಕರು ಆಗಲೇ ಇಂಟರಪ್ಟು ಮಾಡಬೇಕು, ಗಲಾಟೆ ಮಾಡಬೇಕು ಎಂದು ಕಾದುಕೊಂಡಿದ್ದಾರೆ. ಆದರೆ ಎಲ್ಲಾ ಕಡೆ ಗಲಾಟೆಮಾಡಿದರೂ ನನಗೆ ತಡೆದು ಕೊಳ್ಳುವುದಕ್ಕೆ ಶಕ್ತಿಯಿದೆ, ಸುಮ್ಮನೆ ಯಾರೂ ಗಲಾಟೆಮಾಡದೆ ಮರ್ಯಾದೆಯಿಂದ ನನ್ನ ಭಾಷಣವನ್ನು ಕೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಕೆಲವು ಟೀಕೆಗಳನ್ನು ಮಾತ್ರ ತಮ್ಮ ಮುಂದಿಡುತ್ತಿದ್ದೇನೆ.

ಸ್ವಾಮಿ, ರಾಜ್ಯಪಾಲರ ಭಾಷಣದ ಚರ್ಚೆಯ ಸಮಯದಲ್ಲಿ ವಿರೋದ ಪಕ್ಷದವರು ಒಳ್ಳೆಯದನ್ನು ಬಿಟ್ಟು ಕೆಟ್ಟದ್ದನ್ನು ಮಾತ್ರ ಹೇಳಿ ಟೀಕಿಸುತ್ತಾರೆ. ಒಳ್ಳೆಯ ಕೆಲಸ ಏನು ಸರಕಾರ ಮಾಡಿದೆ ಅದನ್ನು ಹೇಳುವುದಿಲ್ಲ ಎಂದು ಮುಖ್ಯ ಮಂತ್ರಿಗಳು ತಿಳಿಸಿದರು, ನಿಜ. ವಿರೋಧ ಪಕ್ಷ ಆ ರೀತಿ ಮಾಡಬಾರದು. ಒಳ್ಳೆಯದನ್ನು ಮಾಡಿದ್ದರೆ ಅದು ಒಳ್ಳೆಯದು ಎಂದು ಹೇಳಬೇಕು. ಕೆಟ್ಟದ್ದನ್ನು ಮಾಡಿದ್ದರೆ ಅದನ್ನೂ ತಿಳಿಸಬೇಕು; ಅದನ್ನು ಸರಕಾರ ಒಪ್ಪಿಕೊಳ್ಳಬೇಕು. ಈಗ ಉದಾಹರಣೆ ಕೊಡಬೇಕಾಗಿದೆ.

[MR. CHAIRMAN (DR. R. NAGAN GOWDA) in the Chair]

ಕೆಟ್ಟದ್ದು ಮಾಡುತ್ತ ಇರುವುದು ಮೊದಲಿನಿಂದಲೂ ಹೇಳಿಕೊಂಡು ಬರುತ್ತಾ ಇದ್ದೇವೆ. ದುರಾಡಳಿತ, ಲಂಚರುಷುವತ್ತು ಜಾಸ್ತಿಯಾಗಿರುವುದು, ಜನರ ಹಿತಕ್ಕೆ ಯಾವ ಕೆಲಸವನ್ನೂ ಮಾಡುತ್ತಿಲ್ಲ. ಮತ್ತು ಅಧಿಕಾರಿಗಳಲ್ಲಿ ಒಂದು ಅಹಂಭಾವ ಬಂದಿದೆ ಎಂತಲೂ ಹೇಳಿದ್ದೇವೆ ಒಳ್ಳೆಯ ಕೆಲಸ ಏನು ಮಾಡಿದ್ದಾರೆ ಎಂದರೆ: ಅವರಿಗೆ ಹೇಳುತ್ತೇನೆ ಈ ಸರ್ಕಾರ ನಿಮ್ಮ ಕೈಗೆ ಬಂದಮೇಲೆ ನಿಮ್ಮ ಮನೆತನವನ್ನು ಸುಖವಾಗಿ ನೋಡಿಕೊಂಡಿದ್ದೀರಿ, ಆಸ್ತಿಪಾಸ್ತಿಗಳನ್ನು ಜಾಸ್ತಿ ಮಾಡಿಕೊಂಡಿದ್ದೀರಿ, ನಿಮ್ಮ ಪಕ್ಷದವರಿಗೆ ಸ್ಥಾನಮಾನಗಳನ್ನು ಹಂಚಿದ್ದೀರಿ. ಅದು ನ್ಯಾಯ. ಒಳ್ಳೆಯ ಕೆಲಸ ಮಾಡದ್ದೀರಿ, ನಿಮಗೆ ಮೊದಲು ಏನೂ ಆಸ್ತಿ ಇರಲಿಲ್ಲ, ಈಗ ಹತ್ತರಷ್ಟು ಆಸ್ತಿ ಇದೆ. ನಿಮ್ಮ ಮನೆತನಕ್ಕೆ, ವಿದ್ಯಾಭ್ಯಾಸಕ್ಕೆ, ಸರ್ಕಾರ ಚಾಕರಿಯಲ್ಲಿ ಇದೇ ರೀತಿ ಎಲ್ಲದರಲ್ಲೂ ನೀವು ಸರಿಯಾಗಿ ಹಂಚಿಕೊಂಡಿದ್ದೀರಿ. ದೇಶಕ್ಕೆ ಯಾವ ರೀತಿಯಲ್ಲೂ ಹಂಚಿಲ್ಲ ಎಂದು ವಿರೋದಪಕ್ಷದವರು ಹೇಳುತ್ತಾ ಇದ್ದಾರೆ, ಅದನ್ನು ನೀವು ಒಪ್ಪಿಕೊಳ್ಳಲೇ ಬೇಕು. ನೀವು ಏನೇನು ಮಾಡಿದ್ದೀರಿ

(ಶ್ರೀ ಅಜೀಜ್ ಸೇಟ್)

ಎಂದು ಹೇಳಿ ಬೇಕಾದರೆ ಒಂದು ಪಟ್ಟಿ ಕೊಡಬಹುದು. 'ಲಂಚ ರುಷುವತ್ತು ತೆಗೆದುಕೊಳ್ಳು ತ್ತಾರೆ ಎಂದು ನೀವು ಪದೇ ಪದೇ ಹೇಳುತ್ತೀರಿ ಯಾರು ತೆಗೆದುಕೊಂಡರು, ಹೇಗೆ ತೆಗೆದುಕೊಂಡರು ಅಂತ ಹೇಳಿದರೆ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ನಾನು ಹೇಳುವುದು ಇಷ್ಟೇ, ನಮ್ಮ ಕೈಯಲ್ಲಿ ಸೆಕ್ರೆಟೇರಿಯಟ್ ಇಲ್ಲ, ಸಿ.ಐ.ಡಿ. ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್ ಇಲ್ಲ. ನಾವು ಅಲ್ಲಿ ಇಲ್ಲಿ; ವಿಷಯ ತಿಳಿದುಕೊಂಡು ಬಂದು ಹೇಳ ಬೇಕಾಗುತ್ತದೆ. ಇಂತಿಂಥಾದ್ದು ಹೀಗೆ ಹೀಗೆ ಆಗಿದೆ ಎಂದು ಹೇಳಿದರೆ ನೀವೇನು ಮಾಡುತ್ತೀರಿ ಎಂದರೆ, ಅವರ ಮೇಲೆ ಕ್ರಮ ಜರುಗಿಸಿ ಶಿಕ್ಷೆ ಮಾಡುವುದಕ್ಕೆ, ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಬದಲು ಅವರಿಗೆ ಪ್ರಮೋಷನ್, ಡಬ್ಬಲ್ ಪ್ರಮೋಷನ್ ಕೊಡುತ್ತೀರಿ. ಲಂಚಹೊಡೆದದ್ದಕ್ಕೂ ಪ್ರಮೋಷನ್, ಅನ್ಯಾಯ ಮಾಡಿದ್ದಕ್ಕೂ ಪ್ರಮೋಷನ್, ಈ ರೀತಿ ಅವನಿಗೂ ಏನೇನು ಸೌಕರ್ಯ ಕೊಡಬೇಕೋ ಅದನ್ನೆಲ್ಲಾ ಕೊಡುತ್ತೀರಿ. ಈ ಲಂಚ ರುಷುವತ್ತು ಹೇಗೆ ಇದೆ ಎಂಬುದನ್ನು ತಿಳಿದು ಕೊಳ್ಳಬೇಕಾದರೆ ಇದು ಒಂದು ಸಿಂಪಲ್ ವಿಷಯ. ಅಧಿಕಾರಿ ಇರಲಿ, ಮಂತ್ರಿ ಇರಲಿ, ವಿಧಾನ ಸಭೆಯ ಸದಸ್ಯನಿರಲಿ ಪರಿಷತ್ತಿನ ಸದಸ್ಯನಿರಲಿ 1947ನೇ ಇಸವಿ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಅವನಿಗೆ ಏನು ಆಸ್ತಿಪಾಸ್ತಿ ಇತ್ತು, ಈಗ ಏನು ಇದೆ, ಇಷ್ಟು ಬಂದಿದ್ದರೆ ಹೇಗೆ ಬಂತು ಎಂಬುದನ್ನು ಕಂಡುಹಿಡಿಯಬಹುದು. ಒಂದು ಉದಾಹರಣೆ ಹೇಳಬೇಕಾದರೆ, ಹೆಸರು ಹೇಳುವುದಿಲ್ಲ, ಹೆಸರು ಹೇಳಬಾರದು ಎಂದು ಹೇಳಿದ್ದೀರಿ ಅದು ಸಂಪ್ರದಾಯವಲ್ಲ, ನಿಮ್ಮ ಮಂತ್ರಿ ಮಂಡಲದಲ್ಲಿ ಒಬ್ಬ ಮಂತ್ರಿ ಇದ್ದಾರೆ, ಅವರಿಗೆ 4 ಎಕರೆ ಜಮೀನು ಅವರ ಅಪ್ಪನ ತಾತನ ಕಾಲದಿಂದ ಬಂದಿರುವುದು ಇತ್ತು. ಈ ದಿನ ಎಷ್ಟಾಗಿದೆ ಎಂದರೆ 3 ಲಕ್ಷ 4 ಲಕ್ಷ ರೂಪಾಯಿನಷ್ಟು ಆಸ್ತಿ ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳು ನೋಡುತಾ ಇದ್ದಾರೆ ಬೇಕಾದರೆ ನಾನು ಅವರ ಆಫೀಸಿಗೆ ಬಂದು ಈ ವಿಷಯ ತಿಳಿಸುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಬಂದು ಬರೆದು ಕೊಟ್ಟರೆ ಬಹಳ ಉಪಕಾರ ಮಾಡಿದ ಹಾಗಾಗುತ್ತದೆ.

ಶ್ರೀ ಅಜೀಜ್ ಸೇಟ್.— ಇಂಥಾದ್ದು ಯಾವುದನ್ನೇ ಆಗಲಿ ಬರೆದು ಕೊಡು ಅಂತ ನಮ್ಮ ಅಪ್ಪ ಹೇಳಲಿಲ್ಲ, ಬರೆದು ಕೊಟ್ಟರೆ ನನ್ನನ್ನು ಜೈಲಿಗೆ ಕಳುಹಿಸುತ್ತೀರಿ. ಇದು ನಮ್ಮ ಹಣೆಬರಹ. ತಮಗೆ ಗೊತ್ತಿರುವ ಹಾಗೆ ಹಿಂದೆ ಪಂಡಿತ ಜವಹರಲಾಲ್ ನೆಹರೂ ಅವರು ಮೋತಿಲಾಲ್ ನೆಹರು ರವರ ಮಕ್ಕಳು, ಅವರಿಗೆ ಕೋಟ್ಯಾಂತರ ರೂಪಾಯಿ ಆಸ್ತಿ ಇತ್ತು, ಅವರಿಗೆ ಯಾರಾದರು ಏನಾ ದರು ಬರೆದರೆ These are all small matters ; do not take them seriously ಎಂದು ಹೇಳಿಬಿಡುತ್ತಾ ಇದ್ದರು. ಬಹಳ ಉದಾರ ಮನಸ್ಸಿನಿಂದ ಅದೇ ರೀತಿ ತಾವು ಕೂಡ These are small matters ; do not take them seriously ಅಂತ ಹೇಳಬಹುದು. ನೀವು ಸ್ವಲ್ಪ ಯೋಚನೆ ಮಾಡಬೇಕು. ಈ ಸಭೆಯ ಸದಸ್ಯನಾಗಿ ಇಲ್ಲಿ ಕುಳಿತುಕೊಂಡು ಇಷ್ಟು ಧೈರ್ಯವಾಗಿ ಹೇಳಬೇಕಾದರೆ ಇದರಲ್ಲಿ ಏನೋ ನಿಜಾಂಶ ಇರಬೇಕು ಇದನ್ನು ನಾನು ನೋಡಬೇಕು, ಹಿಡಿಯಬೇಕು ಎಂದು ನೀವು ಮನಸ್ಸು ಮಾಡಿದರೆ ಖಂಡಿತವಾಗಿಯೂ ನಿಮ್ಮಿಂದ ಸಾಧ್ಯವಾಗಿಯೇ ಆಗುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರಿಗೆ ಈ ವಿಷಯವನ್ನು ಹೇಳಬೇಕೆಂದು ಇಷ್ಟಪಡು ತ್ತೇನೆ. ನೀವು ದಯವಿಟ್ಟು ಇವತ್ತೋ ನಾಳೆಯೋ ನನ್ನ ಹತ್ತಿರ ಬಂದು ಹೇಳಿ. ನೀವು ಹೇಳಿದ್ದ ನ್ನೆಲ್ಲಾ ನಾನೇ ಬರೆದುಕೊಳ್ಳುತ್ತೇನೆ, ಹಾಗೂ ನಾನೇ ವಿಚಾರಿಸುತ್ತೇನೆ. ಅಷ್ಟು ಮಾಡಿ ಉಪ ಕಾರ ಮಾಡಿ.

ಶ್ರೀ ಅಜೀಜ್ ಸೇಟ್.—ವಿಚಾರ ಮಾಡುತ್ತೇನೆ ಅಂತ ಹೇಳಿದರೆ ಸಾಲದು, ಕ್ರಮ ತೆಗೆದು ಕೊಳ್ಳುತ್ತೇನೆ ಎಂದು ಭರವಸೆ ಕೊಡಬೇಕು.

ಶ್ರೀ ಎಸ್. ನಿಜಲಿಂಗಪ್ಪ.— ಕ್ರಮ ತೆಗೆದುಕೊಳ್ಳುವುದಕ್ಕೆ ಲಾಯಕ್ಕಾದದ್ದು ಆದರೆ ಕ್ರಮ ತೆಗೆದುಕೊಳ್ಳುತ್ತೇನೆ, ಜವಾಬ್ದಾರಿ ಇಲ್ಲದೇ ಹೇಳಿದರೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಜವಾಬ್ದಾರಿಯುತರಾದವರು, ಆದ್ದರಿಂದ ಅವರು ಹೇಳುವುದು ಎಲ್ಲಾ ಒಳ್ಳೆ ಯದೇ ಅಂತ ತಿಳಿದುಕೊಂಡು ಜವಾಬ್ದಾರಿಯುತವಾಗಿ ತಿಳಿದುಕೊಂಡು ಹೇಳಿದ್ದಾರೆ ಅಂತ ಅವರು ಹೇಳಿದ್ದನ್ನು ನೋಟ್ ಮಾಡಿಕೊಂಡು ನಾನೇ ಬರೆದುಕೊಂಡು ಅವರ ರುಜು ಮಾಡಿಸಿಕೊಳ್ಳುತ್ತೇನೆ. To-morrow if he can meet me and give me those allegations, I will take them down and I promise very solemnly in this House that I shall make

a very serious enquiry and do everything possible to find out the truth or otherwise and submit my report to this House.

Sri AZEEZ SAIT.—That will be a red letter day in the history of Mysore and I will congratulate the Chief Minister if he does that.

ಸ್ವಾಮಿ, ನಾನು ಈ ಮಂತ್ರಿ ವಿಷಯ ಹೇಳುತ್ತಾ ಇದ್ದೆ. ಭರವಸೆ ಕೊಟ್ಟಿದ್ದೀರಿ, ನಾಳೆಯೋ ನಾಳಿದ್ದೋ ಚೀಫ್ ಮಿನಿಸ್ಟರ್ ರವರ ಹತ್ತಿರ ಹೋಗಿ ಅವರಿಗೆ ತಿಳಿಸುತ್ತೇನೆ. 4 ಎಕರೆ ಆಸ್ತಿ ಇದ್ದದ್ದು ಇವತ್ತು 7-8 ಲಕ್ಷ ರೂಪಾಯಿನ ಆಸ್ತಿ ಆಗಿದೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ನೀವು ಹೇಳುವುದನ್ನು ಬರೆದು ರುಜು ಮಾಡಿ ಕೊಡುವುದಕ್ಕೆ ಏನು ಕಷ್ಟ ?

ಶ್ರೀ ಅಜೀಜ್ ಸೇಟ್.—ಬೆಣ್ಣೆ ತಿಂದು ಬೇರೆಯವರ ಮುಖಕ್ಕೆ ಬಳಿದು ಅವನು ಬೆಣ್ಣೆ ತಿಂದ ಅಂತ ಹೇಳುವ ಜನ ನೀವು, ಸುಮ್ಮನೆ ಕುಳಿತುಕೊಳ್ಳಿರಿ.

Sri M. RAMAPPA (Hosadurga).—Sir, I rise on a point of order.

Sri S. BANGARAPPA (Sorab).—Sir, there is too much of interruption from the other side.

Sri M. RAMAPPA.—Sir, my point of order is, while Mr. Veerappa Gowda made some observation—I do not know what it is—Mr. Azeez sait actually threatened him not to interfere. Is it open to a member to actually threaten another member not to interfere ? Sri Veerappa Gowda was actually afraid of again getting up and saying something.

Mr. CHAIRMAN.—There is no point of order. The hon. Member may go ahead.

ಶ್ರೀ ಅಜೀಜ್ ಸೇಟ್.—ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್‌ನ ಒಂದು ಕಾನೂನು ಇದೆ. ಅದರಲ್ಲಿ ಕಾರ್ನರ್ ಸೈಟ್ಸ್ ಆಕ್ಷನ್ ಮಾಡಲೇಬೇಕು, ಯಾವ ಸಮಯದಲ್ಲೂ ಅಪ್‌ಸೆಟ್ ಪ್ರೈಸ್‌ಗೆ ಕೊಡಬಾರದು ಎಂದು ಇದೆ. ಒಬ್ಬ ಮಂತ್ರಿಗಳು ಅಪ್‌ಸೆಟ್ ಪ್ರೈಸ್‌ಗೆ ಎರಡು ಸೈಟುಗಳನ್ನು ಅವರ ಹೆಂಡತಿ ಹೆಸರಿಗೆ ವಿಲೇ ಮಾಡಿಸಿದ್ದಾರೆ. ಅದೂ ಕೂಡ ಈ ಬೆಂಗಳೂರಿನಲ್ಲಿ, ವಿಧಾನಸೌಧ, ಸರ್ಕಾರ ಇರುವಂತಹ ಕಡೆಯಲ್ಲಿ ಮಂತ್ರಿಗಳು ಎರಡು ಕಾರ್ನರ್ ಸೈಟುಗಳನ್ನು ಅಪ್‌ಸೆಟ್ ಪ್ರೈಸ್‌ಗೆ ಕೊಡಿಸಿದ್ದಾರೆ, ಈ ರೀತಿ ಅನ್ಯಾಯವಾಗುತ್ತಿದೆ. ಈ ರೀತಿ ದುರಾಡಳಿತವಾಗುತ್ತಿದೆ, ಈ ರೀತಿ ಅಧಿಕಾರ ದುರುಪಯೋಗಪಡಿಸಿಕೊಳ್ಳುತ್ತಾ ಇರುವುದನ್ನು ನೋಡಿದರೆ ಇಲ್ಲಿ ಸರ್ಕಾರ ಇದೆಯೋ ಇಲ್ಲವೊ ಅಂತ ಯೋಚನೆ ಮಾಡುವಂತಹ ಸಮಯ ಬರುತ್ತಾ ಇದೆ.

3-00 P.M.

ಈ ರೀತಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಈ ದಿವಸ ನಮ್ಮ ಮುಖ್ಯಮಂತ್ರಿಗಳಿಗೆ ಬೇರೆ ಕೆಲಸ ಜಾಸ್ತಿಯಾಗಿದೆ. ಅವರು ಇಲ್ಲಿ ರಾಜ್ಯದ ಆಡಳಿತವನ್ನು ಮುಖ್ಯಮಂತ್ರಿಗಳಾಗಿ ನೋಡಿಕೊಳ್ಳಬೇಕು. ಇನ್ನೊಂದು ಕಡೆ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ಡೆಲ್ಲಿ ಲಕ್ನೊ ಈ ಸ್ಥಳಗಳನ್ನೆಲ್ಲಾ ಸುತ್ತಬೇಕು. ಹೀಗಾಗಿ ಅವರಿಗೆ ವಿರಾಮವಿಲ್ಲದೆ ಕೆಲಸ ಮಾಡಬೇಕಾಗಿದೆ. ಆದುದರಿಂದ ಅವರು ಈ ಆಡಳಿತದ ವಿಷಯದಲ್ಲಿ ಸರಿಯಾದ ನಿಗಾ ಇಟ್ಟು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅವರ ಗೈರುಹಾಜರಿಯಲ್ಲಿ ಇತರೆ ಮಂತ್ರಿಗಳು ಮನಸ್ಸಿಗೆ ಬಂದ ಹಾಗೆ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಇನ್ನು ಮುಂದೆ ಅವಕಾಶ ಕೊಡದಂತೆ ಅವುಗಳನ್ನು ತಡೆಗಟ್ಟಬೇಕೆಂದು ನಾನು ಹೇಳುತ್ತೇನೆ. ಹಾಗೆ ಮಾಡದಿದ್ದರೆ ದೇಶ ಉಳಿಯುವುದಿಲ್ಲ ಇದನ್ನು ನಾವು ಒಂದು ವೆಲ್‌ಫೇರ್ ಸ್ಟೇಟ್ ಎಂದು ಹೇಳುವುದಕ್ಕಾಗುವುದಿಲ್ಲ. ಇಲ್ಲಿ ರೂಲ್ಸ್ ರೆಗ್ಯುಲೇಷನ್‌ಗಳೊಂದೂ ಕ್ರಮವಾಗಿ ನಡೆಯುತ್ತಿಲ್ಲ. ನಮ್ಮ ರಾಜ್ಯವನ್ನು ವೆಲ್‌ಫೇರ್ ಸ್ಟೇಟ್ ಎಂದು ಕರೆಯುವುದಕ್ಕೆ ಬದಲಾಗಿ ಇದನ್ನು ಫೇಂವೆಲ್ ಸೇಟ್ ಎಂದು ಕರೆಯುವುದೇ ಲೇಸೆಂದು ಕಾಣುತ್ತಿದೆ. ಕಾರಣ

(ಶ್ರೀ ಅಜೀಜ್ ಸೇಟ್)

ಇಲ್ಲಿ ಜನರಿಗೆ ವಿದ್ಯಾ ಸೌಲಭ್ಯವಿಲ್ಲ, ಸರಿಯಾಗಿ ಆಹಾರ ಧಾನ್ಯಗಳು ಸಿಕ್ಕುತ್ತಿಲ್ಲ. ಜನರಿಗೆ ಉದ್ಯೋಗಗಳು ದೊರಕುತ್ತಿಲ್ಲ. ಲಾ ಅಂಡ್ ಆರ್ಡರ್ ಸರಿಯಾಗಿಲ್ಲ. ಈ ದಿವಸ ನಮ್ಮ ಪಾಲಿಟೆಕ್ನಿಕ್ ಟ್ರೈನಿಂಗ್ ಶಾಲೆಯಲ್ಲಿ ಓದಿ ಪಾಸಾದಂಥ ಮೂರೂವರೆ ಸಾವಿರ ಜನರು ಕೆಲಸವಿಲ್ಲದೆ ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದಾರೆ. ಇಷ್ಟಾದಾಗ್ಯೂ ನಮ್ಮ ಸರ್ಕಾರದವರಿಗೆ ಈ ಟ್ರೈನಿಂಗ್ ಶಾಲೆಯನ್ನು ಮುಚ್ಚುವ ಇನ್ನೂ ಮನಸ್ಸು ಬಂದಿಲ್ಲ. ಸಿವಿಲ್ ಇಂಜಿನಿಯರಿಂಗ್ ಪಾಸಾದ ಮೂರುವರೆಸಾವಿರ ಜನ ಉದ್ಯೋಗವಿಲ್ಲದೆ ಅಲೆಯುತ್ತಿದ್ದಾರೆ. ಜನರಿಗೆ ಉದ್ಯೋಗವನ್ನು ಒದಗಿಸು ವುದಕ್ಕೆ ಅವಕಾಶವಿಲ್ಲವೆನ್ನುವಾಗ ಈ ಟ್ರೈನಿಂಗುಗಳಾದರೂ ಏತಕ್ಕಿರಬೇಕು ಎಂದು ಕೇಳುತ್ತೇನೆ? ಈ ಶಾಲೆಗಳನ್ನು ನಡೆಸುವುದರಿಂದ ನಿರುದ್ಯೋಗಿ ಜನರ ಸಂಖ್ಯೆಯನ್ನು ಸರ್ಕಾರದವರು ಹೆಚ್ಚು ಹೆಚ್ಚಾಗಿ ಬೆಳೆಸಿದ ಹಾಗಾಗುತ್ತದೆಯೇ ವಿನಾ ಇದರಿಂದ ರಾಜ್ಯಕ್ಕೆ ಯಾವ ಪ್ರಯೋಜನವೂ ಆಗುವು ದಿಲ್ಲ. ಆದ್ದರಿಂದ ಸರ್ಕಾರದವರು ಈ ವಿಚಾರಕ್ಕೆ ಕೂಡಲೇ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈಗ ನಾನು ಒಂದು ಬಹಳ ನಾಚಿಕೆಗೇಡಾದ ವಿಚಾರವನ್ನು ಹೇಳುವುದಕ್ಕೆ ನನಗೇ ಬಹಳ ನಾಚಿಕೆಯಾಗುತ್ತಿದೆ. ಅದೇನು ಅಂದರೆ—ನನಗೆ ಕನ್ನಡದಲ್ಲಿ ಮಾತನಾಡುವುದಕ್ಕೆ ಚೆನ್ನಾಗಿ ಬರುವು ದಿಲ್ಲ, ಆದಾಗ್ಯೂ ನಾನು ಕನ್ನಡದಲ್ಲೇ ಮಾತನಾಡುತ್ತಿದ್ದೇನೆ. ಆಗಲಾದರೂ ನನ್ನ ಆ ಮಿತ್ರರಿಗೆ ನಾಚಿಕೆಯಾಗಲಿ ಅಂತ. ನಮ್ಮ ರಾಜ್ಯದಲ್ಲಿ ಕನ್ನಡ ಭಾಷೆಯನ್ನು ರಾಜ್ಯಭಾಷೆಯನ್ನಾಗಿ ಮಾಡಿದ್ದು 1961-62ನೆಯ ಸಾಲಿನಲ್ಲಿ. ಅಲ್ಲಿಂದ ಇಲ್ಲಿಯತನಕ ಕನ್ನಡವು ರಾಜ್ಯದ ಅಫಿಷಿಯಲ್ ಲಾಂಗ್ವೇಜ್ ಆಗಿದ್ದರೂ ಇದನ್ನು ಉರ್ದು ಪಾಠಶಾಲೆಗಳಲ್ಲಿ ಕಡ್ಡಾಯ ಭಾಷೆಯನ್ನಾಗಿ ಮಾಡಿರುವುದಿಲ್ಲ. ಹೀಗಾ ದರೆ ಸರ್ಕಾರದಲ್ಲಿ ಇಂಥ ವಿಚಾರಗಳಲ್ಲಿ ಏನಾದರೂ ಒಂದು ರೀತಿ, ನೀತಿ ನೇಮ, ಕಾನೂನು ಇದೆಯೇ ಎನ್ನುವುದೇ ನನಗೆ ಕಂಡುಬರುತ್ತಿಲ್ಲ. ಈ ದಿವಸ ನಮ್ಮ ಉರ್ದು ಭಾಷೆಯನ್ನು ಕಲಿತ ಹುಡುಗರು ಪೋಲೀಸ್ ಟ್ರೈನಿಂಗ್ ಸ್ಕೂಲಿಗೆ ಹೋದರೆ ಅಲ್ಲಿ ಇವರಿಗೆ ಕನ್ನಡ ಬರುವುದಿಲ್ಲ ಎಂದು ಅವರನ್ನು ಅಲ್ಲಿ ಸೇರಿಸಿಕೊಳ್ಳುವುದಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 22 ಲಕ್ಷ ಜನರು ಉರ್ದು ಭಾಷೆಯನ್ನು ಕಲಿತವರಿದ್ದಾರೆ. ಅವರಿಗೆ ಕನ್ನಡವನ್ನು ಕಲಿಯುವುದಕ್ಕೆ ಒಂದು ಒತ್ತಾಯವನ್ನು ಹಾಕದ ಸರ್ಕಾರ ಇದು ಇನ್ನಾವ ಕೆಲಸವನ್ನು ಮಾಡುವುದಕ್ಕೆ ಲಾಯಖ್ಖಾಗಿದೆಯೋ ಅದು ನನಗೆ ಗೊತ್ತಾಗುತ್ತಿಲ್ಲ. ನಮ್ಮ ಉರ್ದು ಪಾಠಶಾಲೆಗಳಲ್ಲಿ ಅಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳಿಗೆ ಇನ್ನು ಮುಂದೆ ನಮ್ಮ ಭಾರತದಲ್ಲಿರತಕ್ಕ ಭಾಷೆಗಳಲ್ಲಿ ಯಾವುದನ್ನಾಗಲೀ ಒಂದನ್ನು ಕನ್ನಡದ ಜೊತೆಗೆ ಅವರು ಕಲಿಯಲೇ ಬೇಕೆಂದು ಒತ್ತಾಯ ಮಾಡಬೇಕಾದ್ದು ಸರ್ಕಾರದ ಕರ್ತವ್ಯ. ಇವರಿಗೆ ಕನ್ನಡದ ಜೊತೆಗೆ ತಮಿ ಳನ್ನು ಕಲಿಸಲಿ, ತೆಲುಗು ಭಾಷೆಯನ್ನು ಕಲಿಸಲಿ, ಹೀಗೆ ಇನ್ನಾವುದಾದರೂ ಭಾಷೆಯನ್ನು ಕಲಿಸಲಿ. ಆದರೆ ಆ ಇಂಗ್ಲೀಷ್ ಭಾಷೆಯನ್ನು ತಪ್ಪಿಸಬೇಕೆಂದು ನಾನು ಹೇಳುತ್ತೇನೆ. ಇದನ್ನು ಸರ್ಕಾರ ದವರು ಮಾಡದಿದ್ದರೆ ಅವರಿಗೂ ಮರ್ಯಾದೆ ಬರುವುದಿಲ್ಲ—ನಮಗೂ ಮರ್ಯಾದೆ ಬರುವುದಿಲ್ಲ.

ಇನ್ನು ಎರಡನೆಯದಾಗಿ ಶೇಷಾದ್ರಿಪುರಂನಲ್ಲಿ ಒಂದು ಸರ್ಕಾರಿ ಉರ್ದು ಮಿಡಲ್ ಸ್ಕೂಲ್ ಇದೆ. ಅದಕ್ಕೆ ಒಂದು ಸರ್ಕಾರಿ ಕಟ್ಟಡವೂ ಇದೆ. ಆಡಳಿತಪಕ್ಷದಲ್ಲಿರತಕ್ಕ ಶ್ರೀಮಾನ್ ಎಂ.ಪಿ.ಎಲ್. ಶಾಸ್ತ್ರಿಗಳು ಏಯಿಡೆಡ್ ಎಜುಕೇಷನ್ ಸೊಸೈಟಿ ಎಂತ ಒಂದು ವಿದ್ಯಾ ಸಂಸ್ಥೆಯನ್ನು ಮಾಡಿ ದ್ದಾರೆ. ಅವರಿಗೆ ಸರ್ಕಾರದವರು ಅವರು ತಮ್ಮ ಪಕ್ಷದಲ್ಲಿ ಇದ್ದಾರೆಂದು ಆ ಉರ್ದು ಕಟ್ಟಡವನ್ನು ಬಾಡಿಗೆಗೆ ಕೊಟ್ಟಿದ್ದಾರೆ. ಅಲ್ಲಿ ಷಿಫ್ಟ್ ಪ್ರಕಾರ ತರಗತಿಗಳು ನಡೆಯುತ್ತಿವೆ. ಬೆಳಗ್ಗೆ ಉರ್ದು ಪಾಠಗಳು, ಮಧ್ಯಾಹ್ನ ಬಾಡಿಗೆದಾರರ ಶಾಲೆಯ ಪಾಠಗಳು ನಡೆಯುತ್ತಿವೆ. ಇದು ಸರ್ಕಾರ ದವರು ಮೈನರ್ ಕಮ್ಯುನಿಟಿಗಳಿಗೆ ತೋರಿಸುತ್ತಿರುವ ರಿಯಾಯಿತಿ. ಇದನ್ನು ಸರ್ಕಾರದವರು ಕೂಡಲೆ ವಿಚಾರ ಮಾಡಿ ಅದನ್ನು ಉರ್ದು ಪಾಠಶಾಲೆಗೆ ಬಿಡಿಸಿಕೊಡಬೇಕೆಂದು ಹೇಳುತ್ತೇನೆ.

ಚೇರ್ಮನ್ ಅವರು.—ಇನ್ನು ಮಾನ್ಯ ಸದಸ್ಯರಿಗೆ ಕೇವಲ ಎರಡು ನಿಮಿಷಗಳು ಮಾತ್ರ ಮಾತ ನಾಡಲು ಅವಕಾಶವಿದೆ. ಏಕೆಂದರೆ, ಅವರ ಪಕ್ಷದ ವಿಫ್ ಅವರಿಗೆ 20 ನಿಮಿಷ ಅವಕಾಶ ಕೊಡ ಬೇಕೆಂದು ಕೇಳಿದ್ದರು. ಅಷ್ಟು ಕಾಲಾವಕಾಶವನ್ನು ಅವರಿಗೆ ಕೊಡಲಾಗಿದೆ. ಅವರಿನ್ನು ಎರಡು ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಅಜೀಜ್ ಸೇಟ್.—ನನಗೇನೂ ಮಾತನಾಡಲೇಬೇಕು ಎಂದು ಅಂಥ ಹಟವೇನೂ ಇಲ್ಲ.

ನಾನಿನ್ನು ಮುಜರಾಯಿ ಇಲಾಖೆಯ ಬಗ್ಗೆ ಒಂದೆರಡು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ವಾಕ್ಫ್ ಬೋರ್ಡನ್ನೂ ಸೇರಿಸಿ ಮುಜರಾಯಿ ಇಲಾಖೆ ಎಂದು ಮಾಡಿದ್ದಾರೆ. ಆ ವಾಕ್ಫ್ ಬೋರ್ಡಿಗೆ ನಮ್ಮ ಹಣಕಾಸಿನ ಉಪಮಂತ್ರಿಗಳಾದ ಶ್ರೀ ಅಬ್ದುಲ್ ಗಾಫರ್ ಅವರು ಛೇರ್ಮನ್ನರು. ಮುಜರಾಯಿ ಇಲಾಖೆಗೆ ನಮ್ಮ ರೆವಿನ್ಯೂ ಮಂತ್ರಿ

ಶ್ರೀ ಬಿ. ರಾಚಯ್ಯನವರು ಛೇರ್ಮನ್ನರು. ಈ ಹಿಂದೆ ಈ ಮುಜರಾಯಿ ಖಾತೆನ ಆಡಳಿತವನ್ನು ಸುಧಾರಣೆ ಮಾಡಲು ಒಂದು ಮುಜರಾಯಿ ಎಂಡೋಮೆಂಟ್ ಕಾನೂನನ್ನು ತರುತ್ತೇವೆಂದು ಹೇಳುತ್ತಿದ್ದರು. ಆದರೆ ಅದಿನ್ನೂ ಆಗಲಿಲ್ಲ. ಈ ದಿವಸ ಆ ಮುಜರಾಯಿ ಇಲಾಖೆ ಕಥೆ ಏನಾಗಿದೆ ಎಂಬುದನ್ನು ಕೇಳಿ, ಹೇಳುತ್ತೇನೆ. 5-10 ಲಕ್ಷ ರೂಪಾಯಿಗಳು ಬೆಲೆ ಬಾಳತಕ್ಕ ಸೋತೇಷ ದರ್ಗ ಎಂತ ಒಂದು ಇದೆ. ಅದು ಮುಜರಾಯಿಗೆ ಸೇರಿತ್ತು. ಅದು ರೆವಿನ್ಯೂ ಅಪೆಲೇಟ್ ಟ್ರಿಬ್ಯುನಲ್ ಮುಂದೆ ಹೋಯಿತು. ಅದರ ಬಗ್ಗೆ ಸಾಕಷ್ಟು ಶ್ರದ್ಧೆಯನ್ನು ಇಲಾಖೆಯವರಾಗಲಿ ವಾಕ್ಫ್ ಬೋರ್ಡಿನವರಾಗಲಿ ವಹಿಸದೆ ಇದ್ದುದರಿಂದ ಅದೀಗ ಒಬ್ಬ ಖಾಸಗೀ ವ್ಯಕ್ತಿಯ ಪಾಲಾಯಿತು. ಹಾಗೇ ನಮ್ಮ ಲಾಲ್‌ಬಾಗ್ ಎದುರಿನಲ್ಲಿ ಅಥಾಉಲ್ಲಾಷ ದರ್ಗ ಎಂದು ಒಂದಿತ್ತು. ಅದೂ ಕೂಡ 4 ಕೋಟಿ ರೂಪಾಯಿಗಳ ಬೆಲೆಯಾಗತಕ್ಕ ಆಸ್ತಿ. ಅದೂ ಮುಜರಾಯಿಗೆ ಸೇರಿದ್ದು. ಅದೂ ಕೂಡ ಈ ದಿವಸ ಖಾಸಗಿಯವರ ಪಾಲಾಯಿತು. ಹೀಗೆ ಸರ್ಕಾರದವರ ಅಶ್ರದ್ಧೆ ಅಜಾಗರೂಕತೆಗಳಿಂದ ಸಾರ್ವಜನಿಕ ಸ್ವತ್ತುಗಳು ದುರುಪಯೋಗವಾಗುತ್ತಿವೆ. ಹೀಗಾಗುತ್ತಿದ್ದರೆ ನಾವೇನು ಇಲ್ಲಿ ಸರ್ಕಾರ ಅಂತ ಒಂದು ಇದೆ ಅನ್ನುವುದಕ್ಕೆ ಸಾಧ್ಯವಿದೆಯೇ ? ಸರಿಯಾಗಿ ರಾಜ್ಯಭಾರ ಮಾಡುವುದಕ್ಕೆ ಇವರಿಗೆ ಶಕ್ತಿ ಇಲ್ಲದಿದ್ದರೆ ಇವರಲ್ಲಿ ಅಂಥ ದಕ್ಷತೆ ಇಲ್ಲದಿದ್ದರೆ ಇವರು ಕೂಡಲೇ ರಾಜೀನಾಮೆ ಕೊಡಲಿ, ಅಲ್ಲಿ ದಕ್ಷರು ಬಂದು ಆಡಳಿತ ನಡೆಸುತ್ತಾರೆ. ಈ ವಾಕ್ಫ್ ಕೇಸುಗಳು ಇನ್ನೂ ಅನೇಕ ಇವೆ. ಅವುಗಳ ಬಗ್ಗೆ 28 ಹಿಯರಿಂಗ್‌ಗಳಾದವು. ಇನ್ನೂ ಕೇಸುಗಳು ತೀರ್ಮಾನವಾಗಿಲ್ಲ. ಬರೀ ಹಿಯರಿಂಗುಗಳು ಮಾತ್ರ ಆಗುತ್ತಿವೆ ಅದಕ್ಕೆ ಜನರು ಹೈದ್ರಾಬಾದ್ ಕರ್ಣಾಟಕ, ಬೊಂಬಾಯಿ ಕರ್ಣಾಟಕ ಅಲ್ಲಿಂದೆಲ್ಲಾ ಬರಬೇಕಾಗಿದೆ. ಅವರಿಗೆ ಬರಿ ಟಿ.ಎ. ಮತ್ತು ಡಿ.ಎ. ಕೊಟ್ಟು ಕೊಟ್ಟೂ ಆ ವಾಕ್ಫ್‌ದಲ್ಲಿದ್ದ ದುಡ್ಡೆಲ್ಲಾ ಹೋಯಿತು. ಆ ವಾಕ್ಫ್‌ಫಂಡಿನಲ್ಲಿ ಈ ದಿವಸ ಒಂದು ಕಾಸೂ ಇಲ್ಲ. ವಾಕ್ಫ್ ಬೋರ್ಡ್ ಛೇರ್ಮನ್ನರೂ ಮತ್ತು ಅಧ್ಯಕ್ಷರು ಮೇಲೆ ಮೇಲೆ ತಿರುಗಾಡುತ್ತಿದ್ದಾರೆ. ಅವರಿಗೆ ಇದರಲ್ಲಿ ಗಂಧವಿಲ್ಲ. ನಾಮಕಾವಾಸ್ತೆ ಅಧ್ಯಕ್ಷರಾಗಿದ್ದಾರೆ. ಇವರು ಈ ಕೆಲಸಕ್ಕೆ ನಾಲಾಯಖ್. ಈ ಸರ್ಕಾರ ಜನರಿಗೆ ಮೋಸಮಾಡುತ್ತಿದೆ. ರಾಜ್ಯವನ್ನು ತೀವ್ರದಲ್ಲಿ ದಿವಾಳಿ ಎಬ್ಬಿಸುತ್ತಾರೆ.

ಇನ್ನು ಕೊನೆಯದಾಗಿ ನಾನು ಒಂದು ವಿಷಯವನ್ನು ಹೇಳಬೇಕಾಗಿದೆ. ನಾವುಗಳ್ಯಾರೂ ನಮ್ಮ ಮೈಸೂರು ರಾಜ್ಯದಲ್ಲಿ ಎಂದೂ ಕೇಳದೆ ಇದ್ದಂಥ ಒಂದು ವಿಷಯ ಏನೆಂದರೆ — ಅದು ಜಾತೀಯತೆಯ ಗಲಭೆಗಳು. ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಸುಮಾರು 5–6 ಕಡೆಗಳಲ್ಲಿ ಈ ಗಲಭೆಗಳು ನಡೆದಿವೆ. ನಾನು ಈ ಸಂದರ್ಭದಲ್ಲಿ ನಮ್ಮ ಸರ್ಕಾರಕ್ಕೆ ತಿಳಿಸುವುದೇನೆಂದರೆ, ನಮಗೂ ತಮ್ಮ ಹಾಗೆ ದೇಶಾಭಿಮಾನ ಇದೆ. ದೇಶವನ್ನು ಶಾಂತಿಯಿಂದ ಉಳಿಸತಕ್ಕ ಅಭಿಮಾನ ಮತ್ತು ಹಕ್ಕು ನಿಮ್ಮಷ್ಟೇ ನಮಗೂ ಇದೆ. ನಿಮಗಿಂತ ಮುಸಲ್ಮಾನರಿಗೇ ಇನ್ನೂ ಹೆಚ್ಚಿನ ಹಕ್ಕಿದೆ ಎಂದು ನಾನು ಹೇಳುತ್ತೇನೆ. ಈ ದಿವಸ ಈ ಜಾತೀಯತೆಯ ವ್ಯಾಜ್ಯಗಳು ಕೇವಲ ಹಿಂದೂ ಮತ್ತು ಮುಸ್ಲಿಮರಿಗೆ ಮಾತ್ರವೇ ನಡೆಯುತ್ತಿಲ್ಲ. ಹಿಂದು ಹಿಂದುಗಳಲ್ಲೂ ವಾಜ್ಯ ನಡೆಯುತ್ತಿದೆ. ನಮ್ಮ ಮೈಸೂರು ಜಿಲ್ಲೆಯಲ್ಲಿ ನಂಜನಗೂಡು ತಾಲ್ಲೂಕಿನಲ್ಲಿ ಪರಿವಾರದ ಜಾತಿ ಎನ್ನುವುದು ಒಂದಿದೆ. ಅದಕ್ಕೂ ಮತ್ತು ರಾಜ್ಯದಲ್ಲಿಯ ಮೇಜರ್ ಕಮ್ಯುನಿಟಿಯೆನಿಸಿದ ಲಿಂಗಾಯಿತರ ಕಮ್ಯೂಟಿಗೂ ಹೊಡೆದಾಟವಾಯಿತು. ಅಲ್ಲಿ ಆ ಮೈನರ್ ಕಮ್ಯುನಿಟಿಯಾದ ಪರಿವಾರದವರಿಗೆ ಯಾರೂ ರಕ್ಷಣೆಯನ್ನು ಕೊಡಲಿಲ್ಲ. ಪೋಲೀಸಿನವರು ಕೂಡ ಮೆಜಾರ್ಟಿ ಕಮ್ಯೂನಿಟಿಯವರ ಕಡೆಗೆ ನಿಂತರು. ಈ ರಾಜ್ಯದಲ್ಲಿ ಬಡವರಿಗೆ ರಕ್ಷಣೆಯಿಲ್ಲ. ಈ ಒಂದು ಕೆಟ್ಟ ಕಳಂಕ ತಪ್ಪದ ವಿನಾ ನಮ್ಮ ರಾಜ್ಯದಲ್ಲಿ ಶಾಂತಿ ನೆಲೆಸುವುದಕ್ಕೆ ಸಾಧ್ಯವಿಲ್ಲ. ನಮ್ಮಲ್ಲಿ ಸೌಜನ್ಯ ಇರಬೇಕು, ನಾವು ಭೇದಭಾವ ಮಾಡಬಾರದೆಂಬುದಾಗಿ ಹೇಳುತ್ತಾರೆ. ಆದರೆ ಅದನ್ನು ಅವರೇ ತಿಳಿದುಕೊಂಡಿಲ್ಲ. ಎಲ್ಲಿಯವರೆಗೆ ನಮ್ಮ ದೇಶದಲ್ಲಿ ಪೋಲೀಸಿನವರು ನ್ಯಾಯವಾಗಿ ಕೆಲಸ ಮಾಡುವುದಿಲ್ಲವೋ ಅಲ್ಲಿಯವರೆಗೆ ಒಳ್ಳೆಯ ರೀತಿಯಲ್ಲಿ ಯಾರಿಗೂ ರಕ್ಷಣೆ ಇರುವುದಿಲ್ಲ. ಯಾರಿಗೂ ಇವರ ಲಾ ಅಂಡ್ ಆರ್ಡರ್ ಬಗ್ಗೆ ಹೆದರಿಕೆ ಇರುವುದಿಲ್ಲ. ಲಾ ಅಂಡ್ ಆರ್ಡರ್‌ಗೆ ಬೆಲೆಯೇ ಇಲ್ಲದಂತಾಗಿ ಜನಗಳು ಅವರ ಒಂದು ಇಚ್ಛೆಯಂತೆ ಎಲ್ಲಾ ಕಾಯಿದೆಗಳನ್ನು ತೆಗೆದುಕೊಂಡು ತಿರುಗಾಡುವ ಪರಿಸ್ಥಿತಿ ಮುಂದೆ ಬರುತ್ತದೆ. ಆದ್ದರಿಂದ ಇವತ್ತು ಸರ್ಕಾರ ಸರಿಯಾಗಿ ಆಡಳಿತವನ್ನು ನಡೆಸಬೇಕಾಗಿದೆ. ಈಗ ಮಾನ್ಯ ಶ್ರೀ ಆರ್. ಎಂ. ಪಾಟೀಲ್ ಅವರೇ ಪುನಃ ಗೃಹಮಂತ್ರಿಗಳ ಚಾರ್ಜನ್ನು ತೆಗೆದುಕೊಂಡಿದ್ದಾರೆ. ನಮಗೆ ನಿಜವಾಗಿ ಸಂಪೂರ್ಣ ಭರವಸೆ ಇದೆ. ಹಿಂದೆ ಮಾನ್ಯ ಶ್ರೀ ರಾಮರಾವ್ ಅವರ ಕಾಲದಲ್ಲಿ ಏನೇನು ತಪ್ಪುಗಳಾಗಿವೆಯೋ ಅವನ್ನೆಲ್ಲಾ ಇವರು ಸರಿಪಡಿಸುತ್ತಾರೆಂದು ನಾನು ನಂಬಿಕೊಂಡಿದ್ದೇನೆ.

ಕೊನೆಯಲ್ಲಿ ಎಕ್ಸೈಜ್ ವಿಷಯ ಒಂದಿದೆ. ಅದರ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಸರ್ಕಾರಕ್ಕೆ ಆದಾಯ ಮಾಡುವುದಕ್ಕಾಗಿ ಈ ಪ್ರೊಹಿಬಿಷನ್ನನ್ನು ತೆಗೆದುಹಾಕಿದರು. ಆದರೆ ಮಾನ್ಯ ಶ್ರೀ ಬಿ. ರಾಚಯ್ಯನವರು ತಮ್ಮ ಕ್ಷೇತ್ರವಾದ ಚಾಮರಾಜನಗರ ತಾಲ್ಲೂಕಿನಲ್ಲಿ ಪ್ರೊಹಿಬಿಷನ್ ತೆಗೆಯುವುದು ಬೇಡವೆಂದು ಹೇಳಿದರು. ಮಾನ್ಯ ಶ್ರೀ ಜತ್ತಿಯವರೂ ಸಹ ಅವರ ಕ್ಷೇತ್ರವಾದ

(ಶ್ರೀ ಅಜೀಜ್ ಸೇಟ್)

ಜಮುಖಂಡಿಯಲ್ಲಿಯೂ ಪ್ರೊಹಿಬಿಷನ್ ತೆಗೆಯುವುದು ಬೇಡವೆಂದು ಹೇಳಿದರು. ಒಟ್ಟಿನಲ್ಲಿ ಸರ್ಕಾರಕ್ಕೆ ಬೇಕಾದಷ್ಟು ರೆವಿನ್ಯೂ ಆದಾಯ ಜಾಸ್ತಿ ಆಯಿತು. ನಮ್ಮ ಮೈಸೂರು ಸಿಟಿಯಲ್ಲಿ ಶಾಲೆಗಳ ಪಕ್ಕದಲ್ಲಿಯೇ ಟಾಡಿ ಷಾಪ್, ಮೈಸೂರು ಬ್ಯಾಂಕ್ ಮೆಯಿನ್ ರೋಡ್‌ನಲ್ಲಿಯೇ ಟಾಡಿ ಷಾಪ್‌ಗಳಿವೆ. ಯಾರು ಬೇಕಾದರೂ ಹೋಗಿ ನೋಡಬಹುದು. ಇವರ ಒಂದು ಆರ್ಡರನ್ನು ಜಾರಿ ಮಾಡುವಾಗ ಅದಕ್ಕೆಬೇಕಾದಂಥ ನೇಮ, ನೀತಿ, ಯೋಜನೆ ಮತ್ತು ನಿಯಮ ಯಾವುದೂ ಇವರಿಗೆ ಬೇಡವೇ ? ಮೈಸೂರಿನಲ್ಲಿ ಹೆಂಡ, ಸಾರಾಯಿಗಳ ಬಗ್ಗೆ ಪ್ರೊಹಿಬಿಷನ್ನನ್ನು ತೆಗೆದಾಗ ಬಾಜಾಭಜಂತ್ರಿ, ಹೂವಿನ ಹಾರಗಳ ಸಮರ್ಪಣೆ, ಮೋಟಾರ್ ಕಾರಿನಲ್ಲಿಯೇ ಹೆಂಡದ ಪಿಪಾಯಿಗಳ ಮಾರಾಟ ಮಾಡಿದರು — ಇವೆಲ್ಲವನ್ನೂ ನಡೆಸಿದರು. ಮೆಯಿನ್ ರೋಡ್‌ಗಳಲ್ಲಿ ಈ ಅಂಗಡಿಗಳನ್ನು ತೆರೆದಿರುವುದನ್ನು ಕೂಡಲೇ ಇವರು ತಪ್ಪಿಸಬೇಕು. ಎಕ್ಸೈಜ್ ಮಂತ್ರಿಗಳಿಗೆ ನಾನು ಈಗ ಹೇಳುವುದೇನೆಂದರೆ, ಎಕ್ಸೈಜು ಆಕ್ಟ್ ಪ್ರಕಾರ ಇದನ್ನು ನಡೆಸಲಿ. ಇವು ಎಲ್ಲೆಲ್ಲಿ ಇರಬೇಕೆಂದು ಆಕ್ಟ್‌ನಲ್ಲಿ ನಮೂದು ಮಾಡಿದ್ದಾರೋ ಅಂತಹ ಕಡೆಗಳಲ್ಲಿ ಮಾತ್ರ ಇವು ಇರಬೇಕು. ಬೇರೆ ಕಡೆಗಳಲ್ಲಿರತಕ್ಕದ್ದನ್ನು ಕೂಡಲೇ ತೆಗೆಯಬೇಕು. ಒಟ್ಟಿನಲ್ಲಿ ಈಗ ಶಾಲೆಗಳ ಹತ್ತಿರ, ಆಸ್ಪತ್ರೆಗಳ ಹತ್ತಿರ, ಹಾಗೂ ಮೆಯಿನ್ ರೋಡ್‌ಗಳ ಹತ್ತಿರ ಟಾಡಿ ಮತ್ತು ಅರೆಕ್ ಷಾಪ್ಸನ್ನು ಪ್ರಾರಂಭಿಸಿರುವುದನ್ನು ಕೂಡಲೇ ತೆಗೆಯಬೇಕೆಂದು ಹೇಳಿ, ನನಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† Sri H. C. LINGA REDDY.—Sir, it is with great pleasure, I welcome the budget proposals that have been placed before the House by the Hon'ble Minister for Finance. Not only it is a surplus budget, it is a tax free budget also. He deserves our congratualations. The Budget proposals that have been placed before the House are characterised by courage, dynamism, and far-sighted vision. These proposals are going to build up a very properous welfare State. Inspite of these things, it is very unfortunate that many members of the opposition side did not have a good word to say. I am afraid there was more heat than light in the destructive criticism that some of the Hon'ble members made. Enhanced provision has been made in various items of expenditure for the building activities in several Departments. Another happy feature of this budget is, the long felt demand of the State employees has been met to the extent of 8 crores. This benefit is not merely extended to the employees, but it is also extended to those who served the State. Several States have come forward with deficit budgets. Even the Central Government has come forward with a greater deficit of as much as 300 crores. It is really a happy augury that our State finance position is so sound. So far as the debt position of the State is concerned, it has gone up to about 342 crores. But there are assets that have been built up to the extent of 450 crores. It is the State that does work. It is the officer or the Mininster who does work. While doing so, they may commit some mistakes. These mistakes might have been committed knowingly or unknowingly or due to local grievances. I am sure there may be local grievances. But these have to be discussed and we have to solve these problems. Much money has been invested on Sharavathi Project and it is this great venture of the Sharavathi Project which will be the milestone in the march of Mysore to its prosperity. From the cheap power that is made available from this project, we are going to revolutionise our agriculture and also our industries. It is very happy indeed that our Finance Minister and the Chief Minister have been

requesting the outsiders, in addition to encouraging those who are in the State, to come forward and make use of these facilities like cheap power, land, water etc. that are made available. Mysore is a pioneer State in its industrial development. Sir M. Visveswarish said "industrialise or perish." With this advice in view, our State plans are being put forward. Our State Government has been launching several industrial project. These projects are being lanched not only by the State entrepreneurs but also by the outsiders who have been requested to come and invest their moneys. Several expansion schemes in several State Undertakings have been taken up. The Government of India has already started some industries and of late there is a good deal of improvement with regard to starting of Sugar Factories, Copper development in the State, starting of cement factories in the State and several developmental activities in the industrial field. With the appointment of industrial Commissioner and the Cost Expert, I am sure, the State will be making much head way with regard to industrial development. But in this connection, I should like to mention that the industries shonld not be concentracted in the City areas. These industries should be shifted from Bangalore and Mysore to other places also like District Headquarters, Taluk Headquarters and in many villages. By doing so, we will be able to remove pressure on land in Cities and we will be able to bring the rural people to the industrial field to a great extent. In this connection, I would like to mention here that we are able to get Bharat Earth Movers Factory which has been started at K.G.F. We must be thankful to the Government of India. But unfortunately Mysoreans do not have a good number of places there. It is very necessary that our Government should approach the Central Government and see that as many Mysoreans as possible are encouraged in this Bharath Earth Movers Factory.

The Mangalore Harbour Project is another great mile-stone in the development of Mysore's prosperity as soon as this project is completed. Now, the progress of Mysore is rather slow. They have spent only 6·5 crores on a project of 24 crores and odd. It is very necessary that the pace of progress of this project should be expedited and the Government also should take sufficient steps to develop our minor ports. In addition to these projects, the Mangalore Fertiliser factory which has been started—I think the green signal has also been given to start that factory under the private sector should come up as soon as possible, because our agricultural sector is in great need of fertilisers. Your own goodself were kind enough to sponser a resolution for the manufacture of ammonia and nitrogeneous fertilisers and making it available in sufficient quantities at cheaper rates to the agriculturists and I am sure this will step up our agricultural production also. Then there is the "Intensive Agricultural District programme". This programme is confined to Mandya only. I wish that this could be extended to Shimoga, Mangalore and Karwar Districts also. I am glad to see that the Agricultural Re-finance Corporation has been made use of for development of agriculture in the Tungabhadra area, of Raichur and Bellary side also. But in addition to that it is necessary that we

(SRI H. C. LINGA REDDY)

should have this programme extended to the rich paddy growing areas in Karwar, Mangalore and Shimoga districts. The Intensive Cultivation Area Programme has been brought under practice in only about 10 districts. It is necessary that it should be extended to the other remaining 9 districts also, as early as possible.

The Tractor progrmme is again another one. It is very slow in the State. Only about 99 tractors have been distributed by the Department amongst the agriculturists during last year. I do not know how many they are going to make available during this year. But there are various handicaps for the agriculturists to make use of or purchase the tractors. While purchasing the tractors the ryot has to pay a stamp duty of 4 to 5 thousand rupees. It is necessary that the ryot population should be exempted from this heavy levy of stamp duty. Then again, with regard to repairs to these tractors, sufficient facilities are not available. The purchasers of tractors have to come all the way to Bangalore and they will have to be at the mercy of the Ferguson Co., and other companies, which will be otherwise engaged and they would not be in a position to cater to the service needs of these tractors and bull-dozers. Therefore, what I mean is that sufficient number of workshops and common facility centres should be started, at the earliest, atleast one in each district headquarters, though not in taluk headquarters. The ryot who purchases a tractor, purchases it with so much of trouble and after it is purchased with such great difficulty he is not able to make use of it for long. Within six months or one year, he sells it away for a cheaper rate. Therefore, the purchase of tractors should be facilitated.

Coming to the Minor Irrigation Sir, I am affraid, that though this is a very important and major item, sufficient funds are not made available for this, during 1967-68. According to the review of the working of the Government Departments, it is proposed to incur an expenditure of 415 lakhs during the current year which is expected to create a total irrigation potential of 67,300 acres comprising of 44,730 acres of fresh irrigation and 22,570 acres of stabiliation. For the next year, *i.e.* 1968-69, a provision has been made for Rs. 400 lakhs. Compared to the last year, this year it is readuced to 400 lakhs. Minor Irrigation is very important. It consists of the Tank programme and the Well programme. Of course, for well programme, I am glad the Government is very liberal. Hon'ble the Minister for Development and Co-operation was saying that "In each district they are going to have a branch of the State Central Development Bank." The ryots will be in a position to get a loan. I am sure the irrigation programmes and the well programme will have sufficient tempo hereafter, if not so for. With regard to tank programme, I am sure, we are moving at a very slow speeed and we have to make available sufficient funds for this. There are as many as 41,000 tanks and 16,000 tanks, out of them, come under the Taluk Development Board and Taluk Development Boards do not

have sufficient funds. Hon'ble the Finance Minister has said in his Budget Speech that only those works that are taken up under the Tank programme will be completed. This is not sufficient. We will have to take up the repair works, for restoration of wells and tanks for the construction of these tanks and have minor repairs effected, like the channel repair and other small repairs of tanks. If moneys are not made available it is something like having a cow, but not having a pot to milk the cow and our tanks are not in good condition at present. We have to repair a number of tanks under the Minor Irrigation programme, many new tanks have to be taken up. Our irrigation is only about 9.2 per cent while in Madras and Andhra it is 40 per cent and 25 per cent respectively. When are we going to reach that level? It is therefore very necessary that when huge funds have been made available under several items in the State, for this tank programme also we should make available sufficient funds. Under the second and third plan and in the first plan, we were in a position to take up any number of works of repairs, restoration and new atchkat tanks also. But now in the third plan period if sufficient funds are not made available, I think our irrigation programme will be very slow and we cannot step up our food production at all. No doubt, Government have been saying that they are spending heavy sums under Major and Medium Irrigation programmes. But even there, funds are not sufficiently made available for taking up those schemes also. In this connection, I would like to mention Sir, that just as in the case of Irrigation Wells, Pump-sets etc., Government are raising debenture loans and even here we have to build up an Irrigation Development Corporation and call for sufficient funds. When people are coming forward, when banks are coming forward, when societies are coming forward, when donors and investors are coming forward, if debentures are raised under well irrigation programme or pumpset irrigation programme, and if irrigation development Corporation were to raise sufficient debentures, I am sure, a fund can be built up when we will be in a position to allot sufficient funds for taking up these minor irrigation works, medium and major irrigation programmes also which are so important in our State because agriculture and irrigation are so connected with each other that unless we set apart sufficient funds for these programmes, we will not be in a position to step up our production and make the State self-sufficient during 1969-70 as is intended under these budget proposals.

3-30 P.M.

I would like to say one thing with regard to education. I am glad that the Government are spending very heavy sums under education, but of late, unemployment problem is rampant. It is becoming accentuated. There are 16 Engineering Colleges and 29 polytechnics. The number of diploma holders and engineering graduates is increasing every year. Without making sufficient provision for appointments of these engineers we have been having heavy admissions to these polytechnics

(SRI H. C. LINGA REDDY)

and engineering colleges. I hear the Government of India have issued some instructions for the reduction in admissions from next year. It is necessary that our Government also should take some action with regard to the reduction of these admissions because we should have sufficient degree-holders and diploma-holders just to meet our needs and not more. For these graduates and diploma holders what is it that we should do ? It is necessary that we should have some social security scheme so that we may provide these people with some employment or we may provide for some unemployment insurance. We have been hearing of social security scheme in the centre for some time for those in the services and for those who are retrenehed, but here when we have so many engineers, degree-holders and diploma-holders who come out of the portals of the University, unless we do something for their living, I do not know where they should go. It is necessary from that point of view to make provision for them.

Coming to Taluk Boards, Village panchayets and Zilla Parishads, I am afraid the present Village Panchayets and Taluk Boards Act has outlived its purpose. It is nearly 8 to 10 years ago that we had elections and these Taluk Development Boards and District Development Councils are bodies without life at present. They have no funds. The block staff, the block development officer and extension officers, grams sevaks and multipurpose officers and officials are nither responeible to parent department nor to themselves. They are wasting their time at present. It is necessary that elections should be expedited and these people given sufficient work so that they may have sufficient enthusiasm to carry out their allotted duties. It is necessary that we should prepare an integrated development programme so that we may have a minimum programme for each village, drinking water, road, branch of a society and so on so that all-round development programme for each village we should think of and then make available sufficient for rural sector. With these few words, I welcome the budget proposals.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಸಭಾಪತಿಗಳೇ, ಈ ದಿವಸ ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕ 1968--69ನೇ ಸಾಲಿನ ಆಯವ್ಯಯ ಪತ್ರವನ್ನು ನೋಡಿದರೆ ಮರಳುಗಾಡಿನಲ್ಲಿ ನೀರನ್ನು ಹುಡಿಕಿದಂತೆ ಕಾಣುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು 26,377 ಗ್ರಾಮಗಳು ಮತ್ತು ಹಳ್ಳಿಗಳಿವೆ. ಈ ಪ್ರದೇಶಗಳಲ್ಲಿ ವಾಸಮಾಡುತ್ತಿರುವ ಜನತೆಗೆ ಕುಡಿಯುವ ನೀರು, ಅನ್ನ, ಬಟ್ಟೆ ಮತ್ತು ವಸತಿಗಳನ್ನು ಒದಗಿಸಿಕೊಡುವ ಬಗ್ಗೆ ಮತ್ತು ಅವರ ನಿತ್ಯಕಸಬಾದ ವ್ಯವಸಾಯಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ತಮ್ಮ ಭಾಷಣದಲ್ಲಿ ಏನನ್ನೂ ಹೇಳದಿರುವುದು ಅಥವಾ ಆ ಬಗ್ಗೆ ಅನುಕಂಪವನ್ನಾದರೂ ತೋರಿಸದಿರುವುದು ದುಃಖಕರವಾದ ಸಂಗತಿಯಾಗಿದೆ. ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಜೈಕಿಸಾನ್ ಎಂದು ಹೇಳಿದರು. ಹಳ್ಳಿಗಾಡಿನ ಜನರ ಅಭ್ಯುದಯವೇ ಈ ರಾಜ್ಯದ ಅಭ್ಯುದಯವಾದ್ದರಿಂದ ಅವರ ಶ್ರೇಯಸ್ಸಿಗಾಗಿ ಎಲ್ಲಾ ಅನುಕೂಲಗಳನ್ನು ಒದಗಿಸಿಕೊಡಬೇಕೆಂದು ಒತ್ತಿ ಒತ್ತಿ ಹೇಳಿದರು. ನಮ್ಮ ಹಣಕಾಸಿನ ಸಚಿವರು ಇಂಗ್ಲೆಂಡ್, ಅಮೇರಿಕಾ ಮುಂತಾದ ಪಾಶ್ಚಾತ್ಯ ದೇಶಗಳಿಗೆ ಭೇಟಿ ಕೊಟ್ಟು ಸುಮಾರು 38—40 ಸಾವಿರ ರೂಪಾಯಿಗಳಷ್ಟು ಖರ್ಚು ಮಾಡಿಕೊಂಡು ಬಂದರು. ಆದರೆ ಆ ದೇಶದ ರೈತರಿಗೆ ಅಲ್ಲಿಯ ಸರ್ಕಾರ ಸೌಲಭ್ಯವನ್ನು ಒದಗಿಸದಿದ್ದಾರೆಂದು ನೋಡಿ ಬಂದ ಸಚಿವರ ಮನಸ್ಸು ಗ್ರಾಮಾಂತರ ಪ್ರದೇಶಗಳ ಕಡೆ ಹರಿದಂತೆ

ಕಾಣಲಿಲ್ಲ. ಕೇವಲ ಅವ್ಯವಸ್ಥೆಯಾದಂಥ ಬಡ್ಜೆಟ್‌ನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಈ ಬಜೆಟ್‌ನಲ್ಲಿ ಹುರುಳಿಲ್ಲ, ತಿರುಳಿಲ್ಲವೆಂದು ಹೇಳುತ್ತೇನೆ. 100ಕ್ಕೆ 81 ಜನ ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಈ ದೇಶಕ್ಕಾಗಿ ದುಡಿಯುತ್ತಿರುವವರು ಈ ಹಳ್ಳಿಗಾಡಿನ ಜನವೇ. ಆದರೆ ನಮ್ಮ ಆರ್ಥಿಕ ಮಂತ್ರಿಗಳು ಇವರ ಅಭ್ಯುದಯಕ್ಕಾಗಿ, ಶ್ರೇಯಸ್ಸಿಗಾಗಿ ಮತ್ತು ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಯಾವ ಒಂದು ಕರುಣೆಯನ್ನೂ ತೋರಿಸಿಲ್ಲ. ಚುನಾವಣೆಯ ಸಮಯದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಮಂತ್ರಿವರ್ಯರು ಹೋಗಿ ನಿಮ್ಮನ್ನು ಇಂದ್ರ ಚಂದ್ರರನ್ನಾಗಿ ಮಾಡುತ್ತೇವೆಂದು ಇಲ್ಲಸಲ್ಲದ ಭರವಸೆಗಳನ್ನು ಕೊಟ್ಟು ಗೆದ್ದು ಬರುತ್ತಾರೆ. ಆ ರೀತಿ ಕೊಟ್ಟ ವಚನಗಳನ್ನು ಚುಣಾವಣೆಯ ನಂತರ ಮರೆತು ವಚನಭ್ರಷ್ಟತನ ತೋರಿಸಿದ್ದಾರೆ. ಈ ರಾಜ್ಯದಲ್ಲಿ ರೈತರ ಹೆಸರು ಹೇಳಿಕೊಂಡು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ಲಾಭವನ್ನು 1000ಕ್ಕೆ ಒಬ್ಬನು ಪಡೆಯುತ್ತಿದ್ದಾನೆಂದು ಹೇಳಬಹುದು. ಕೆಲವರು ರೈತರ ಹೆಸರಿನಲ್ಲಿ ಸಹಕಾರ ಸಂಘಗಳನ್ನು ಪ್ರಾರಂಭ ಮಾಡಿ ದೊಡ್ಡ ದೊಡ್ಡ ಬಂಡವಾಳಶಾಹಿಗಳಾಗುತ್ತಿದ್ದಾರೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿಯೂ ಸಹ ಈ ರೀತಿಯ ಸಹಕಾರ ಸಂಘಗಳಿವೆ. ಕಳೆದ 6 ವರ್ಷಗಳಿಂದ ಸರ್ಕಾರದವರು ನಿಗದಿ ಮಾಡಿರುವ ನಾಲೆಯಲ್ಲಿ ರಾಸಾಯನಿಕ ಗೊಬ್ಬರಗಳು ರೈತರಿಗೆ ಈ ಸಹಕಾರ ಸಂಘಗಳಿಂದ ಸಿಗುತ್ತಿಲ್ಲ. ಸಾಂದ್ರ ಬೇಸಾಯ ಪದ್ಧತಿಯನ್ನು ಮಾತ್ರ ನಮ್ಮ ಜಿಲ್ಲೆಯಲ್ಲಿ ಜಾರಿಗೆ ತಂದಿದ್ದಾರೆ. ರೈತರಿಗೆ ಅವಶ್ಯಕವಾಗಿ ಬೇಕಾಗುವ ಯಾವ ಒಂದು ಉಪಕರಣವನ್ನಾಗಲೀ, ಟ್ರ್ಯಾಕ್ಟರ್‌ಗಳನ್ನಾಗಲೀ, ಬುಲುಡೋಜರ್‌ಗಳನ್ನಾಗಲೀ ಈ ಸಹಕಾರ ಸಂಘದವರು ಒದಗಿಸುತ್ತಿಲ್ಲ. ಇವೆಲ್ಲವನ್ನು ಕಾಲಕ್ಕೆ ಸರಿಯಾಗಿ ಒದಗಿಸದಿದ್ದ ಮೇಲೆ ಸಾಂದ್ರ ಬೇಸಾಯ ಪದ್ಧತಿಯನ್ನಾದರೂ ಹಿತಕ್ಕೆ ಜಾರಿಗೆ ತರಬೇಕು. ಯಾರಿಂದ ದೇಶದ ಅನ್ನ ಸಮಸ್ಯೆ ನೀಗುತ್ತದೋ, ಯಾರಿಂದ ದೇಶದ ಅಭ್ಯುದಯವಾಗುತ್ತದೋ ಅಂತಹವರ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಗಮನ ಕೊಟ್ಟಿಲ್ಲ. ರೈತರಿಂದಲೇ ಈ ದೇಶದಲ್ಲಿ ಅಭ್ಯುದಯ ಸಾಧನೆಯಾಗಬೇಕಾಗಿದೆಯೆಂದು ಮಂತ್ರಿಗಳು ಭಾಷಣ ಮಾಡುತ್ತಾರೆ. ಆದರೆ ಕಾರ್ಯತಃ ಏನೂ ಮಾಡುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಕಳೆದ 21 ವರ್ಷಗಳಿಂದ ಏನೇನು ಸಾಧನೆ ಮಾಡಿದ್ದೇವೆ ಎಂಬುದು ಅಂಕಿಅಂಶಗಳಿಂದ ವ್ಯಕ್ತವಾಗುತ್ತಿದೆ. ಈ ಅಂಕಿಅಂಶಗಳನ್ನು ನೋಡಿದರೆ ಕಣ್ಣಲ್ಲಿ ನೀರು ಬರುವುದಿಲ್ಲ, ರಕ್ತ ಬರುತ್ತದೆ. ಹೆಚ್ಚಿನ ತೆರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಜನರ ಮೇಲೆ ಬೀಳುತ್ತಿದೆಯೇ ಹೊರತು ನಗರಗಳಲ್ಲಿ ವಾಸ ಮಾಡುತ್ತಿರುವ ನಾಗರೀಕರ ಮೇಲೆ ಬೀಳುತ್ತಿಲ್ಲ. ನೆನ್ನೆ ದಿವಸ ಮಾನ್ಯ ರೆವಿನ್ಯೂ ಸಚಿವರು ಮಾತನಾಡುತ್ತಾ ಹೇಳಿದರು. ತೆರಿಗೆಯನ್ನು ಸಿಟಿಗಳಲ್ಲಿರತಕ್ಕಂಥ ಜನರೇ ಹೆಚ್ಚು ಕೊಡುತ್ತಿದ್ದಾರೆಂದು. ನನ್ನ ಅನುಭವದಲ್ಲಿ ಒಂದು ಉದಾಹರಣೆಯನ್ನು ಹೇಳುತ್ತೇನೆ. 1958—59ರಲ್ಲಿ ಸರ್ಕಾರದವರು ಟರ್ನ್ ಓವರ್ ಟ್ಯಾಕ್ಸ್‌ನ್ನು ಹಾಕಿದರು. ಇದಕ್ಕೆ ಮೊದಲು ವರ್ತಕರು ಒಂದು ಮೂಟೆ ಜೋಳ, ಅಕ್ಕಿ, ಅಥವಾ ರಾಗಿಗೆ ಮಾರಾಟ ಮಾಡುವ ಸಮಯದಲ್ಲಿ 12ಆಣೆಯಿಂದ ಒಂದೂವರೆ ರೂಪಾಯಿನವರೆಗೆ ಕಮಿಷನ್ ಪಡೆಯುತ್ತಿದ್ದರು. ಟರ್ನ್ ಓವರ್ ಟ್ಯಾಕ್ಸ್ ಹಾಕಿದ ಮೇಲೆ ವರ್ತಕರು ಒಂದು ಮೂಟೆಗೆ ನಾಲ್ಕು ರೂಪಾಯಿ ಕಮೀಷನ್ ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದರು. ಒಂದೂವರೆ ರೂಪಾಯಿಗಳನ್ನು ಸರ್ಕಾರಕ್ಕೆ ಕೊಟ್ಟು ಎರಡೂವರೆ ರೂಪಾಯಿಗಳನ್ನು ತಾವು ಲಾಭದ ರೂಪದಲ್ಲಿ ಪಡೆಯುವುದಕ್ಕೆ ಪ್ರಾರಂಭ ಮಾಡಿದರು. ಈ ಟ್ಯಾಕ್ಸ್‌ನ್ನು ಯಾರು ಕೊಡುತ್ತಿದ್ದಾರೆಂಬುದನ್ನು ಮಾನ್ಯ ಸಚಿವರು ಮರೆತಂತೆ ಕಾಣುತ್ತದೆ. ಇದಕ್ಕಿಂತಲೂ ಅವ್ಯವಸ್ಥೆಯ ಆಡಳಿತ ಬೇರೆ ಇನ್ನೊಂದು ಇಲ್ಲವೆಂದು ಒತ್ತಿ ಹೇಳುತ್ತಿದ್ದೇನೆ. ಈಗ ಹಾಕತಕ್ಕ ಪ್ರತಿಯೊಂದು ಟ್ಯಾಕ್ಸ್ ಕೂಡ ಸಾಮಾನ್ಯ ಬಳಕೆದಾರರಾದ ಜನರ ಮೇಲೆ ಬೀಳುತ್ತದೆ. ಯಾವ ಒಬ್ಬ ವ್ಯಾಪಾರಸ್ಥನೂ ತನ್ನ ಕೈಯಿಂದ ಅದನ್ನು ಕೊಡುತ್ತಿಲ್ಲ. ಸರ್ಕಾರ ಕೇವಲ ಒಂದು ಪರಸೆಂಟ್ ಹಾಕಿದರೂ ಈ ವರ್ತಕರು ನಾಲ್ಕು ಪರ್‌ಸೆಂಟ್ ಜಾಸ್ತಿ ಮಾಡಿ ಅದನ್ನು ಜನರ ಮೇಲೆ ಹಾಕುತ್ತಿದ್ದಾರೆ. ಆ ರೀತಿಯಿಂದ ಇಂದು ರಾಜ್ಯದಲ್ಲಿ ಈ ಬಂಡವಾಳಗಾರರು ನಿಷ್ಕರುಣಿಗಳಾಗಿ, ಒಂದು, ಎರಡು, ಮೂರು ಲಕ್ಷ ರೂಪಾಯಿಗಳ ಮನೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಹಾಗೆ ನಮ್ಮ ರಾಜ್ಯದಲ್ಲಿ 27 ಸಾವಿರ ಗ್ರಾಮಗಳ ಜನರು ಯಾವ ಉನ್ನತ ಮಟ್ಟದ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂಬುದನ್ನು ಮಾನ್ಯ ಸಚಿವರು ನೋಡಲಿ. ನಮ್ಮ ಮಂತ್ರಿಯವರಿಗೆ ಧೈರ್ಯವಿದ್ದರೆ, ಗ್ರಾಮಾಂತರಗಳಲ್ಲಿ ಬಂದು ನೋಡಬೇಕು. ಅವರಿಗೆ ಅನುಕಂಪ ಇದ್ದರೆ, ಇದನ್ನೆಲ್ಲಾ ಕಿವಿಯಲ್ಲಿ ಕೇಳಲಿ, ಕಣ್ಣಲಿ ನೋಡಲಿ ಎಷ್ಟೋ ಗ್ರಾಮಗಳಲ್ಲಿ ನೀರಿಲ್ಲದೆ, ಜನರು ತಿಂಗಳಲ್ಲಿ ಒಂದು ಸಾರಿ ಸ್ನಾನವನ್ನು ಮಾಡುವುದನ್ನು ಮಾನ್ಯ ಸಚಿವರು ನೋಡಲಿ. ಒಂದು ಸಾರಿ ಹೊಲಿಸಿಕೊಂಡ ಬಟ್ಟೆ ಕೇವಲ ಆರು ತಿಂಗಳವರೆಗೂ ನೀರಿಗೆ ಹಾಕುವ ಪರಿಸ್ಥಿತಿ ಇಲ್ಲ. ಅಲ್ಲಿನ ಜನರು ಎಷ್ಟು ಕಂಗೆಟ್ಟಿದ್ದಾರೆ ಎಂಬುದು ತಿಳಿಯುತ್ತದೆ. ಇದರಿಂದ ಸ್ವಾತಂತ್ರ್ಯ ಬಂದು 20 ವರ್ಷದ ಆಡಳಿತದಲ್ಲಿ ಆಡಳಿತ ಪಕ್ಷವೂ ಈ ಜನತೆಯ ಬವಣೆಯನ್ನು, ನಿವಾರಣೆ ಮಾಡುವ ಯೋಜನೆಯನ್ನು ಹಾಕಿಲ್ಲವೆಂದು ಹೇಳಬೇಕಾಗಿದೆ. ಇನ್ನು ಹೌಸಿಂಗ್ ಕಾರ್ಪೊರೇಷನ್

(ಶ್ರೀ ಬಿ. ದೊಡ್ಡಬೋರೇಗೌಡ)

ಮಾಡಿ ನಗರದಲ್ಲಿ ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ ಹೊರಟಿದ್ದಾರೆ; ವಿನಹ ಯಾವ ಗ್ರಾಮಾಂತರ ಪ್ರದೇಶಗಳಲ್ಲಿಯೂ ಸಾಮಾನ್ಯ ಜನರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆಯಾ ಎಂದು ನೋಡಿದರೆ ಕೊಟ್ಟಿಲ್ಲವೆಂದು ಎಲ್ಲೂ ಹೇಳಬೇಕಾಗಿದೆ. ಯಾವ ಗ್ರಾಮದಲ್ಲೇ ಆಗಲಿ, ಯಾವ ಮನೆಯನ್ನು ಮಾಡಿಕೊಟ್ಟಿಲ್ಲ. ಇನ್ನು ಗ್ರಾಮಾಂತರ ಮೈಸೂರು ಹೌಸಿಂಗ್ ಕಾರ್ಪೊರೇಷನ್ ಎಂದು ಒಂದು ಸಂಘ ಇದೆ. ಕೇವಲ ಕೆಲವರಿಗೆ ಹುದ್ದೆ ಕೊಡುವುದಕ್ಕೋಸ್ಕರ, ಕೆಲವರಿಗೆ ಡೈರೆಕ್ಟರ್ ಮಾಡುವುದಕ್ಕೋಸ್ಕರ ಈ ಸಂಘವನ್ನು ಮಾಡಿದ್ದಾರೆಂದು ಹೇಳಬಹುದು. ಇದರಲ್ಲಿ ಕೇವಲ ಇವರಿಗೆ ಬೇಕಾದಂತಹ, ಇವರ ಅನುಯಾಯಿಗಳಾದಂತಹವರಿಗೆ ಸಾಲ ಕೊಡುವುದಕ್ಕೋಸ್ಕರ ತಾಲ್ಲೂಕುಗಳಲ್ಲಿ ಗ್ರಾಮಾಂತರ ಮನೆಗಳ ಯೋಜನಾ ಸಂಘ ಇದೆ. ಪ್ರತಿ ಒಂದು ಸಂಘದಲ್ಲಿ ಸುಮಾರು ಮೂರು ಮನೆಗೆ ಹಣ ಕೊಟ್ಟಿದ್ದಾರೆ. ಕೊಟ್ಟಿರತಕ್ಕಂತಹದು ಕೂಡ ಈ ಆಡಳಿತ ಪಕ್ಷದ ಅನುಯಾಯಿಗಳಿಗೆ. ಸಾಲ ತಗೆದುಕೊಂಡಿರತಕ್ಕವರು ಅದನ್ನು ವಾಪಸ್ಸು ಕಂತಿನಲ್ಲಿ ಮರುಪಾವತಿ ಮಾಡಿಲ್ಲ. ಈ ರೀತಿಯಲ್ಲಿ ಇವರ ಪಕ್ಷಕ್ಕೋಸ್ಕರ, ಇವರ ಅನುಯಾಯಿಗಳಿಗೋಸ್ಕರ ಇಂಥ ಸಂಘಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಅನೇಕ ಸಂಘಗಳನ್ನು ತಮ್ಮ ಆಡಳಿತದ ಸುಭದ್ರತೆಗಾಗಿ, ತಮ್ಮ ಜನರ ಹಿತಕ್ಕಾಗಿ ಮಾಡುತ್ತಾರಲ್ಲದೆ, ಬಡ ಜನರ ಹಿತಕ್ಕಾಗಿ, ಅವರ ನೆಮ್ಮದಿಗಾಗಿ, ಅವರ ಅಭಿವೃದ್ಧಿಗಾಗಿ, ಅವರ ಶ್ರೇಯಸ್ಸಿಗಾಗಿ ಮಾಡುತ್ತಾ ಇಲ್ಲ. ಅನೇಕ ವರ್ಷಗಳಿಂದ ರೈತನ ನಿಜವಾದಂತಹ ಬವಣೆ, ಬಯಕೆ ಈಡೇರಲಿಲ್ಲ. ಅವನ ಮಕ್ಕಳಲ್ಲಿ ಒಬ್ಬನೂ ಈ ತಾಂತ್ರಿಕ ವಿಜ್ಞಾನದಲ್ಲಿ ಮುಂದೆ ಬರಲಿಲ್ಲ; ಕಾರಣ ಅವನಿಗೆ ಸೀಟು ಸಿಗುತ್ತಾ ಇಲ್ಲ. ಇವತ್ತು ಅನೇಕ ಕಾಲೇಜುಗಳಿವೆ. ಕೆಲವು ಕಾಲೇಜುಗಳು ಕುಬೇರರ ಕಾಲೇಜುಗಳು. ಇನ್ನು ಕೆಲವು ಇಂಟರ್‌ವ್ಯೂ ಆಗಿ, ನಂಬರಿಗೆ ತಕ್ಕಂತೆ ನಡೆಯುವುದಂತೆ. ಅಲ್ಲಿ ಏನೋ ಇಂಟರವ್ಯೂ ಮಾಡಿ, ಉನ್ನತಮಟ್ಟದವರ ಮಕ್ಕಳಿಗೆ ಸ್ಥಾನಮಾನ ಸಿಕ್ಕುತ್ತದೆ ವಿನಾ ಸಾಮಾನ್ಯ ರೈತನ ಮಕ್ಕಳಿಗೆ ಅಲ್ಲಿ ಪ್ರವೇಶ ಸಿಗುತ್ತಾ ಇಲ್ಲ. ಬಹುಶಃ ರೈತನ ಮಗ 42 ನಂಬರು ತೆಗೆದುಕೊಂಡಿರಬಹುದು. ಅದಕ್ಕಿಂತ ಹೆಚ್ಚು ತೆಗೆದುಕೊಳ್ಳತಕ್ಕ ಶಕ್ತಿ ಅವನಿಗೆ ಇಲ್ಲ. ಅಲ್ಲಿಯ ರೀತಿ ನೀತಿಯ ಪ್ರಕಾರ 72 ನಂಬರುಗಳು ಬಂದಿರಬೇಕೆಂದು ತಿರಸ್ಕರಿಸುತ್ತಿದ್ದಾರೆ. ಅವನ ದಕ್ಷತೆ, ಕೌಶಲ್ಯತೆ ಯಾವುದನ್ನೂ ನೋಡುತ್ತಿಲ್ಲ. ಈ ರೀತಿಯಾಗಿ ಒಬ್ಬ ರೈತನ ಮಗನಿಗೆ 8-10 ಸಾವಿರ ರೂಪಾಯಿ ಕೊಟ್ಟು ಕಾಲೇಜು ಸೀಟು ಪಡೆದು ವಿದ್ಯಾವಂತನಾಗುವುದಾದರೂ ಹೇಗೆ? ಅವನಿಗೆ ಕೇವಲ 5-10 ರೂಪಾಯಿ ತಿಂಗಳಿಗೆ ಫೀಸ್ ಕೊಟ್ಟು ಕಲಿಯುವುದಕ್ಕೆ ಶಕ್ತಿ ಇಲ್ಲದಿರುವಾಗ ಇಷ್ಟೊಂದು ಹಣ ತೆತ್ತು ಅವನು ಹೇಗೆ ವಿದ್ಯಾವಂತನಾಗುತ್ತಾನೆ, ಸಮಾಜದಲ್ಲಿ ಅವನು ಸರ್ವಸಾಮಾನ್ಯವಾದ ವ್ಯಕ್ತಿ ಹೇಗೆ ಆಗುತ್ತಾನೆ ಎಂಬುದನ್ನು ಸರ್ಕಾರದವರು ದೀರ್ಘವಾಗಿ ಯೋಚನೆ ಮಾಡಬೇಕು; ಮತ್ತು ಒಂದು ಪರಿಹಾರಮಾರ್ಗವನ್ನು ಕಂಡುಹಿಡಿಯಬೇಕು.

ಇನ್ನು ಮಂಡ್ಯ ಸಕ್ಕರೆ ಕಂಪೆನಿ ವಿಚಾರ. ಸುಮಾರು 6-7 ವರ್ಷಗಳ ಹಿಂದೆ ಒಂದು-ಒಂದೂವರೆ ಕೋಟಿ ಆಪತ್‌ಕಾಲದ ಧನವಿದ್ದ ಈ ಸಕ್ಕರೆ ಕಾರ್ಖಾನೆ ಈ ದಿವಸ ಮೂರು ಮುಕ್ಕಾಲು ಕೋಟಿ ದಿವಾಳಿ ಎದ್ದಿದೆ ಫಾರಂಗಾಗಿ 5000 ಅಥವಾ 6000 ಎಕರೆ ಜಮೀನು ಹಿಂದೆ ಕೊಟ್ಟಿದ್ದಾರೆ. ಈ ದಿವಸ ಆ ಜಮೀನನ್ನು ಕಂಪೆನಿಯವರು ಮಾರಾಟ ಮಾಡಬಹುದೆಂದು ಅಧಿಕಾರ ಕೊಟ್ಟಿದ್ದಾರೆ. ಅದನ್ನು ಕೊಂಡುಕೊಂಡವರು ಆಡಳಿತ ಪಕ್ಷದವರೇ. ಅದನ್ನು ಸಾಮಾನ್ಯ ರೈತನಿಗಾದರೂ ಕೊಡುವುದಕ್ಕಾಗಲಿಲ್ಲ. ಅಲ್ಲಿ ಎರಡು ಸಾವಿರ ಕಾರ್ಮಿಕರನ್ನು ಮೂಲೋಚ್ಚಾಟನೆ ಮಾಡಿದ್ದರು, ಅವರಿಗಾದರೂ ಅದನ್ನು ಕೊಡಬಹುದಿತ್ತು. ಅದನ್ನು ಹರಾಜು ಮಾಡಿ, ಕೊಟೇಶನ್ ಮಾಡಿ ಹಿಂದಿನ ಬಾಗಿಲಿನಿಂದ ಅವರ ಜನರಿಗೆ ಕೊಟ್ಟುಬಿಟ್ಟಿದ್ದಾರೆ. ಅದೇ ರೀತಿ ಮಂಡ್ಯದಲ್ಲಿ ಅಸಿಟೇಟ್ ಫ್ಯಾಕ್ಟರಿ ಇದೆ. ಮಾನ್ಯ ಮಂತ್ರಿಯವರು ಇದೇ ಮನೆಯಲ್ಲಿ ಹೇಳಿದರು—ಮಂಡ್ಯ ಜಿಲ್ಲೆ ಮತ್ತು ಮೈಸೂರು ದೇಶದ ಎಲ್ಲಾ ವಿದ್ಯಾವಂತರಿಗೆ ಅಲ್ಲಿ ಕೆಲಸದ ಅವಕಾಶ ಕೊಡುತ್ತೇವೆಂದು ಹೇಳಿದರು. ಆದರೆ ಈ ದಿವಸ ಅಲ್ಲಿ ಕೆಲಸದಲ್ಲಿರತಕ್ಕವರು, ಆಂಧ್ರದವರು, ಕೇರಳದವರು, ಮತ್ತು ಮದ್ರಾಸಿನವರು. ಮೈಸೂರು ರಾಜ್ಯದ ವಿದ್ಯಾವಂತರಿಗೆ ಅಲ್ಲಿ ಎಷ್ಟು ಜನರಿಗೆ ಅವಕಾಶ ಕೊಟ್ಟಿದ್ದಾರೆ, ಹೊರ ರಾಜ್ಯಗಳವರಿಗೆ ಎಷ್ಟು ಜನರಿದ್ದಾರೆ ಎಂಬುದು ಅಂಕಿಅಂಶಗಳಿಂದ ನೋಡಬಹುದು ಸರ್ಕಾರ ನೇಮಿಸಿರುವ ಮ್ಯಾನೇಜಿಂಗ್ ಡೈರೆಕ್ಟರವರು ಅದೇ ಫ್ಯಾಕ್ಟರಿಯಲ್ಲಿ ಒಂದೆರಡು ವರ್ಷ ಮುಂದುವರಿದರೆ ಆ ಕಾರ್ಖಾನೆ ದಿವಾಳಿಯಾಗುವುದಲ್ಲದೆ, ಜನರ ಅಭ್ಯುದಯ ಸಾಧನೆ ಮಾಡಲಾರದು. ಮತ್ತು ಅಡ್ಡದಾರಿಯನ್ನು ಹಿಡಿಯುವುದರಲ್ಲಿ ಸಂಶಯವಿಲ್ಲ. ಈಗಲಾದರೂ ಸರ್ಕಾರದವರು ಎಚ್ಚೆತ್ತು ಈ ವಿಷಯದಲ್ಲಿ ಮುಂಜಾಗ್ರತೆಯ ಕ್ರಮ ತೆಗೆದುಕೊಂಡು, ಯಾರ್ಯಾರಿಗೆ ಈ ಹುದ್ದೆಯನ್ನು ಕೊಟ್ಟಿದ್ದಾರೆ, ಯಾವ ರಾಜ್ಯದವರು ಇದ್ದಾರೆ, ಅವರಿಗೆ ಕೊಟ್ಟಿರತಕ್ಕ ಶ್ರೇಣಿ ಮೊದಲಾದುವುಗಳನ್ನು

ಪರಿಶೀಲನೆ ಮಾಡಿ ಅದರ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡಿ ಹೇಳುತ್ತೇನೆ.

ಹಾಗೆ ಈ ಲೆವಿ ವಿಚಾರದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಲೆವಿಯನ್ನು ವಸೂಲು ಮಾಡುತ್ತಿದ್ದಾರೆ. ಇವತ್ತು ರೈತನಿಗೆ ಒಂದು ಚಿತ್ರಹಿಂಸೆಯನ್ನು ಇವರು ಕೊಡುತ್ತಿದ್ದಾರೆ. ಇವತ್ತು ರೈತರಲ್ಲಿ, ನಾವು ಏಕೆ ಬೆಳೆಸಿ ಕೊಡಬೇಕು ಎಂಬ ಒಂದು ಮನೋಭಾವನೆ ಉಂಟಾಗಿದೆ. ಇದಕ್ಕೆ ಸರ್ಕಾರದವರು ಏಕೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ ಎಂದು ಕೇಳುತ್ತೇನೆ. ಒಂದುನೂರು ಜನ ಸಂಸಾರ ಇರತಕ್ಕಂತಹ ಗ್ರಾಮದಲ್ಲಿ ಅಲ್ಲಿ ಒಂದು ಸಾವಿರ ಕ್ವಿಂಟಾಲ್ ಭತ್ತ ವಸೂಲು ಮಾಡಿದ್ದಾರೆ. ಅಲ್ಲಿ ವ್ಯವಸಾಯದ ಕೂಲಿಯನ್ನೇ ನಂಬಿಕೊಂಡಿರತಕ್ಕಂತಹ 25 ಸಂಸಾರ ಇರುತ್ತದೆ. ಅದರಲ್ಲಿ 10 ಜನ ಇರತಕ್ಕ ಒಂದು ಕುಟುಂಬಕ್ಕೂ 10 ಕೆ. ಜಿ. ಯಾದರೂ ಆಹಾರ ಧಾನ್ಯವನ್ನು ಸರ್ಕಾರದವರು ಕೊಡುತ್ತಿದ್ದರೆ, ನಾನು ಸರ್ಕಾರವನ್ನು ಶ್ಲಾಘಿಸುತ್ತಿದ್ದೆ ಅನುಕಂಪವನ್ನು ತೋರುತ್ತಿದ್ದಾರೆಂದು ಹೇಳಬಹುದಿತ್ತು. ಕೇವಲ ಇವರ ಜನರಿಗೋಸ್ಕರ ಕೊಡುವುದಕ್ಕೆ ಈ ಲೆವಿ ಪದ್ಧತಿಯನ್ನು ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಈ ಲೆವಿ ಪದ್ಧತಿಯನ್ನು ತೆಗೆದು ಹಾಕಬೇಕೆಂದು ಸರಕಾರದಲ್ಲಿ ಮನವಿ ಮಾಡುತ್ತೇನೆ.

ಇನ್ನು ಗೋಮಾಳವನ್ನು ಹಂಚುತ್ತಿದ್ದಾರೆ. ಅದನ್ನು ಬೆಂಗಳೂರಿನಲ್ಲಿರತಕ್ಕ, ಮದ್ರಾಸಿನಲ್ಲಿರತಕ್ಕ ಜನರಿಗೆ, 10–20 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಅವರು ಅದನ್ನು ಇತರರಿಗೆ ಮಾರಿಕೊಂಡಿದ್ದಾರೆ. ಒಂದು ಗುಂಟೆ ಇಲ್ಲದ ಹಳ್ಳಿಯ ರೈತರಿಗೆ ಕೊಟ್ಟಿಲ್ಲ. ಇದರಿಂದ ಸರ್ಕಾರದವರು ಇಂಥ ಜನರ ಅನುಕಂಪವನ್ನು ಕಳೆದುಕೊಂಡಿದ್ದಾರೆ. ಮಾರಿ ಹಬ್ಬಕ್ಕೆ ತಂದಂತಹ ಕುರಿಯು ಕೆಲವು ನಿಮಿಷದಲ್ಲಿ ನಾನೇನಾಗುತ್ತೇನೆಂಬುದನ್ನು ಮರೆತು ಮೆಲ್ಲುವಂತೆ ಆಗಿದ್ದಾರೆ ಸಚಿವರು. ತಳಿರು ತೋರಣಗಳ ಸವಿಯನ್ನು ಬಿಟ್ಟು ಈಗಲಾದರೂ ಎಚ್ಚೆತ್ತುಕೊಂಡು ದೇಶದ ಹಿತಸಾಧನೆಯಾದಂತಹ ಒಳ್ಳೆಯ ಕಾರ್ಯವನ್ನು ಸಾಧನೆ ಮಾಡಲಿ ಎಂದು ಒತ್ತಾಯದಿಂದ ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನಾಗಪ್ಪ (ಮಂಡ್ಯ).—ಮಾನ್ಯ ಅಧ್ಯಕ್ಷರೇ, 1968–69ನೇ ಸಾಲಿನ ಆಯವ್ಯಯ ಪತ್ರವನ್ನು ಅನುಮೋದಿಸುತ್ತಾ ನಾನು ಒಂದೆರಡು ವಿಷಯಗಳ ಬಗ್ಗೆ ಸರಕಾರಕ್ಕೆ ಸಲಹೆ ಮಾಡಲು ಇಚ್ಛಿಸುತ್ತೇನೆ.

ಮೊದಲನೆಯದಾಗಿ ಕಂದಾಯ. ಕಂದಾಯ ಎನ್ನತಕ್ಕದ್ದು ಯಾವಾಗ ಜಾರಿಗೆ ಬಂತು, ಅದು ಕಾಲಕ್ಕೆ ಅನುಗುಣವಾಗಿದೆಯೇ ಅಥವಾ ಅದರಲ್ಲೇನಾದರೂ ಮಾರ್ಪಾಡು ಮಾಡಬೇಕೇ, ಕಂದಾಯವನ್ನು ಯಾರು ಯಾವ ಸನ್ನಿವೇಶದಲ್ಲಿ ಇದನ್ನು ವಿಧಾಯಕಮಾಡಿದ್ದರು ಎನ್ನುವುದನ್ನು ಸ್ವಲ್ಪಮಟ್ಟಿಗೆ ವಿಚಾರ ಮಾಡಿದರೆ ಅನುಕೂಲವಾಗುತ್ತದೆ ಎಂದು ಭಾವಿಸುತ್ತೇನೆ. ಹಿಂದೆ ಕಂದಾಯವನ್ನು ಯಾವ ದೃಷ್ಟಿಯಿಂದ ಹಾಕುತ್ತಿದ್ದರು ಎಂದರೆ, ನಮ್ಮ ದೇಶದಲ್ಲಿ ಆಗ ನೀರಾವರಿ ಸೌಕರ್ಯಗಳಿರಲಿಲ್ಲ ಮತ್ತು ಕೈಗಾರಿಕೆಗಳು ಹೆಚ್ಚು ಆಗಿರಲಿಲ್ಲ. ಇಂತಹ ಸಂದರ್ಭದಲ್ಲಿ ಒಂದು ಸರಕಾರವನ್ನು ನಡೆಸಬೇಕಾದರೆ ಬೇರೆ ವಿಧವಾದ ವರಮಾನ ಬರುವುದಕ್ಕೆ ಅವಕಾಶ ಇಲ್ಲದಂತಹ ಸಂದರ್ಭದಲ್ಲಿ ಬೇರೆ ಯಾವ ಮಾರ್ಗವೂ ಇಲ್ಲ ಎನ್ನುವಾಗ ಕಂದಾಯವನ್ನು ಹಾಕಿ, ಅದರಿಂದ ಬರುವ ವರಮಾನದಿಂದ ಆಡಳಿತ ನಡೆಸಬೇಕು ಎಂದು ಇತ್ತು. ಇದರಂತೆ ಕಂದಾಯವನ್ನು ಆಗ ಹಾಕುವ ಪದ್ಧತಿ ಜಾರಿಗೆ ಬಂದಿತು. ಆದರೆ ಈಗಿನ ಸನ್ನಿವೇಶಗಳನ್ನು ಪರಿಶೀಲಿಸಿದ್ದೇ ಆದರೆ ನಮ್ಮ ದೇಶದಲ್ಲಿ ಕಂದಾಯದಿಂದ ಸುಮಾರು ಎಂಟು ಕೋಟಿಯಷ್ಟು ಬರುತ್ತದೆ. ಆದರೆ ನಮ್ಮ ದೇಶದಲ್ಲಿ ಬರತಕ್ಕ ಒಟ್ಟು ಆದಾಯ ಸುಮಾರು 194.74 ಕೋಟಿಯಷ್ಟು ಬರುತ್ತದೆ. ಬಹುಶಃ ಇದಕ್ಕೆ ನಮ್ಮ ಭೂಕಂದಾಯದಿಂದ ಬರುವ ಆದಾಯವನ್ನು ಹೋಲಿಸಿದರೆ ಇದರಿಂದ ಬರುತ್ತಿರುವುದು ಬಹಳ ಅತ್ಯಲ್ಪ, ಬಹು ಕಡಿಮೆ. ಆದರೆ ಇದನ್ನು ವಸೂಲು ಮಾಡುವುದಕ್ಕಾಗಿ ಬೇರೆ ಬೇರೆ ಏಜನ್ಸಿಗಳೂ ಇರುತ್ತವೆ, ಇದಕ್ಕಾಗಿ ಎಷ್ಟು ಸಂಬಳ ಸಾರಿಗೆಗಳನ್ನು ಕೊಡುತ್ತಿದ್ದೇವೆ ಎನ್ನತಕ್ಕದ್ದು ಯೋಚನೆ ಮಾಡಬೇಕಾದ ವಿಚಾರ. ಬಹುಶಃ ಇವೆಲ್ಲ ಹೋದರೆ ನಮಗೆ ಕಂದಾಯದ ವರಮಾನ ಸುಮಾರು 5–6 ಕೋಟಿಯಷ್ಟು ಬರಬಹುದು, ಇಂತಹ ಕಂದಾಯದ ಬಗ್ಗೆ ನಮ್ಮ ವಿರೋಧ ಪಕ್ಷದ ಸದಸ್ಯರು ಆಗಲಿ ನಾವೇ ಆಗಲಿ ಇಷ್ಟುಮಟ್ಟಿಗೆ ಚರ್ಚೆ ಮಾಡಬೇಕಾದ ಆವಶ್ಯಕತೆಯೇ ಇಲ್ಲ ಎಂದು ನಾನು ಭಾವಿಸುತ್ತೇನೆ. ಈಗಾಗಲೇ ನೀರಾವರಿ ಯೋಜನೆಗಳನ್ನು ಮಾಡಿದ್ದೇವೆ, ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದೇವೆ ಹಾಗೂ ಇನ್ನೂ ಅನೇಕ ವಿಧಗಳಲ್ಲಿ ಅನೇಕ ಉದ್ಯಮಗಳನ್ನು ಕೈಗೊಂಡಿದ್ದೇವೆ; ಮತ್ತು ಸೇಲ್ಸ್ ಟ್ಯಾಕ್ಸ್‌ನಿಂದ ವರಮಾನ ಬರುತ್ತಿದೆ ಮತ್ತು ಬೇರೆ ರೀತಿಯಾದ ತೆರಿಗೆಗಳು ಹಾಗೂ ವಾಟರು ರೇಟು ಇತ್ಯಾದಿ ನಾನಾ ಬಾಬುಗಳಿಂದ ವರಮಾನ ಬರುತ್ತಿದೆ. ಈ ದೃಷ್ಟಿಯಿಂದ ಹಳೇ

(ಶ್ರೀ ನಾಗಪ್ಪ)

ಪದ್ಧತಿಯಾದ ಕಂದಾಯವನ್ನು ವಸೂಲು ಮಾಡುವುದನ್ನು ಕೈಬಿಡುವುದು ಸೂಕ್ತ ಎಂದು ನಾನಾದರೂ ಭಾವಿಸುತ್ತೇನೆ. ಇದರ ಬಗ್ಗೆ ಸರಕಾರ ಯೋಚಿಸಬೇಕಾಗಿದೆ. ಸರಕಾರಕ್ಕೆ ಈಗ ಇನ್‌ಕಂಟ್ಯಾಕ್ಸ್ ಹಾಗೂ ಸೇಲ್ಸ್ ಟ್ಯಾಕ್ಸ್ ಇವುಗಳಿಂದ ಹಾಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸರಕಾರಕ್ಕೆ ಜನ ದುಡ್ಡನ್ನು ಕೊಡುತ್ತಿದ್ದಾರೆ. ಹಳ್ಳಿಗಾಡಿನ ಜನ ಹಿಂದೆ ಏನೋ ಒಂದು ರೀತಿಯಲ್ಲಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದರು ಮತ್ತು ಶ್ರಮಪಟ್ಟು ಮಾಡುತ್ತಿದ್ದರು ಮತ್ತು ಅದಕ್ಕೆ ತಕ್ಕಂತೆ ಉತ್ಪತ್ತಿಯನ್ನೂ ಕೆಲವು ಕಡೆ ಮಾಡುತ್ತಿದ್ದರು. ಆದರೆ ಈಗ ಅತನ ಆರ್ಥಿಕ ಸ್ಥಿತಿ ಬಹಳ ಹೀನ ಸ್ಥಿತಿಗೆ ಬಂದಿದೆ. ದಿನೇ ದಿನೇ ಹಳ್ಳಿಗಾಡಿನ ಜನರ ಆರ್ಥಿಕ ಮಟ್ಟ ಬಹಳ ಕೆಳಗೆ ಬರುತ್ತಿದೆ. ಈ ಸ್ಥಿತಿಯಲ್ಲಿ ಇಂದು ಅವನು ವ್ಯವಸಾಯ ಮಾಡುವುದೂ ಕಷ್ಟವಾಗುತ್ತದೆ. ಹಿಂದೆ ಇದ್ದ ರೈತರ ಸ್ಥಿತಿಗೂ ಇಂದು ಇರುವ ರೈತರ ಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಾಗಿದೆ. ಇಂತಹ ಸಂದರ್ಭದಲ್ಲಿ ಸರಕಾರ ಲ್ಯಾಂಡ್ ರೆವಿನ್ಯೂ ವಸೂಲಿಯನ್ನು ಕೈ ಬಿಡುವುದು ಸೂಕ್ತ ಎಂದು ನಾನು ಸರಕಾರಕ್ಕೆ ಸಲಹೆ ಮಾಡಲು ಇಚ್ಛಿಸುತ್ತೇನೆ.

ಎರಡನೆಯದು, ಕೈಗಾರಿಕೆ ವಿಷಯವಾಗಿ ಹೇಳುವುದಾದರೆ ನಮ್ಮ ಸರಕಾರದವರು ಹಾಗೂ ಕೇಂದ್ರ ಸರಕಾರದಲ್ಲಿರುವ ಕೈಗಾರಿಕೆ ಶಾಖೆಯ ಮಂತ್ರಿಗಳಾಗಿರುವ ಡಾ. ಚನ್ನಾರೆಡ್ಡಿಯವರು ಹೇಳುವಂತೆ ಕೈಗಾರಿಕೆಗಳಿಗಾಗಿ ಏನು ಬಂಡವಾಳವನ್ನು ಹಾಕಿದ್ದೇವೋ ಆ ಬಂಡವಾಳಕ್ಕೆ ತಕ್ಕಂತೆ ಆದಾಯ ಬರುತ್ತಿಲ್ಲ. ಇದರ ಕಡೆಗೆ ಸರಕಾರ ಇನ್ನೂ ಹೆಚ್ಚು ಗಮನ ಕೊಡಬೇಕು. ಕೋಟ್ಯಾಂತರ ರೂಪಾಯಿಗಳಷ್ಟು ಕೈಗಾರಿಕೆಗಳ ಮೇಲೆ ಹಾಕುತ್ತಿದ್ದೇವೆ. ಮತ್ತು ಅದರಿಂದ ಉತ್ಪಾದನೆ ಶೇಕಡಾ ಎಂಟರಷ್ಟು ಹತ್ತರಷ್ಟೂ ಕೂಡ ಬರದೇ ಇದ್ದರೆ ಇದಕ್ಕೆ ಕಾರಣಗಳೇನು ಎನ್ನುವುದನ್ನು ವಿಚಾರ ಮಾಡಿ ನೋಡಬೇಕಾಗಿದೆ. ಇದನ್ನು ತೀವ್ರವಾಗಿ ಯೋಚಿಸಬೇಕಾದುದು ಅಗತ್ಯ. ಇದರ ಬಗ್ಗೆ ಪರಿಣತರಾದವರು, ತಜ್ಞರು, ಕೈಗಾರಿಕೆಗಳ ಮಾಹಿತಿಯುಳ್ಳವರು ಹಾಗೂ ಇತರ ಗಣ್ಯ ವ್ಯಕ್ತಿಗಳು ಕೈಗಾರಿಕೆಯ ವಿಷಯ ತಿಳಿದವರು ಕೂಲಂಕಷವಾಗಿ ಪರಿಶೀಲನೆ ಮಾಡಿ ಸರಿಪಡಿಸಬೇಕು. ಕೈಗಾರಿಕೆಗಳಲ್ಲಿ ಅಧಿಕಾರಿಗಳನ್ನು ನೇಮಿಸುವಾಗ ಸರಿಯಾಗಿ ಪರಿಣತರಾದವರನ್ನು ನೇಮಿಸದೇ ಹೋದರೆ ಅಂತಹ ಕೈಗಾರಿಕೆಗಳ ಪ್ರಗತಿ ಕುಂಠಿತವಾಗುತ್ತದೆ. ಕೈಗಾರಿಕೆಗಳಿಗೆ ಹೆಚ್ಚು ಪ್ರಭಾವಯುತವಾದ ತಜ್ಞರನ್ನು ನೇಮಿಸಿದರೆ ಕೈಗಾರಿಕೆಗಳಲ್ಲಿ ಹೆಚ್ಚು ಪ್ರಗತಿಯಾಗಿ ಹೆಚ್ಚಿನ ಉತ್ಪತ್ತಿ ಬರುತ್ತದೆ ಮತ್ತು ಅಂತಹ ಅಧಿಕಾರಿಗಳು ಕೈಗಾರಿಕೆಗಳಿಗಾಗಿ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡುತ್ತಾರೆ. ಈಗ ಏನು ಮಾಡುತ್ತಿದ್ದಾರೆ ಎಂದರೆ, ಎಲ್ಲ ಕೈಗಾರಿಕೆಗಳಲ್ಲೂ ಐ.ಎ.ಎಸ್. ಅಧಿಕಾರಿಗಳನ್ನೇ ಹೆಚ್ಚಾಗಿ ನೇಮಕ ಮಾಡುತ್ತಿದ್ದಾರೆ. ಕೆಲವು ಕಂಪನಿಗಳಲ್ಲಿ ಇವರನ್ನು ಮ್ಯಾನೇಜಿಂಗು ಡೈರೆಕ್ಟರಾಗಿ ನೇಮಿಸುತ್ತಿದ್ದಾರೆ. ಇವರು ರೆವಿನ್ಯೂ ಇಲಾಖೆಯಲ್ಲಿ ನುರಿತು ಬಂದಿರುವುದರಿಂದ ಕೈಗಾರಿಕೆಗಳಲ್ಲಿ ಪರಿಣತರಾಗಿರುವವರು ಮಾಡುವಂತೆ ಕೆಲಸಗಳನ್ನು ಮಾಡುವುದು ಹೇಗೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕು. ಉದಾಹರಣೆಯಾಗಿ ನನ್ನ ಸ್ವಂತ ಅನುಭವ ಒಂದನ್ನು ಇಲ್ಲಿ ಹೇಳುತ್ತೇನೆ. ಈಗ್ಗೆ ಎರಡು ವರ್ಷಗಳ ಹಿಂದೆ ಸಕ್ಕರೆ ಕೈಗಾರಿಕೆಯ ಬಗ್ಗೆ ಕೆಲವು ತಜ್ಞರು ಸೇರಿ ದೆಹಲಿಯಲ್ಲಿ ಒಂದು ಸಭೆ ಸೇರಿಸಿದ್ದರು. ಇದರಲ್ಲಿ ದೇಶದ ಪ್ರಾಮುಖ್ಯವಾದ ಭಾಗಗಳಲ್ಲಿ ಎಲ್ಲಿ ಸಕ್ಕರೆ ಕೈಗಾರಿಕೆ ಇದೆಯೋ ಅಲ್ಲಿ ಇರುವ ತಜ್ಞರನ್ನು ಕರೆಸಿದ್ದರು ಹಾಗೂ ಇತರ ಪರಿಣತರನ್ನು ಅಲ್ಲಿ ಸೇರಿಸಿದ್ದರು. ಆಗ ಸಕ್ಕರೆ ಇಂಡಸ್ಟ್ರಿಗೆ ಸಲ್‌ಫರ್ ಅಭಾವ ಬಂದಿತ್ತು. ಸಲ್‌ಫರ್ ಇಲ್ಲದೆ ಬಿಳೀ ಸಕ್ಕರೆ ಮಾಡುವುದಕ್ಕೆ ಆಗುತ್ತಿರಲಿಲ್ಲ. ಆದುದರಿಂದ ತಜ್ಞರಾದವರು ಹಾಗೂ ಪರಿಣತರಾದವರು ಸಲ್‌ಫರ್ ಇಲ್ಲದೆಯೇ ಸಕ್ಕರೆಯನ್ನು ತಯಾರಿಸುವುದಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ಚರ್ಚೆ ಮಾಡಿ ಒಂದು ನಿರ್ಣಯ ಮಾಡಬೇಕು ಎಂದು ದೆಹಲಿಯಲ್ಲಿ ಆಗ ಸಭೆ ಸೇರಿದ್ದರು. ಇದರ ಮೇಲೆ ಸರಕಾರಕ್ಕೂ ಒಂದು ವರದಿ ಕೂಡ ಕೊಡಬೇಕಾಗಿತ್ತು. ಇದರಲ್ಲಿ ಅಧಿಕಾರಿಗಳೇ ಅಲ್ಲದೆ ತಜ್ಞರು ಹಾಗೂ ಪರಿಣತರಾದವರು ಮತ್ತು ಈ ಸಕ್ಕರೆ ಬೆಳೆ ಮಾಡುವವರ ಪರ ಪ್ರತಿನಿಧಿಗಳು ಹೀಗೆ ಎಲ್ಲರೂ ಅಲ್ಲಿಗೆ ಬಂದಿದ್ದರು. ನಮ್ಮ ಕಡೆ ಇದ್ದ ಒಬ್ಬರು ಐ.ಎ.ಎಸ್. ಅಧಿಕಾರಿಗಳು ಅಲ್ಲಿದ್ದರು. ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಬರೀ ಒಬ್ಬರು ಆರ್ಟ್ಸ್ ಗ್ರಾಜ್ಯುಯೇಟು ಆಗಿದ್ದಂತಹವರು ಸೈನ್ಸ್ ವಿಚಾರ ಗೊತ್ತಿರಲಿಲ್ಲ. ಅವರಿಗೆ ಷುಗರ್ ಇಂಡಸ್ಟ್ರಿ ಬಗ್ಗೆ ಏನೂ ಹೆಚ್ಚಿಗೆ ಗೊತ್ತಿರಲಿಲ್ಲ. ಇಂತಹವರನ್ನು ಈ ಕೈಗಾರಿಕೆಯಲ್ಲಿ ಸಲ್‌ಫರ್ ಇಲ್ಲದೆ ಸಕ್ಕರೆ ತಯಾರಿಸಲು ಸಾಧ್ಯವೇ ಎನ್ನುವುದನ್ನು ಅವರು ವಿಚಾರ ಮಾಡುವುದಕ್ಕೆ ಬರುವುದಿಲ್ಲ. ಸೈನ್ಸನ್ನಾದರೂ ಓದಿದ್ದರೆ ಅವರು ಗಂಧಕದ ವಿಚಾರ ಏನು ಎನ್ನುವುದನ್ನು ಹೇಳಬಹುದಾಗಿತ್ತು. ಇವರಿಗೆ ಪರಿಶ್ರಮ ಇದರಲ್ಲಿ ಸಾಲದು. ಇಂತಹವರಿಂದ ಕೈಗಾರಿಕೆಗಳಲ್ಲಿ ಹೆಚ್ಚು ಲಾಭ ಬರಬೇಕು ಎಂದರೆ ಹೇಗೆ ಬರುತ್ತದೆ? ಬೇರೆ ಪರಿಣತರಾದ ಜನರು ಕಬ್ಬು ಬೆಳೆಯುವವರು ಹೆಚ್ಚು ಉತ್ಪಾದನೆ ಮಾಡಲು ಏನೇನು ಮಾಡಬೇಕು ಎನ್ನುವುದರ ಬಗ್ಗೆ ಸಲಹೆ ಕೊಡಬೇಕಾದರೆ ಕಷ್ಟವಾಗುತ್ತದೆ. ಆದುದರಿಂದ ಕೈಗಾರಿಕೆಗಳಲ್ಲಿ

ತಜ್ಞರಾದವರನ್ನು ನೇಮಿಸತಕ್ಕದ್ದು ಸೂಕ್ತ ಎಂದು ಇಲ್ಲಿ ಸಲಹೆ ಮಾಡುತ್ತೇನೆ. ಸರಕಾರ ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಿ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.

ಇನ್ನು ಲೆವಿ ವಿಚಾರವಾಗಿ ಹೇಳುವಾಗ ಇದರಿಂದ ಸರಕಾರಕ್ಕೂ ಕೂಡ ಹೆಸರು ಬರುವುದಿಲ್ಲ ಮತ್ತು ರೈತರಿಗೂ ಕೂಡ ಇದರಲ್ಲಿ ನಂಬಿಕೆ ಹೋಗಿದೆ. ಇವೆಲ್ಲ ಅಧಿಕಾರಿಗಳು ಮಾಡುವ ಕ್ರಮಗಳು. ಲೆವಿಯಿಂದ ಎಷ್ಟೋ ಜನಗಳಿಗೆ ಒಳ್ಳೆಯದೂ ಆಗುತ್ತದೆ ಕೆಲವರಿಗೆ ಕೆಟ್ಟದ್ದೂ ಆಗುತ್ತದೆ. ಇದರಲ್ಲಿ ನಿಮಗೆ ಬೇಕಾಗಿರುವುದು ದಾಸ್ತಾನು ಮಾಡಬೇಕು ಎನ್ನುವುದು. ಇದಕ್ಕಾಗಿ ಲೆವಿ ಹಾಕಿ ದಾಸ್ತಾನು ಮಾಡಬೇಕೆಂದು ಮಾಡುತ್ತಿದ್ದಾರೆ. ಸುಗ್ಗಿಯಲ್ಲಿ ಭತ್ತ ಕೊಳ್ಳುವಾಗ ಧಾನ್ಯದ ಕೊರತೆ ಎಷ್ಟು ಇದೆ ಮತ್ತು ಲೆವಿ ವಸೂಲಿಯಿಂದ ಕೊರತೆ ಮಾಡುವುದರಲ್ಲಿ ಬರುವ ದಾಸ್ತಾನುಗಳೇನು ಎನ್ನುವುದನ್ನು ಸಂಬಂಧಪಟ್ಟ ಅಧಿಕಾರಿಗಳು ಯೋಚನೆ ಮಾಡಿ ನೋಡುವುದಾದರೆ ಭತ್ತದ ಬೆಲೆ ಕೇವಲ 15—20 ರೂಪಾಯಿಗಳಷ್ಟು ಒಂದು ಕ್ವಿಂಟಾಲ್‌ಗೆ ಬರುತ್ತದೆ. ರೈತರ ಹಿತದೃಷ್ಟಿಯಿಂದ ಇಂತಹ ಲೆವಿ ಹಾಕುವುದನ್ನು ಕೈಬಿಡುವುದು ಒಳ್ಳೆಯದು. ಇದರಿಂದ ಏನೂ ಹೆಚ್ಚು ವರಮಾನವೂ ಬರುವುದಿಲ್ಲ. ರೈತ ವ್ಯವಸಾಯ ಮಾಡುವಾಗ ನೂರೆಂಟು ಕಷ್ಟಗಳನ್ನು ಅನುಭವಿಸಿಕೊಂಡು ಬೆಳೆ ಮಾಡುತ್ತಾನೆ. ಭತ್ತವನ್ನೇ ಆಗಲೀ ಬೇರೆ ಬೆಳೆಯನ್ನೇ ಮಾಡಲಿ ಅದಕ್ಕೆ ಬೇಕಾಗುವ ಗೊಬ್ಬರ ಹಾಗೂ ಬೀಜ ಇತ್ಯಾದಿಗಳಿಗೆ ಹೆಚ್ಚು ಬೆಲೆ ಕೊಟ್ಟು ಮಾರಿದರೂ ಕೂಡ ಓಪನ್ ಮಾರ್ಕೆಟ್ ಬೆಲೆ ನೋಡಿದರೆ ಅಂತಹ ಹೆಚ್ಚು ವ್ಯತ್ಯಾಸಗಳೇನೂ ಬರುವುದಿಲ್ಲ. ಆದರೂ ವ್ಯವಸಾಯ ಮಾಡುವ ರೈತರಿಗೆ ಲೆವಿಯಿಂದೇನೂ ಹೆಚ್ಚು ಉಪಕಾರವಾಗುತ್ತಿಲ್ಲ. ಈಗ ಇರುವ ಮಾರ್ಕೆಟ್ ಬೆಲೆಗಳನ್ನು ನೋಡಿದರೆ ಬೆಲೆಯಲ್ಲಿ ಸುಮಾರು 15—20 ರೂಪಾಯಿಗಳಿಗಿಂತ ಹೆಚ್ಚಾಗಿ ಏನೂ ಸಿಗುವುದಿಲ್ಲ. ಹೀಗಿರುವಾಗ ಲೆವಿಯನ್ನು ವಸೂಲು ಮಾಡಬೇಕೆಂದು ಯಾವ ಧ್ಯೇಯ ಇಟ್ಟುಕೊಂಡು ಹೇಳುತ್ತಿದ್ದೀರಿ! ಲೆವಿ ಪದ್ಧತಿಯಿಂದ ಏನೂ ಪ್ರಯೋಜನವಾಗಲಾರದು. ರೈತರಿಗೆ ಹೆಚ್ಚು ದುಡ್ಡು ಬರುವುದಿಲ್ಲ. ಆದುದರಿಂದ ಲೆವಿ ಪದ್ಧತಿ ತೆಗೆದುಹಾಕುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಮುಂದಿನ ಸುಗ್ಗಿಯ ಕಾಲದಲ್ಲಿಯಾದರೂ ಇದನ್ನು ಕೈ ಬಿಡಬೇಕು.

4-00 P.M.

ಇಂದು ದೇಶದಲ್ಲಿ ನಿರುದ್ಯೋಗ ಹೆಚ್ಚಾಗಿದೆ. ಆರು ನೂರು ಜನ ಬಿ.ಇ. ಪಾಸುಮಾಡಿಕೊಂಡವರು ನಿರುದ್ಯೋಗಿಗಳಾಗಿದ್ದಾರೆ. ಪ್ರತಿ ವರ್ಷ 1860 ಮೆಡಿಕಲ್ ಗ್ರಾಜ್ಯುಯೇಟ್ಸ್ ಕಾಲೇಜುಗಳಿಂದ ಹೊರಬೀಳುತ್ತಾರೆಂದು ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸಸ್‌ನವರು ಹೇಳಿದ್ದಾರೆ. ಇಂಜಿನಿಯರಿಂಗ್ ಮತ್ತು ಮೆಡಿಕಲ್ ಗ್ರಾಜ್ಯುಯೇಟ್ಸ್ ಕೆಲಸವಿಲ್ಲದೆ ನಿರುದ್ಯೋಗಿಗಳಾಗಿದ್ದಾರೆ. ಇನ್ನು ಪಾಲಿಟೆಕ್ನಿಕ್‌ನಲ್ಲಿ ಪಾಸಾದವರಿಗೆ ದೇವರೇ ಗತಿ. ಯಾವ ಸರಕಾರ ಬಂದರೂ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ; ಇದನ್ನು ಬ್ರಹ್ಮನೇ ಬಂದು ನಿವಾರಣೆ ಮಾಡಬೇಕು. ಇಂಥ ಸಂದರ್ಭದಲ್ಲಿ ನೌಕರಿಯಲ್ಲಿ ರೀಎಂಪ್ಲಾಯಮೆಂಟ್ ಕೊಡಿ ಎಂದು ಹೇಳತಕ್ಕಂಥಾದ್ದು ಸರಿಯಲ್ಲ. ಯುವಕ ಪದವೀಧರರು ನಿರುದ್ಯೋಗಿಗಳಾಗಿರುವಾಗ ಯಾವುದೇ ಕ್ಷೇತ್ರವಿರಲಿ ಯಾವುದೇ ಡಿಪಾರ್ಟ್‌ಮೆಂಟ್ ಇರಲಿ ರೀಎಂಪ್ಲಾಯಮೆಂಟಿಗೆ ಅವಕಾಶ ಕೊಡಬಾರದು. ವಿದ್ಯಾವಂತ ನಿರುದ್ಯೋಗಿಗಳು ಹೆಚ್ಚಾಗಿರುವಾಗ ಯಾವ ದೃಷ್ಟಿಯಿಂದಲೂ ರೀಎಂಪ್ಲಾಯಮೆಂಟಿಗೆ ಅವಕಾಶ ಕೂಡಬಾರದು.

ಇನ್ನು ಆರೋಗ್ಯ ಇಲಾಖೆ. ಇದಕ್ಕೆ 12.25 ಕೋಟಿ ಹಣ ಒದಗಿಸಿರುವುದು ಬಹಳ ಕಡಿಮೆ. ಇಷ್ಟು ಹಣ ಬೆಂಗಳೂರು ಮೈಸೂರು ನಗರಗಳಲ್ಲಿಯ ಆಸ್ಪತ್ರೆ ಅಭಿವೃದ್ಧಿ ಪಡಿಸಲು ಸಹ ಸಾಕಾಗುವುದಿಲ್ಲ. ಅಂದ ಮೇಲೆ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕ ಮಟ್ಟದಲ್ಲಿ ಹಾಗೂ ಹಳ್ಳಿಗಳಲ್ಲಿ ಇರತಕ್ಕಂಥ ಆಸ್ಪತ್ರೆಗಳಿಗೆ ಹಣ ಒದಗಿಸಲು ಇದು ಏನೇನುಸಾಲದು. ಗ್ರಾಮಾಂತರ ಪ್ರದೇಶದಲ್ಲಿಯ ಆಸ್ಪತ್ರೆಗಳಿಗೆ ಡಾಕ್ಟರ್ ಇರಬೇಕಾದರೆ ಅವರಿಗೆ ವಾಸಕ್ಕೆ ಮನೆ ಇಲ್ಲದಿದ್ದರೆ ಅವರು ಅಲ್ಲಿಗೆ ಹೋಗುವುದಿಲ್ಲ. ವಾಸಕ್ಕೆ ಕ್ವಾರ್ಟರ್ಸ್ ಇದೆಯೇ ಎಂದು ಅವರು ಮೊದಲು ಕೇಳುತ್ತಾರೆ. ವಾಸಕ್ಕೆ ಮನೆ ಇಲ್ಲದಿದ್ದರೆ ಆರ್ಡರ್ ಕ್ಯಾನ್ಸಲ್ ಮಾಡಿಸುತ್ತಾರೆ, ಇಲ್ಲವೆ ಆರು ತಿಂಗಳು ರಜಾ ತೆಗೆದುಕೊಳುತ್ತಾರೆ. ಆದುದರಿಂದ ತಾಲ್ಲೂಕ ಮಟ್ಟದಲ್ಲಿ ಇರತಕ್ಕ ಆಸ್ಪತ್ರೆ ಮೊದಲು ಅಭಿವೃದ್ಧಿಪಡಿಸಬೇಕು. ಅನೇಕ ಜಿಲ್ಲಾ ಆಸ್ಪತ್ರೆಗಳು 20 ವರ್ಷಗಳ ಹಿಂದೆ ಯಾವ ಮಟ್ಟದಲ್ಲಿ ಇದ್ದವೋ ಅದೇ ಮಟ್ಟದಲ್ಲಿ ಇಂದಿಗೂ ಕೂಡ ಇವೆ. ಆಸ್ಪತ್ರೆಗೆ ಬಹಳ ಜನ ಪೇಶಂಟ್ಸ್ ಬರುತ್ತಾರೆ. ಪೇಶಂಟ್ಸ್ ಎಗ್ಸಾಮಿನ್ ಮಾಡಲು ಜಾತ್ರೆಯಲ್ಲಿ ನೂಕಿಕೊಂಡು ಹೋಗುವ ಹಾಗೆ ಡಾಕ್ಟರರು ಹೋಗುತ್ತಾರೆ. ಈ ರೀತಿ ಆಸ್ಪತ್ರೆಯಲ್ಲಿ

(ಶ್ರೀ ನಾಗಪ್ಪ)

ಪೋಶಂಟ್ಸ್ ಎಗ್ಸಾಮಿನ್ ಮಾಡಬೇಕಾದ ಸ್ಥಿತಿ ಇವೆ. ಆದುದರಿಂದ ಆಸ್ಪತ್ರೆಗಳನ್ನು ಅಭಿವೃದ್ಧಿ ಪಡಿಸಲು ಆರೋಗ್ಯ ವಿಭಾಗಕ್ಕೆ ಇನ್ನ ಹೆಚ್ಚು ಹಣ ಒದಗಿಸಬೇಕು ಎಂದು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸ. ಸ್ಕೂಲಿನಲ್ಲಿ ಮಕ್ಕಳಿಗೆ ಉತ್ತಮ ಪಠ್ಯ ಪುಸ್ತಕ ಒದಗಿಸಬೇಕು ಎಂದು ನಾಲ್ಕೈದು ವರ್ಷಗಳಿಂದಲೇ ಕೇಳುತ್ತಲೇ ಇದ್ದೇವೆ. ಇದನ್ನು ಜಾಗ್ರತೆ ಜಾರಿಗೆ ತರಬೇಕು. ಒಬ್ಬ ಕೂನಿ ಮಾಡುತ್ತಾನೆ, ಅವನಿಗೆ ಸಾಮೀಲು ಅಂದರೆ ಅಬೆಟ್ ಆದವನಿಗೂ ಶಿಕ್ಷೆಯಾಗುತ್ತದೆ. ಅದೇ ರೀತಿಯಾಗಿ ತಪ್ಪಾಗಿ ಬರೆದಂಥ ಪಠ್ಯ ಪುಸ್ತಕಗಳ ವಿಬಾಗದಲ್ಲ ಸ್ಟ್ಯಾಂಡರ್ಡ್ ಇಲ್ಲದೇ ಇರತಕ್ಕದನ್ನು ಒಂದು ತಜ್ಞರ ಕಮಿಟಿ ಪರಿಶ್ರಮಪಟ್ಟು ಪರಿಶೀಲನೆ ಮಾಡಿ ಅಪ್ರೂವ್ ಮಾಡಿದ್ದು ಮಹಾ ಅಪರಾಧ. ತಪ್ಪು ಬರೆದಂಥ ಎಡಿಟರ್‌ಗೆ ಶಿಕ್ಷೆ ಮಾಡಲು ಹೋಗಬೇಡಿ. ಅದನ್ನು ಅನುಮೋದಿಸಿದಂಥ ಅಧಿಕಾರಿಗಳ ನಿರ್ಲಕ್ಷ್ಯತನಕ್ಕೆ ಶಿಕ್ಷೆ ಮಾಡಬೇಕು. ತಪ್ಪುತಪ್ಪಾಗಿರುವ ಪಠ್ಯ ಪುಸ್ತಕ ಒದಗಿಸಬಾರದು ಅವುಗಳನ್ನು ದೂರ ಇಡಬೇಕು. ಚಿಕ್ಕಮಕ್ಕಳ ಮನಸ್ಸು ಎಳೆ ಬಳ್ಳಿ ಯಂತೆ ಇರುತ್ತದೆ. ಯಾವ ಕಡೆ ಬೇಕಾದರೂ ತಿರುಗಿಸಬಹುದು. ಸಮಾಜದಲ್ಲಿ ಮುಂದೆ ಒಳ್ಳೇ ಪ್ರಜೆಗಳಾಗಿ ಬಾಳಬೇಕೆಂಬ ಉದ್ದೇಶ ಇರುವುದರಿಂದ ಇಂಥ ಪಠ್ಯ ಪುಸ್ತಕಗಳನ್ನು ಅಪ್ರೂವ್ ಮಾಡ ಬಾರದು. ಯಾವ ಮನಸ್ಸಿನಿಂದ ಇಂಥ ಪಠ್ಯ ಪುಸ್ತಕ ಅಪ್ರೂವ್ ಮಾಡಿದ್ದಾರೋ ಗೊತ್ತಿಲ್ಲ; ಅಂಥ ಅಧಿಕಾರಿಗಳಿಗೆ ಶಿಕ್ಷೆ ಮಾಡಿ. ಯಾಕೆಂದರೆ ಇಂದು ವಿದ್ಯಾರ್ಥಿಗಳಲ್ಲಿ ಒಳ್ಳೇ ನೀತಿ ಮಟ್ಟ ಸೌಜನ್ಯತೆ ಕಡಿಮೆಯಾಗಿದೆ. ದೇಶದ ಮುಂದುವರಿದ ಜನ ಜವಾಬ್ದಾರರಾದ ಜನ ಇದಕ್ಕೆ ಗಮನ ಕೊಡಬೇಕು. ಇದಲ್ಲದೆ ಇದಕ್ಕೆ ಸರಿಯಾದ ಕ್ರಮ ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕು ಎಂದು ಸೂಚಿಸುತ್ತೇನೆ. ಪಟ್ಟಣಗಳಲ್ಲಿ ಹೈ ಸ್ಕೂಲು ಕಾಲೇಜು ಮಾಡುವುದರ ಬದಲು ಹಳ್ಳಿಗಳಲ್ಲಿ ರೆಸಿಡೆನ್ಷಿಯಲ್ ಸ್ಕೂಲ್ಸ್ ಮಾಡಬೇಕು. ರೆಸಿಡೆನ್ಷಿಯಲ್ ಸ್ಕೂಲ್ಸ್ ಮಾಡುವುದರಿಂದ ಬೆಳವಣಿಗೆಗೆ ಅವಕಾಶವಿದ್ದು ಒಳ್ಳೇ ನಡತೆ ಕಲಿಯುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ರೆಸಿಡೆನ್ಷಿ ಯಲ್ ಸ್ಕೂಲ್ಸ್ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ಕೊನೆಯದಾಗಿ ವ್ಯವಸಾಯದ ಬಗ್ಗೆ ಹೇಳುವುದಾದರೆ, ನೀರಾವರಿ ಬಾವಿಗಳು ಹೆಚ್ಚಾಗ ಬೇಕು. ಇದಲ್ಲದೆ ರೈತರಿಗೆ ಸಕಾಲದಲ್ಲಿ ಉತ್ತಮ ಬೀಜ ಗೊಬ್ಬರ ಒದಗಿಸಬೇಕು. ಇದಕ್ಕೆ ಹೆಚ್ಚು ಉತ್ತೇಜನ ಕೊಡುವುದು ಅಗತ್ಯವಾಗಿದೆ. ನಮ್ಮದು ವ್ಯವಸಾಯದ ದೇಶ. ವ್ಯವಸಾಯ ಅಭಿವೃದ್ಧಿ ಹೊಂದಿದರೆ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ ಹಾಗು ಸರಕಾರಕ್ಕೆ ಬರತಕ್ಕಂಥ ವರಮಾನ ಕೂಡ ಹೆಚ್ಚಾಗುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ಈ ದಿವಸ ನನಗೆ ಮಾತ ನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎ. ರಾಮಚಂದ್ರ (ಸುಳ್ಯ).—ಮಾನ್ಯ ಉಪಾಧ್ಯಕ್ಷರೇ, ಹಣ ಕಾಸಿನ ಸಚಿವರು ಮಂಡಿಸಿದ ಆಯುವ್ಯಯ ಬಜೆಟ್ಟಿನ ಬಗ್ಗೆ ಒಂದೆರಡು ಮಾತು ಆಡಲು ನಾನು ಅಪೇಕ್ಷೆ ಪಡುತ್ತೇನೆ. ಬಜೆಟ್ಟು ಪ್ರತಿ ವರ್ಷ ಬರುತ್ತದೆ. ರಾಜ್ಯ ಬೊಕ್ಕಸದ ಉಪಯೋಗ ಕೆಲವೇ ಜನರಿಗೆ ಆಗುತ್ತದೆ. ಆಡಳಿತ ಪಕ್ಷದ ಜನರಿಗೆ ಹೆಚ್ಚು ಉಪಯೋಗವಾಗುವ ರೀತಿಯಲ್ಲಿ ಇದು ಬಂದು ಹೋಗುತ್ತದೆ. ಈ ರೀತಿ ಮಾಡುವುದರಿಂದ ಪ್ರಜೆಗಳು ಇದನ್ನು ಮೆಚ್ಚುವುದಿಲ್ಲ ಎಂದು ಹೇಳುವುದಕ್ಕೆ ಬಹಳ ವಿಷಾದ ಪಡುತ್ತೇನೆ.

ಸರಕಾರಕ್ಕೆ ತೆರಿಗೆ ಟ್ಯಾಕ್ಸ್ ಕೊಡುವಾಗ ಈ ಪಕ್ಷದವರು ಕೊಡುತ್ತಾರೆ ಆ ಪಕ್ಷದವರು ಕೊಡು ವುದಿಲ್ಲ ಎಂದು ಇಲ್ಲ. ಎಲ್ಲ ಪಕ್ಷದವರು ಎಲ್ಲಾ ಜನರು ಟ್ಯಾಕ್ಸ ಕೊಡುತ್ತಾರೆ. ದೇಶದ ಪ್ರಜೆಗ ಳಾದ ಬಡವನು ಕೂಲಿಯವನು ಸಹ ಟ್ಯಾಕ್ಸ ಕೊಡುತ್ತಾನೆ. ಸರಕಾರದ ಹಣ ಕಾರ್ಯಕಲಾಪಕ್ಕೆ ಹೋಗುವಾಗ್ಗೆ ಪಕ್ಷಪಂಗಡಗಳಿಗೆ ಹೊಂದಿಕೊಂಡು ಹೋಗುತ್ತದೆ. ದೇಶದಲ್ಲಿ ಇಂಥ ಆಡಳಿತ ಮಾಡಿದರೆ ದೇಶದ ಜನರು ಸುಮ್ಮನೆ ಬಿಟ್ಟು ಕೊಡಲಿಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಈಗ ನಾವು ಸ್ವಾತಂತ್ರ್ಯ ಪಡೆದುಕೊಂಡು ಇಪ್ಪತ್ತು ವರ್ಷಗಳಾಯಿತು. ಆದರೂ ಕೂಡ ಜನರು ವಿದ್ಯಾವಂತರು ಅಲ್ಲದೇ ಇದ್ದರೂ; ಕಳೆದ ಇಪ್ಪತ್ತು ವರ್ಷಗಳಲ್ಲಿ ಸರಕಾರ ಏನು ಮಾಡಿದೆ ಎನ್ನುವುದನ್ನು ತಿಳಿದು ಕೊಳ್ಳುತ್ತಾರೆ. ಸಾಮಾನ್ಯ ಬಡ ಜನರಿಗೆ ವಿದ್ಯೆ ಇಲ್ಲದಿದ್ದರೂ ಕೂಡ ಜನರು ಹೇಳಿದ್ದನ್ನು ಕೇಳಿ ತಿಳಿದ ಕೊಂಡಿದ್ದಾರೆ. ಆದುದರಿಂದ ಅಧಿಕಾರದಲ್ಲಿರುವವರು ಪಕ್ಷದ ಹಿತವನ್ನು, ಅಷ್ಟೇ ಮಾಡುವುದನ್ನು ನಿಲ್ಲಿಸಬೇಕು. ಒಂದೊಂದು ವಿಷಯ ಹೇಳುತ್ತೇನೆ. ಪಿ ಡಬ್ಲ್ಯೂ ಇಲಾಖೆಯಲ್ಲಿ ತಾಲ್ಲೂಕು ರಸ್ತೆ ಗಳ ವಿಷಯ ಬರುವುದಿಲ್ಲ. ನಮ್ಮ ಸುಳ್ಯ ತಾಲ್ಲೂಕಿನಲ್ಲಿ ರಸ್ತೆಗಳಿಲ್ಲ. ಹೊಸದಾಗಿ ಈ ತಾಲ್ಲೂಕು ಆಗಿ ನಾಲ್ಕೈದು ವರ್ಷವಾಯಿತು. ಅನೇಕ ಸಲ ಮನವಿ ಮಾಡಿಕೊಂಡಿದ್ದೇವೆ. ನಮ್ಮ ತಾಲ್ಲೂಕಿ

ನಲ್ಲಿ ಪೇಟೆಗೆ ಸಾಮಾನು ಸಾಗಾಣಿಕೆ ಮಾಡುವುದಕ್ಕೆ ಸರಿಯಾಗಿ ರಸ್ತೆ ಇಲ್ಲ. ಆದುದರಿಂದ ಹೋಗುವುದಕ್ಕೆ ಆಗುವುದಿಲ್ಲ. ಕೆಲವು ಕಡೆ ನೀರು ದಾಟಿ ಹೋಗುವುದಕ್ಕಾಗುವುದಿಲ್ಲ. ಇದರಿಂದ ಬಹಳ ಅನಾನುಕೂಲವಾಗಿದೆ. ಆದುದರಿಂದ ಒಳ್ಳೆ ರಸ್ತೆ ಆಗಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಪಿ ಡಬ್ಲ್ಯು ಡಿ ಮಂತ್ರಿಗಳನ್ನೂ ನಾಲ್ಕೈದು ಸಲ ಮನವಿ ಮಾಡಿಕೊಂಡಿದ್ದೇವೆ. ನಮಗೆ ರಸ್ತೆ ಬೇಕು ಎಂದು ಕೇಳಿಕೊಂಡು ಮಾನ್ಯ ಮುಖ್ಯ ಮಂತ್ರಿಯವರು ಬಂದಾಗ, ಲೋಕೋಪಯೋಗಿ ಶಾಖೆ ಮಂತ್ರಿಗಳು ಬಂದಾಗ ನಾಲ್ಕೈದು ಸಲ ಮನವಿ ಮಾಡಿಕೊಂಡಿದ್ದೇವೆ. ಅಲ್ಲಿ ಇವರು ವಾಗ್ದಾನ ಕೊಟ್ಟು ಬರುತ್ತಾರೆ, ಕೂಡಲೇ ಮಾಡುತ್ತೇವೆ ಏನು ಹಣದ ಅಭಾವವಿದ್ದರೂ ನಮ್ಮಿಂದ ಕೂಡಿದಷ್ಟು ಅತಿ ಶೀಘ್ರದಲ್ಲಿ ಮಾಡಿಬಿಡುತ್ತೇವೆ ಎಂದು ಭರವಸೆ ಕೊಟ್ಟು ಬರುತ್ತಾರೆ. ಜನರೂ ಅದನ್ನು ನಂಬುತ್ತಾರೆ, ಆದರೆ ನಾಲ್ಕು ವರ್ಷವಾದರೂ ಆ ರಸ್ತೆಗಳನ್ನು ನೋಡುವಂಥ ವ್ಯಕ್ತಿಯೇ ಅಲ್ಲಿಗೆ ಹೋಗಲಿಲ್ಲ. ಅಲ್ಲಿನ ಜನರು ದಿನೇ ದಿನೇ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದಾರೆ. ನಾನು ಹೋದಾಗ ಮತ್ತು ಮಂತ್ರಿಗಳ ಹೋದಾಗಲೆಲ್ಲ ಹೇಳಿಕೊಳ್ಳುತ್ತಾರೆ. ಇದಕ್ಕಾಗಿ ಮಂತ್ರಿಗಳು ಕೂಡ ಅಲ್ಲಿಗೆ ಹೆಚ್ಚಾಗಿ ಬರುವುದಿಲ್ಲ ಎಂದು ಕಾಣುತ್ತದೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಬಂದಿದ್ದಾಗ ಅಲ್ಲಿನ ಜನಗಳು ರಸ್ತೆ ಇಲ್ಲದೆ ಬಹಳ ಕಷ್ಟವಾಗಿದೆ, ಮಳೆಗಾಲದಲ್ಲಿ ಎಲ್ಲೂ ಹೋಗುವುದಕ್ಕಾಗುವುದಿಲ್ಲ, ಪಟ್ಟಣದವರು ಪಟ್ಟಣದಲ್ಲಿಯೇ ಇರಬೇಕು, ಹಳ್ಳಿಯವರು ಹಳ್ಳಿಯಲ್ಲಿಯೇ ಇರಬೇಕು ಎಂದು ನಿರ್ಧಿಷ್ಟವಾಗಿ ಹೇಳಿದ್ದರಮೇಲೆ ಕೂಡಲೆ ಅದನ್ನು ಮಂಜೂರು ಮಾಡಿ ರಸ್ತೆಯನ್ನು ಮಾಡಿಸುತ್ತೇನೆಂದು ಹೇಳಿದ್ದಾರೆ.

ತಾಲ್ಲೂಕು ಬೋರ್ಡ್ ರಸ್ತೆಗಳನ್ನು ಕೂಡ ಪಿ.ಡಬ್ಲ್ಯು ಇಲಾಖೆಗೆ ತೆಗೆದುಕೊಂಡಿದ್ದಾರೆ ಒಂದು ಕಡೆ ತಾಲ್ಲೂಕು ಬೋರ್ಡ್‌ನವರ ಕೆಳಗೆ ಇರುವ ರಸ್ತೆಗಳನ್ನು ಮಾಡಿಸುವುದಕ್ಕೆ ಅವರ ಹತ್ತಿರ ಹಣ ಇರುವುದಿಲ್ಲ. ನಾವು ಕೇಳಿದರೆ ತಾಲ್ಲೂಕು ಬೋರ್ಡ್‌ನಲ್ಲಿ ಹಣವಿಲ್ಲ, ಎಂದು ಹೇಳುತ್ತಾರೆ ಲೋಕೋಪಯೋಗಿ ಮಂತ್ರಿಗಳ ಹತ್ತಿರ ಹೋಗಿ ತಾಲ್ಲೂಕು ಬೋರ್ಡ್ ರಸ್ತೆಗಳನ್ನು ತೆಗೆದುಕೊಂಡು ನೀವಾದರೂ ಅವುಗಳನ್ನು ಸರಿ ಮಾಡಿಸಿ ಎಂದರೆ ನಮ್ಮಲ್ಲಿಯೂ ಹಣವಿಲ್ಲ ಎಂದು ಹೇಳುತ್ತಾರೆ. ಕೋಟಿಗಟ್ಟಲೆ ಹಣ ಇಟ್ಟುಕೊಂಡಿರುತ್ತಾರೆ ಬಹಳ ಮುಖ್ಯವಾಗಿ ಎಲ್ಲಿ ರಸ್ತೆಗಳಿಲ್ಲವೋ ಅಲ್ಲಿಗೆ ಸ್ವಲ್ಪವಾದರೂ ರಸ್ತೆ ಕೆಲಸಕ್ಕಾಗಿ ಹಣವನ್ನು ಒದಗಿಸಿದರೆ ಹಳ್ಳಿಯ ಜನರಿಗೆ ಸ್ವಲ್ಪ ರಕ್ಷಣೆಯನ್ನು ಕೊಟ್ಟ ಹಾಗೆ ಆಗುತ್ತದೆ. ಆದರೆ ಸರ್ಕಾರದವರು ಮಾಡುತ್ತಿರುವುದನ್ನು ನೋಡಿದರೆ ಏನು ಕಂಡು ಬರುತ್ತದೆಯೆಂದರೆ ಸರ್ಕಾರ ನಮ್ಮ ಹಳ್ಳಿಗಳನ್ನು ನೋಡುವುದಿಲ್ಲ, ಎಲ್ಲಿಯಾದರೂ ದೊಡ್ಡ ದೊಡ್ಡ ಮಂತ್ರಿಗಳು ಅಥವಾ ಕಾಂಗ್ರೆಸ್ ಮುಖಂಡರು ಇರುತ್ತಾರೆ ಅಲ್ಲಿಗೆ ಬಹುಶಃ ಬೇಕಾದಷ್ಟು ಹಣವನ್ನು ಕೊಟ್ಟು ನಮ್ಮನ್ನು ಗಮನಿಸುವುದಿಲ್ಲ ಎಂದು ಗೊತ್ತಾಗುತ್ತದೆ. ಇದನ್ನು ಯಾರೂ ಆ ಜನರಿಗೆ ಹೇಳಿಕೊಡಬೇಕಾಗಿಲ್ಲ.

ಮದ್ಯಪಾನ ನಿಷೇದದ ವಿಷಯದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇದನ್ನು ಹೇಳಲಿಕ್ಕೆ ನನಗೆ ಬೇಸರವಾಗುತ್ತದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯವರು ಹೇಳಿದರು "ಈ ಮದ್ಯಪಾನದಿಂದ ಬರುವ ತೆರಿಗೆಯಿಂದ ನಾವು ದೇಶವನ್ನು ಆಡಳಿತ ಮಾಡುವುದು ಸರಿಯಲ್ಲ, ಆ ತರಹ ಆಡಳಿತ ಮಾಡಲಿಕ್ಕೆ ನಾನು ಎಂದೆಂದಿಗೂ ಒಪ್ಪಲಿಕ್ಕಿಲ್ಲ" ಎಂದು ಹೇಳಿದರು. ಬಹುಶಃ ಈ ಮಾತನ್ನು ಕಾಂಗ್ರೆಸ್ಸಿನವರಿಗೆ ಮರೆತುಹೋಯಿತೇನೋ ಎಂದು ದುಃಖವಾಗುತ್ತದೆ. ಗಾಂಧಿಜಿಯವರನ್ನು ಈ ಜನ ಮರೆತಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತಿದೆ. ಗಾಂಧೀಜಿಯವರ ತತ್ವಗಳನ್ನು ಬಿಟ್ಟು ಇವರು ಕಾಂಗ್ರೆಸ್ ತತ್ವಗಳನ್ನು ಬಿಡಬಹುದು ಎಂದು ಹೇಳುವವರೆಗೆ ಬಂದಿವೆ. ಇವರ ಆಡಳಿತದಲ್ಲಿ ಮದ್ಯಪಾನ ನಿಷೇದ ಕಾನೂನನ್ನು ತೆಗೆದುಬಿಟ್ಟರು. ಅದನ್ನು ತೆಗೆದದ್ದರಿಂದ ಯಾರಿಗೆ ನಷ್ಟವಾಯಿತು ಎನ್ನುವುದಕ್ಕಿಂತ ಸರ್ಕಾರಕ್ಕೆ ಸ್ವಲ್ಪ ಬಣ ಬರುವಂತೆ ಆಯಿತು. ಬಡ ಜನತೆಯನ್ನು ಇದರಿಂದ ಉದ್ಧಾರ ಮಾಡಿದಂತೆ ಆಯಿತೋ? ಎಂದಿಗೂ ಇಲ್ಲ. ಅವರ ಮೇಲೆ ಈಗ ಪೆಟ್ಟು ಬಿದ್ದಿದೆ. ಸರ್ಕಾರಕ್ಕೆ ಹಣ ಬೇಕು ಎಂದು ಯಾರಾದರೂ ಉದ್ಧಾರವಾಗಲಿ, ಯಾರಾದರೂ ಸಾಯಲಿ ಎನ್ನುವ ತತ್ವವನ್ನು ಇವರು ಈಗ ಆಚರಿಸುತ್ತಿದ್ದಾರೆ. ಜನತೆಯ ಪಾಡಿಗೆ ಏನಾದರೂ ಆಗಲಿ ನಮ್ಮ ಸರ್ಕಾರಕ್ಕೆ ಹಣ ಬರಬೇಕು, ನಾವು ದರ್ಬಾರು ಮಾಡಿಕೊಂಡು ಬೇಕಾದ ರಾಜಭೋಗಗಳನ್ನು, ಅನುಭವಿಸಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಕೊಂಡು ನಾವು ಸುಖಜೀವಿಗಳಾಗಬೇಕು ಎನ್ನು ಕಾರಣದಿಂದ ಮದ್ಯಪಾನ ನಿಷೇಧವನ್ನು ತೆಗೆದರು. ಮದ್ಯಪಾನ ನಿಷೇಧವನ್ನು ತೆಗೆದದ್ದರಿಂದ ಹರಿಜನರಿಗೆ ಬಹಳ ಕಷ್ಟವಾಗಿದೆ. ಮೊದಲು ಮದ್ಯಪಾನ ನಿಷೇದ ಕಾನೂನು ಇದ್ದಾಗ ಹರಿಜನರು ಕುಡಿಯಲಿಲ್ಲದೇ ಎಂದು ಯಾರಾದರೂ ಕೇಳಬಹುದು. ಕಾನೂನು ಇರುವಾಗ ಹೆಚ್ಚು ಹರಿಜನರು ಕುಡಿಯಲಿಕ್ಕೆ ಹೆದರುತ್ತಿದ್ದರು. ಕುಡಿಯಬಾರದೆಂದಲ್ಲ, ಕುಡಿದರೆ ಪೋಲೀಸಿನವರು ಜೈಲಿನಲ್ಲಿ ಇಡುತ್ತಾರೆ ಎನ್ನುವ ಹೆದರಿಕೆಯಿಂದ ನೂರಕ್ಕೆ 99 ಜನರು ಕುಡಿಯುವುದನ್ನು ಕಡಿಮೆ ಮಾಡಿದ್ದರು. ನೀವು ಲೆಕ್ಕ ಹಾಕಿ ನೋಡಿದರೆ ಗೊತ್ತಾಗುತ್ತದೆ, ಆ ಕಾಲದಲ್ಲಿ

(ಶ್ರೀ ಎ. ರಾಮಚಂದ್ರ)

ಸಾರಾಯಿ ಅಥವಾ ಕಳ್ಳು ಕುಡಿದವರ ಎಲ್ಲಿಯಾದರೂ ನೂರಕ್ಕೆ ಒಬ್ಬ ಹರಿಜನ ಇರುವುದು ಕೂಡ ಕಷ್ಟವಾಗಿತ್ತು. ಬಾಕಿಯವರು ಇದ್ದುದೇ ಹೆಚ್ಚು. ಆದರೆ ಈಗ ಈ ಕಾನೂನನ್ನು ತೆಗೆದುಬಿಟ್ಟ ಕೂಡಲೇ ಎಲ್ಲರೂ ಕುಡಿಯಲಿಕ್ಕೆ ಶುರು ಮಾಡಿದ್ದಾರೆ. ನಿಮ್ಮ ಉದ್ದೇಶವೇನೆಂದರೆ ಹರಿಜನರನ್ನು ಒಂದು ಹೊಂಡದಲ್ಲಿ ಇಳಿಸಬೇಕು, ಅವರು ಮೇಲೆ ಬಾರದ ಹಾಗೆ, ಅವರು ಕೂಲಿ ಸಂಪಾದನೆ ಮಾಡಿದರೂ ಕುಡಿತದಲ್ಲಿಯೇ ಅವರು ಬಿದ್ದು ಸಾಯಬೇಕು ಅವರು ಮುಂದೆ ಬರಬಾರದು ಎನ್ನುವ ಅಪೇಕ್ಷೆ ಇದೆ ಎಂದು ನನಗೆ ಕಂಡುಬರುತ್ತದೆ. ಏಕೆ ಮದ್ಯಪಾನ ನಿಷೇಧ ಕಾನೂನನ್ನು ತೆಗೆದಿರಿ ಎಂದು ನಾನು ಕೇಳುತ್ತೇನೆ. ಸರಿಯಾಗಿ ಹತೋಟಿಯಲ್ಲಿಟ್ಟು ಕೊಳ್ಳುವುದಕ್ಕಾಗಲಿಲ್ಲ, ಕಟ್ಟುನಿಟ್ಟಿನಲ್ಲಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ, ಜನ ಕಾನೂನನ್ನು ಉಲ್ಲಂಘಿಸುತ್ತಾರೆ, ಇದ್ದನೆಲ್ಲ ತಿಳಿದೂ ಜನಾಭಿಪ್ರಾಯದ ಮೇಲೆ ಇದನ್ನು ತೆಗೆಯುತ್ತೇವೆಂದು ಹೇಳುತ್ತಿದ್ದಾರೆ. ಕಾನೂನನ್ನು ನಡೆಸಲಿಕ್ಕೆ ಆಗುವುದಿಲ್ಲ ಎಂದರೆ ಆ ಸರ್ಕಾರ ಇದ್ದು ಏನು ಉಪಯೋಗ? ಕಾನೂನನ್ನು ಪಾಲನೆ ಮಾಡತಕ್ಕ ಶಕ್ತಿ ಇಲ್ಲದ ಸರ್ಕಾರ ಇದ್ದೂ ಏನು ಉಪಯೋಗ ಬಂತು? ಅಂಥ ಸರ್ಕಾರ ಏನು ಮಾಡಬೇಕಾಗಿತ್ತು ಎಂದರೆ ಕಾನೂನನ್ನು ರದ್ದುಮಾಡುವ ಬದಲು ಸರ್ಕಾರವೇ ರಾಜೀನಾಮೆ ಕೊಟ್ಟು ಹೊರಗೆ ಹೋಗಬೇಕಾಗಿತ್ತು. ಈ ದೇಶದ ಜನತೆ ಕಾನೂನು ಮಾಡಿದರೆ ಅದನ್ನು ಪಾಲನೆ ಮಾಡುವುದಕ್ಕಾಗಲಿಲ್ಲ ಎಂದು ತಿಳಿದಾಗ ಸರ್ಕಾರವೇ ರಾಜೀನಾಮೆ ಕೊಟ್ಟು ಹೊರಗೆ ಹೋಗಬೇಕಾಗಿತ್ತು. ಹಾಗೆ ಮಾಡದೆ ಇದ್ದುದರಿಂದ ಗಾಂಧೀಜಿಯವರ ತತ್ವವನ್ನೇ ನಷ್ಟ ಮಾಡಿದಂತಾಗುತ್ತದೆ.

ಹರಿಜನರಿಗೆ 18 ಪರ್ಸೆಂಟ್ ಉದ್ಯೋಗವನ್ನು ಒದಗಿಸಿಕೊಡುತ್ತೇವೆಂದು ಹೇಳಿದ್ದಾರೆ. ಇದೇ ರೀತಿ ವಿದ್ಯೆಗೂ ಕೊಡುತ್ತೇವೆ ಎಂದು ಹೇಳಿದ್ದಾರೆ, ಭೂಮಿ ಕೊಡುತ್ತೇವೆಂದು ಹೇಳಿದ್ದಾರೆ. ವಿದ್ಯೆಯನ್ನು ಬಹಳಕಷ್ಟದಲ್ಲಿ ಗಂಡಾಂತರದಲ್ಲ, ಅಲ್ಪಸ್ವಲ್ಪ ಕಲಿತಿರುತ್ತಾರೆ. ಹಾಗೆ ಕಲಿತರೂ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ನೋಡಿದರೆ ನೂರಿನ್ನೂರು ಎಸ್. ಎಸ್. ಎಲ್. ಸಿ. ಕಲಿತವರು ಕೆಲಸಕ್ಕಾಗಿ ಕಾದಿರುತ್ತಾರೆ. ಆ ಜನರಿಗೆ ಬಿ. ಎ. ಕಲಿಯುವಂಥ ಅವಕಾಶವೇ ಇಲ್ಲ. ಎಸ್. ಎಸ್. ಎಲ್. ಸಿ. ಮಾಡಿಕೊಂಡು ಒಂದು ಕೆಲಸವನ್ನು ಹುಡುಕೋಣ ಎಂದು ಪ್ರಯತ್ನ ಮಾಡಿದರೆ ಏಳೆಂಟು ವರ್ಷಗಳಿಂದಲೂ ಅವರಿಗೆ ಉದ್ಯೋಗ ಸಿಕ್ಕಿಲ್ಲ. ನಾನು ದಕ್ಷಿಣ ಕನ್ನಡ ಜಿಲ್ಲೆಯ ಡೆಪ್ಯುಟಿ ಕಮೀಷನರಲ್ಲಿ ಒಂದು ಕಾಗದ ಕೊಟ್ಟು ಕೇಳಿದೆ, ಸ್ವಾಮಿ ನಿಮ್ಮ ಇಲಾಖೆಯಲ್ಲಿ ಹರಿಜನರಿಗೆ 18 ಪರ್ಸೆಂಟ್ ಕೆಲಸ ಕೊಟ್ಟಿದ್ದೀರಾ, ಆ ಪ್ರಮಾಣದಲ್ಲಿ ಆ ಜನರು ಕೆಲಸದಲ್ಲಿದ್ದಾರೆಯೇ ಎಂದು ಕೇಳಿದೆ. ಏಕೆ ಹಾಗೆ ಕೇಳಿದೆ ಎಂದರೆ ಅವರು ಕೆಲಸ ಕೊಡುವಾಗ ಹರಿಜನರನ್ನು ಬಿಟ್ಟು ಬೇರೆ ಜಾತಿಯವರಿಗೆ ಕೆಲಸ ಕೊಡುತ್ತಿದ್ದರು. ಅದಕ್ಕೆ ಅವರು ಕೊಟ್ಟ ಉತ್ತರ ಹರಿಜನರಲ್ಲಿ ಬೇಕಾದ ವಿದ್ಯಾರ್ಹತೆ ಇದ್ದವರು ಇದ್ದಿಲ್ಲ, ಆದಕಾರಣ ಅವರಿಗೆ ಕೆಲಸ ಕೊಡಲಿಕ್ಕೆ ಅವಕಾಶವಾಗಲಿಲ್ಲ, ಇನ್ನು ಮುಂದೆ ಕೊಡುತ್ತೇವೆಂದು ಹೇಳಿದರು. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಜಿನಲ್ಲಿ ನೂರಿನ್ನೂರು ಜನ ಕಾದಿರುವಾಗ ಅವರೆಲ್ಲ ಬೇಕಾದ ಅರ್ಹತೆಯನ್ನು ಪಡೆದವರಲ್ಲವೇ ಎಂದು ಕೇಳುತ್ತೇನೆ. ಇದಕ್ಕೆ ಏನು ಉತ್ತರ ಕೊಡಬೇಕು ಎನ್ನುವುದು ಅರ್ಥವಾಗುವುದಿಲ್ಲ, ಒಂದು ಕಡೆಯಲ್ಲಿ 18 ಪರ್ಸೆಂಟ್ ಉದ್ಯೋಗ ಕೊಡುತ್ತೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ವಿದ್ಯಾರ್ಹತೆ ಇದ್ದವರು ಇಲ್ಲ ಎಂದು ಹೇಳುತ್ತಾರೆ. ಸರಿಯಾದ ಪರ್ಸೆಂಟೇಜ್ ಇದೆಯೋ ಇಲ್ಲವೋ ಎನ್ನುವುದನ್ನು ಡೆಪ್ಯುಟಿ ಕಮೀಷನರು ನೋಡದೆ ಇದ್ದರೂ ಸರ್ಕಾರದವರು ಎಷ್ಟರಮಟ್ಟಿಗೆ ಅದನ್ನು ಗಮನಿಸಿದ್ದಾರೆ? ಹರಿಜನರಿಗೆ 18 ಪರ್ಸೆಂಟ್ ಉದ್ಯೋಗಗಳು ಸಿಕ್ಕಿವೆಯೇ ಇಲ್ಲವೇ ಎನ್ನುವುದನ್ನು ಸರ್ಕಾರ ಏಕೆ ಗಮನಿಸಲಿಲ್ಲ. ಮಾನ್ಯ ಸಮಾಜ ಕಲ್ಯಾಣ ಸಚಿವರು ಸಮಯಕ್ಕೆ ಸರಿಯಾಗಿ ಬಂದರು. ಅವರಾದರೂ ಹರಿಜನರ ಪರವಾಗಿ ಅವರಿಗೆ ಸರಿಯಾದ ಉದ್ಯೋಗ ಸಿಕ್ಕಿದೆಯೋ, ಸಿಕ್ಕಲಿಲ್ಲವೋ, ಸಿಕ್ಕದೆ ಇದ್ದರೆ ಏನು ಕಾರಣದಿಂದ ಸಿಕ್ಕಲಿಲ್ಲ, ವಿದ್ಯಾವಂತರಾದವರಿಲ್ಲವೋ ಎಂದು ಗಮನಿಸಬೇಕು. ಇದು ಸಮಾಜಕಲ್ಯಾಣ ಇಲಾಖೆಯ ಸಚಿವರ ಮುಖ್ಯ ಕರ್ತವ್ಯ. ಅವರೂ ಕೂಡ ಈ ಕೆಲಸಕ್ಕೆ ಹೋಗಲಿಲ್ಲ ಎಂದು ಕಾಣುತ್ತದೆ. ಸಂಬಂಧಪಟವರೇ ಆ ಕೆಲಸಕ್ಕೆ ಹೋಗುವುದಿಲ್ಲ ಎಂದರೆ ಅವರ ಸುಧಾರಣೆಯನ್ನು ಹೇಗೆ ಮಾಡುತ್ತಾರೆ?

ಶ್ರೀ ಜಿ. ನಾರಾಯಣ ಗೌಡ (ದೇವನಗರ್).—ಇಂಪ್ರೂವ್ ಮಾಡಿದ್ದೇವೆ. ಒಂಭತ್ತು ಪರ್ಸೆಂಟ್ ನಿಂಪ್ರೂವ್ ಆಗಿದೆ.

ಶ್ರೀ ಎ. ರಾಮಚಂದ್ರ.—ನೀವು ಇಂಪ್ರೂವ್ ಮಾಡಿಲ್ಲ ಎಂದು ನಾನು ಹೇಳುತ್ತಿದ್ದೇನೆ. ನೀವು ಉತ್ತರ ಕೊಡುವುದಕ್ಕೆ ಮಾತ್ರ ಇಲ್ಲಿ ಕುಳಿತಿದ್ದೀರಿ. ಅಲ್ಲಲ್ಲಿ ಹೋಗಿ ನೋಡಿ, ಎಷ್ಟು

ಪರ್ಸೆಂಟ್ ಹರಿಜನರು ನಿಮ್ಮ ಇಲಾಖೆಯಲ್ಲಿದ್ದಾರೆಂದು ಕೇಳಿ ಲೆಕ್ಕ ಹಾಕಿ ಒಂದು ಲಿಸ್ಟ್ ತೆಗೆದು ಕೊಳ್ಳಿ. ಆಗ ಒಂದು ಉತ್ತರವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬರೇ ಒಬ್ಬರು ಬಿ.ಎ. ಎಲ್. ಎಲ್. ಬಿ., ಮಾಡಿದ್ದಾರೆ. ನಾಲ್ಕು ವರ್ಷದಿಂದ ಅರ್ಜಿ ಹಾಕುತ್ತಿದ್ದಾರೆ. ತಮಗೆ ಅರ್ಜಿ ಹಾಕಿದ್ದಾರೆ, ಮುಖ್ಯ ಮಂತ್ರಿಗಳಿಗೆ ಅರ್ಜಿ ಹಾಕಿದ್ದಾರೆ, ಸರ್ವಿಸ್ ಕಮಿಷನ್ನಿಗೆ ಅರ್ಜಿ ಹಾಕಿದ್ದಾರೆ. ಆದರೆ ಇಷ್ಟರವರೆಗೂ ಒಂದು ಕಡೆಯಿಂದಲೂ ಇಂಟಿಮೇಷನ್ ಬಂದಿಲ್ಲ ನಮಲ್ಲಿ ಡಬಲ್ ಡಿಗ್ರಿ ಮಾಡುವವರೇ ಕಷ್ಟ. ಎಲ್ಲಿಯೋ ಒಬ್ಬ ಡಬಲ್ ಡಿಗ್ರಿ ಪಡೆದಿದ್ದರೆ ಅವನಿಗೆ ಕೆಲಸ ಸಿಕ್ಕುವುದಿಲ್ಲ ಎಂದರೆ ಅವನಿಗೆ ಬೇಕಾದ ವಿದ್ಯಾ ರ್ಹತೆ ಇಲ್ಲವೆ ? ಅವನಿಗೆ ಕೊಡಲಿಕ್ಕೆ ಆಗಲಲ್ಲ ಎಂದು ಹೇಳಿ. ಈಗ ಪರ್ಸೆಂಟೇಜ್ ನೋಡಿ ಡಿಗ್ರಿ ಪಡೆದಿರುವವರು ಎಷ್ಟು ಮಂದಿ ಇದ್ದಾರೆ ಎಂಬುದನ್ನು ಗಮನಿಸಿ ನಮ್ಮವರೆಗೆ—ಹರಿಜನರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಡಬೇಕು. ನಾನು ಇದನ್ನು ಯಾರ ಮೇಲಿನ ದ್ವೇಷದಿಂದಲೂ ಹೇಳುತ್ತಿಲ್ಲ. ಸ್ವಾತಂತ್ರ್ಯ ಬಂದು 20 ವರ್ಷಗಳಾಗಿವೆ. ಇನ್ನೂ ಸುಧಾರಣೆ ಮಾಡದಿದ್ದರೆ ಇನ್ನೆಷ್ಟು ವರ್ಷ ಬೇಕು ? ಯಾವಾಗ ಹರಿಜನರಿಗೆ ಕೊಡಬೇಕಾದ ಪ್ರಾತಿನಿಧ್ಯವನ್ನು ಪೂರ್ಣವಾಗಿ ಕೊಡುವುದು ! ಇನ್ನು ಮುಂದಾದರೂ ಬಡ ಜನರ ಕಡೆ ಸ್ವಲ್ಪ ದೃಷ್ಟಿಯಿಟ್ಟು ಯೋಜನೆಗಳಿಗಾಗಿ ಬೇಕಾದಷ್ಟು ಹಣ ಕೊಡುವಾಗ ಪಂಚವಾರ್ಷಿಕ ಯೋಜನೆಗಳಲ್ಲಿ ಹರಿಜನರಿಗೆ ಇಷ್ಟು ಒದಗಿಸಿದ್ದೇವೆ ಎಂದು ತೋರಿಸುವಾಗ ಅದು ಹರಿಜನರಿಗೆ ತಲುಪುವಂತೆ ನೋಡಿಕೊಳ್ಳಬೇಕಾದ್ದು ಅಗತ್ಯ ಎಷ್ಟೋ ಹಣ ಒದಗಿಸಿರುವುದು ಈಗ ಲ್ಯಾಪ್ಸ್ ಆಗುತ್ತಿದೆ. ಅದಕ್ಕೆ ಲೆಕ್ಕ ಕೊಡಬೇಕು, ಒಮ್ಮೆ ಒದಗಿಸಿದ ಹಣ ಕಾದಿರಿಸಿದ್ದು ಸರಿಯಾಗಿ ಅದು ಖರ್ಚಾಗದಿದ್ದಾಗ ಅದನ್ನು ಪತ್ರಿಕೆಗಳಲ್ಲಿ ತಿಳಿಸಬೇಕು, ಹಾಗೆ ಮಾಡುತ್ತಿಲ್ಲ. ಸುಮ್ಮನೆ ಇಷ್ಟು ಹಣ ಒದಗಿಸಿದ್ದೇವೆಂದು ಹೇಳಿದರೆ ಉಪಯೋಗವಾಗುವುದಿಲ್ಲ. ಇದನ್ನು ಸ್ವಲ್ಪ ಆಲೋಚನೆ ಮಾಡಬೇಕು. ಹತ್ತು ವರ್ಷಗಳಲ್ಲಿ ಹರಿಜನರನ್ನು ಉದ್ಧಾರ ಮಾಡುತ್ತೇವೆ ಎಂದು ಭರವಸೆ ಕೊಡುತ್ತೀರಿ. ಆದರೆ ಆ ರೀತಿ ಮಾಡು ತ್ತಿಲ್ಲ. ನಿಮ್ಮಿಂದ ಅದಾಗುವುದಿಲ್ಲ. ಆದುದರಿಂದ ಒಂದು ಮಾತನ್ನು ಹೇಳುತ್ತೇನೆ. ಏನೆಂದರೆ, ಈ ಸರಕಾರ ಈಗ ಉಳಿದಿರುವುದು ಬರೀ ಹರಿಜನರಿಂದ. ಇದನ್ನು ಪ್ರತಿಜ್ಞೆ ಮಾಡಿ ಹೇಳುತ್ತೇನೆ. ಅವರಿಲ್ಲದಿದ್ದರೆ ಈ ಕಾಂಗ್ರೆಸ್ ಸರಕಾರ ಉಳಿಯುವುದಿಲ್ಲ. ಈಗ ಕಾಂಗ್ರೆಸ್ಸಿನ ಕಡೆ ಇರುವ 22 ಜನ ಹರಿಜನರು ಈ ಕಡೆ (ವಿರೋಧ ಪಕ್ಷದ ಕಡೆ) ಬಂದರೆ ಸರಕಾರ ಉಳಿಯುವುದಿಲ್ಲ. ಹರಿಜನರ ಆಧಾರದಿಂದಲೇ ನಿಮ್ಮ ಸರಕಾರ ನಡೆಯುತ್ತಿದ್ದರೂ ಅವರ ಉದ್ಧಾರಮಾಡಬೇಕೆಂಬ ಭಾವನೆ ನಿಮಗೆ ಬರುತ್ತಿಲ್ಲ. ಸರಕಾರದ ಮನಸ್ಸು ಕಲ್ಲಿನಂತಿದೆ. ಇದನ್ನು ನೋಡಿ ಆಶ್ಚರ್ಯವಾಗು ತ್ತಿದೆ. ಈಗಲಾದರೂ ಮನಸ್ಸನ್ನು ಸ್ವಲ್ಪ ಬದಲಾವಣೆ ಮಾಡಿಕೊಂಡು ಬಡ ಜನರನ್ನು ಉದ್ಧಾರ ಮಾಡಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್ಥಿಕ ಮಂತ್ರಿಗಳು ಸಭೆಯ ಮುಂದಿಟ್ಟಿರುವ 1968-69 ನೆಯ ಸಾಲಿನ ಮುಂಗಡ ಆಯವ್ಯಯ ಪಟ್ಟಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಆಯವ್ಯಯ ಪತ್ರವನ್ನು ನೋಡಿ ಬಹಳ ಸಂತೋಷ ವಾಯಿತು. ನಮ್ಮ ರಾಜ್ಯದ ಹಣಕಾಸಿನ ಸ್ಥಿತಿ ಇಷ್ಟೊಂದು ಭದ್ರವಾಗಿದೆಯೆಂದು ಕಂಡು ಹಣಕಾಸಿನ ಸಚಿವರು ಮಂಡಿಸಿದ ಆಯವ್ಯಯ ಪಟ್ಟಿ ಬಹಳ ದೂರದೃಷ್ಟಿಯಿಂದ ಕೂಡಿದೆ ಎಂದು ಹೇಳಿದರೆ ತಪ್ಪಾಗಲಾರದು. 1964-65ರಲ್ಲಿ ಮತ್ತು 1965-66ರಲ್ಲಿ ನಮ್ಮ ರಾಜ್ಯದಲ್ಲಿ ಅನಾವೃಷ್ಟಿ ಯುಂಟಾಗಿ ಕ್ಷಾಮ ತಲೆದೋರಿದುದರಿಂದಲೂ ಮತ್ತು ಭಾರತ—ಪಾಕಿಸ್ಥಾನಗಳ ವಿರಸದಿಂದ ವಿದೇಶೀ ವಿನಿಮಯ ದೊರಕದಿದ್ದುದರಿಂದಲೂ ಮತ್ತು ರೂಪಾಯಿ ಅಪಮೌಲ್ಯ ಇಷ್ಟೆಲ್ಲಾ ತೊಂದರೆ ಇದ್ದರೂ ನಮ್ಮ ಹಣಕಾಸಿನ ಸ್ಥಿತಿ ಇಷ್ಟೊಂದು ಭದ್ರವಾಗಿರುವುದನ್ನು ನೋಡಿದರೆ ನಿಜವಾಗಿಯೂ ಬಹಳ ಸಂತೋಷವಾಗುತ್ತದೆ. ಈ ಸಂದರ್ಭದಲ್ಲಿ ರಾಜ್ಯದ ನೌಕರರ ತುಟ್ಟಿಭತ್ಯವನ್ನು ಹೆಚ್ಚಿಸಿರುವುದು ಮತ್ತು ನಿವೃತ್ತ ನೌಕರರ ತುಟ್ಟಿಭತ್ಯವನ್ನು ಹೆಚ್ಚಿಸಿರುವುದು ನಿಜವಾಗಿಯೂ ಪ್ರಶಂಸನೀಯವಾಗಿದೆ. ಈ ಆಯವ್ಯಯ ಪತ್ರದಲ್ಲಿ ಯಾವ ವಿಧವಾದ ಹೊಸ ತೆರಿಗೆಯನ್ನು ಹಾಕದೆ 11.98 ಕೋಟಿ ರೂಪಾಯಿಗಳ ಉಳಿತಾಯ ಬಜೆಟ್ ತಯಾರಿಸಿರುವುದು ಪ್ರಶಂಸನೀಯವಾದದ್ದಾಗಿದೆ. ಆಯ ವ್ಯಯ ಪಟ್ಟಿಯ 11ನೆಯ ಪುಟದಲ್ಲಿ ವ್ಯವಸಾಯದ ಬಗ್ಗೆ ಸಚಿವರು ಬಹಳ ಸ್ವಾರಸ್ಯವಾಗಿ ನಿರೂಪಿಸಿ ದ್ದಾರೆ. ಈ ಸಾಲಿನಲ್ಲಿ ತೆಗೆದುಕೊಂಡ ಕಾರ್ಯಕ್ರಮ, ಮುಂದಿನ ಸಾಲಿನಲ್ಲಿ ತೆಗೆದುಕೊಳ್ಳುವ ಕಾರ್ಯಕ್ರಮ—ಇವುಗಳ ಬಗ್ಗೆ ವಿಶದವಾದ ಪಟ್ಟಿಯನ್ನು ಅಳವಡಿಸಿದ್ದಾರೆ. ಯಾವುದೇ ದೇಶ ಅಥವಾ ರಾಜ್ಯ ಪ್ರಗತಿಪರವಾಗಿ ನಡೆಯಬೇಕಾದರೆ ವ್ಯವಸಾಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು. ಸ್ವಾತಂತ್ರ್ಯ ಗಳಿಸಿ 20 ವರ್ಷವಾದರೂ ಆಹಾರದ ವಿಷಯದಲ್ಲಿ ಇನ್ನೂ ಸ್ವಾವಲಂಬಿ

(ಶ್ರೀ ಜಿ. ಬಸವಣ್ಣಪ್ಪ)

ಗಳಾಗಿಲ್ಲ. ಇದಕ್ಕೆ ಕಾರಣವನ್ನು ಹಿನ್ನೆಲೆಯನ್ನು ಪರಿಶೀಲಿಸಬೇಕು. ಮುಂದುವರೆದ ದೇಶವಾದ ಅಮೇರಿಕಾದಲ್ಲಿ ವ್ಯವಸಾಯ ಅವಲಂಬಿಸಿರುವವರು ಸೇಕಡ 13 ಮಂದಿ ಇದ್ದರೂ ಅಲ್ಲಿ ಪ್ರಗತಿಪರ ವಾಗಿ ಕೆಲಸ ನಡೆದು ಅಲ್ಲಿನವರು ಇಡೀ ದೇಶಕ್ಕೆ ಆಹಾರವನ್ನು ಸರಬರಾಯಿ ಮಾಡುವುದಲ್ಲದೆ ಇತರ ದೇಶಗಳಿಗೂ ಕೂಡ ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ಕ್ರಾಂತಿಕಾರಿ ಬದಲಾಣೆಯನ್ನು ನಮ್ಮ ದೇಶದಲ್ಲಿ ಮಾಡಬೇಕು. ಈಗ ಸಹಕಾರ ಬ್ಯಾಂಕುಗಳಿಂದ ಬಾವಿಗಳನ್ನು ತೋಡಲು ರೈತರಿಗೆ ಸಹಾಯಮಾಡುತ್ತಿರುವುದು ಸ್ವಾಗತಾರ್ಹವಾಗಿದೆ. ಪ್ರತಿಯೊಂದು ಹಳ್ಳಿಗಳಲ್ಲೂ ರೈತರು ಬಾವಿ ತೆಗೆಸುವುದಕ್ಕೆ ಮುಂದೆ ಬರುತ್ತಾರೆ. ಆದರೆ ಅದಕ್ಕೆ ತಕ್ಕ ಪ್ರೋತ್ಸಾಹವಿಲ್ಲ. ಶಿಕಾರಿಪುರ ತಾಲ್ಲೂಕಿನಲ್ಲಿ 410 ಬಾವಿಗಳಿಗೆ ಅರ್ಜಿ ಕೊಟ್ಟರೆ ಸೇಕಡ 20ರಷ್ಟು ಕೂಡ ಮಂಜೂರು ಮಾಡಿರು ವುದಿಲ್ಲ. ಹೀಗಾದರೆ ವ್ಯವಸಾಯಕ್ಕೇನು ಪ್ರೋತ್ಸಾಹ ಕೊಟ್ಟಂತಾಯಿತು ? ನೀರಾವರಿ ಸೌಕ ರ್ಯದ ವಿಚಾರದಲ್ಲೇನು ಸಹಾಯಮಾಡಿದಂತಾಯಿತು ? ಇದರ ವಿಚಾರದಲ್ಲಿ ತೀವ್ರ ಗಮನಕೊಟ್ಟು ಮುಖ್ಯವಾಗಿ ನೀರಾವರಿ ಸೌಕರ್ಯಕ್ಕೆ ವ್ಯವಸಾಯಕ್ಕೆ ಹೆಚ್ಚು ಆದ್ಯತೆ ಇತರ ವಿಷಯಗಳಿಗಿಂತ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಎಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

ಭೂಕಂದಾಯದ ವಿಷಯ ಹೇಳುವುದಾದರೆ ನಿಜವಾಗಿಯೂ ಇದನ್ನೂ ರದ್ದುಮಾಡುವುದು ರೈತರ ಹಿತಕ್ಕೆ ವಿರುದ್ಧವಾಗುತ್ತದೆ. ಶ್ರೀ ನಾಗಪ್ಪನವರು ಈಗತಾನೆ ಇದನ್ನು ರದ್ದುಮಾಡುವುದು ಒಳ್ಳೆಯದೆಂದು ಹೇಳಿದರು. ಖಂಡಿತ ರದ್ದುಮಾಡಬಾರದು. ಕಂದಾಯ ವಜಾಮಾಡಿ ಬೇರೆ ತೆರಿಗೆ ಹಾಕಿ ದರೆ ರೈತರಿಗೆ, ಜನಸಾಮಾನ್ಯರಿಗೆ ಹೆಚ್ಚು ಕಿರುಕುಳವುಂಟಾಗುತ್ತದೆ. ಲೆವಿ ವಸೂಲಿಯಲ್ಲಿ ಈಗಾಗಲೇ ಕಿರುಕುಳ ಹೆಚ್ಚಾಗಿದೆ. ಹಾಗಿರುವಾಗ ಆದಾಯದಮೇಲೆ ತೆರಿಗೆ ಹಾಕಿದರೆ ರೈತರಿಗೆ ಇನ್ನೂ ಕಿರುಕುಳವಾಗುತ್ತದೆ. ಆದುದರಿಂದ ಈಗಿರುವ ಭೂಕಂದಾಯವನ್ನು ವಸೂಲುಮಾಡುವ ಪದ್ಧತಿಯೇ ಒಳ್ಳೆಯದು. ಸರ್ವೆ ಸೆಟ್ಲಮೆಂಟಿನಿಂದ ರೀಸರ್ವೆಯಿಂದ ಕೆಲವು ಕಡೆ ಅನ್ಯಾಯವಾಗಿದೆ. ನಮ್ಮ ತಾಲ್ಲೂಕಿನಲ್ಲಿ ಕೆಲವೊಂದು ಪ್ರದೇಶದಲ್ಲಿ 2 ಮಾವಿನಮರ, ಹುಣಿಸೆಮರ ಇರುವ ಭೂಮಿಯನ್ನು ಖುಷ್ಕಿ ಬಾಗಾಯ್ತು ಎಂದು ಮಾಡಿದ್ದಾರೆ, ಹೀಗೆ ಮಾಡಿ ಒಂದಕ್ಕೆ ಹತ್ತರಷ್ಟು ರೆವೆನ್ಯೂ ಮತ್ತು ಸೆಸ್ಸುಗಳನ್ನು ಹೇರಿರುವುದು ಅನ್ಯಾಯ. ಹೀಗೆ ಕೆಲವೊಂದು ಅನ್ಯಾಯಗಳಾಗಿವೆ. ಇನ್ನು ಕೆಲವುಕಡೆ, ಇರುವ ಕಂದಾಯಕ್ಕಿಂತಲೂ ಕಡಿಮೆಯಾಗಿದೆ ಇದರಿಂದ ಸರಕಾರಕ್ಕೇನೂ ಹೆಚ್ಚಿನ ವರಮಾನವಿಲ್ಲ. ಕಂದಾಯ ಒಂದಕ್ಕೆ ಎರಡರಷ್ಟು ಮಾಡಿದರೆ ರೈತರು ಸ್ವಾಗತಿಸುತ್ತಾರೆ. ಸರ್ಕಾರಕ್ಕೂ ಲಾಭವಿದೆ. ಆದುದರಿಂದ ಈಗಿರುವ ಕಂದಾಯವನ್ನು ಒಂದಕ್ಕೆ ಎರಡರಷ್ಟು ಹಾಕುವುದು ಒಳ್ಳೆಯದೇ ಹೊರತು ಅದನ್ನು ತೆಗೆದು ಬೇರೆ ರೀತಿಯಲ್ಲಿ ತೆರಿಗೆ ಹಾಕುವುದು ಸರಿಯಲ್ಲ. ಲೆವಿ ವಸೂಲುಮಾಡುವುದರಿಂದ ರೈತರಿಗೆ ಕಿರುಕುಳವಾಗಿರವುದು ನಿಜ.

ನಾವು ರೈತರಿಗೆ ಅನೇಕ ರೀತಿಯ ಪ್ರೋತ್ಸಾಹ, ಸಹಾಯ, ಸೌಲಭ್ಯ ಕೊಡಬೇಕು, ಆಹಾರ ದಲ್ಲಿ ಸ್ವಯಂ ಪರಿಪೂರ್ಣತೆಯನ್ನು ಪಡೆಯಬೇಕು ಎಂದು ಹೇಳುತ್ತಾ ಇದ್ದೇವೆ. ಆದರೆ ನಿಜ ವಾಗಿಯೂ ನೋಡಿದರೆ ರೈತರಿಗೆ ಅನೇಕ ರೀತಿಯ ಕಿರುಕುಳದ ಪರಿಸ್ಥಿತಿ ಜಾಸ್ತಿಯಾಗಿದೆ. ಲೆವಿ ವಸೂಲಿ ಅದರಲ್ಲಿ ಒಂದು. ಇದರಿಂದ ಭ್ರಷ್ಟಾಚಾರ ಮತ್ತು ಲಂಚಗುಳಿತನಕ್ಕೆ ಹೆಚ್ಚಿನ ಅವಕಾಶ ಕೊಟ್ಟಂತಾಗುತ್ತದೆ. ಆದ್ದರಿಂದ ಲೆವಿ ಪದ್ಧತಿಯನ್ನು ತಪ್ಪಿಸುವುದು ಬಹಳ ಒಳ್ಳೆಯದು. ಸರ್ಕಾರ ದವರು ಆಹಾರವನ್ನು ಮಾರುಕಟ್ಟೆಯಲ್ಲಿ ತೆಗೆದುಕೊಂಡು ಸ್ಟಾಕ್ ಮಾಡುವುದು ಒಳ್ಳೆಯದು ಎಂಬು ದನ್ನು ಈ ಸಭೆಯ ಗಮನಕ್ಕೆ ತರುತ್ತೇನೆ.

4-30 P.M.

ಭಾಷೆಯ ವಿಷಯದಲ್ಲಿ ಹೇಳುವುದಾದರೆ, ನಮ್ಮ ರಾಜ್ಯ ಸರ್ಕಾರದವರು ತ್ರಿಭಾಷಾ ಸೂತ್ರ ವನ್ನು ತಾಳಿರುವುದು ಸ್ವಾಗತಾರ್ಹವಾದ ವಿಷಯವಾಗಿದೆ. ಈ ಭಾಷಾ ವಿಷಯದಲ್ಲಿ ಸರಿಸಮಾನ ವಾದ ಒಂದು ಏರ್ಪಾಡನ್ನು ಮಾಡುವುದು ಒಳ್ಳೆಯದು. ಉತ್ತರದವರಿಗೆ ಒಂದು ವಿಧವಾದ ನಿಯಮ, ದಕ್ಷಿಣದವರಿಗೆ ಒಂದು ವಿಧವಾದ ನಿಯಮ, ಉತ್ತರದವರಿಗೆ ದ್ವಿಭಾಷಾ ನೀತಿ, ದಕ್ಷಿಣ ದವರಿಗೆ ತ್ರಿಭಾಷಾ ನೀತಿ ಈ ರೀತಿ ಆಗದೆ ಉತ್ತರದವರೂ ತ್ರಿಭಾಷಾ ಸೂತ್ರವನ್ನು ಕಲಿಯುವ ಏರ್ಪಾಡು ಆಗಬೇಕು. ದಕ್ಷಿಣದ ಒಂದು ಭಾಷೆಯನ್ನು ಉತ್ತರದವರು ಕಲಿಯುವಂತಹ ಒಂದು ವ್ಯವಸ್ಥೆ ಮಾಡಬೇಕೆಂದು ಈ ಸಭೆಯಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಸಾಲದ ವಿಷಯದಲ್ಲಿ ಹೇಳುವುದಾದರೆ, ಯಾವ ದೇಶವೇ ಆಗಲಿ, ರಾಷ್ಟ್ರವೇ ಆಗಲಿ ನಾನಾ ರೀತಿಯಲ್ಲಿ ಅನೇಕ ಕ್ಷೇತ್ರಗಳಲ್ಲಿ ಮುಂದುವರಿಯಬೇಕಾದರೆ ಸಾಲವನ್ನು ಮಾಡದೇ

ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಈಗ ನಮ್ಮ ರಾಜ್ಯಕ್ಕೆ 342 ಕೋಟಿ ರೂಪಾಯಿಗಳ ಸಾಲ ಇದೆ. ನಮಗೆ ಇರತಕ್ಕ ಆಸ್ತಿಪಾಸ್ತಿ, ನಮಗೆ ಇರತಕ್ಕ ಉತ್ಪನ್ನ ಇವುಗಳನ್ನು ಗಮನಿಸಿದರೆ ಇದೇನೂ ದೊಡ್ಡದಲ್ಲ ಎಂದು ಹೇಳಬಯಸುತ್ತೇನೆ. ನಾವು ಸಾಲವನ್ನು ತಂದಿದ್ದಕ್ಕೆ ಬಡ್ಡಿಯನ್ನು ತೀರಿಸುವ ಮಟ್ಟದಲ್ಲೂ ಕೂಡ ಇಲ್ಲ ಎಂದು ವಿರೋಧ ಪಕ್ಷದ ಕೆಲವು ಸದಸ್ಯರುಗಳು ಹೇಳಿದರು ಅದು ಒಪ್ಪತಕ್ಕ ಮಾತಲ್ಲ. ಸರಕಾರ ವಿವಿಧ ರಂಗಗಳಲ್ಲಿ ಉತ್ಪನ್ನದ ಮಾರ್ಗಗಳನ್ನು ಕಂಡುಕೊಂಡು ಆ ಮೂಲಕ ಹೆಚ್ಚಿನ ರೀತಿಯಲ್ಲಿ ಮುಂದುವರಿಯುವ ಮಾರ್ಗಗಳನ್ನು ಹಾಕಿಕೊಂಡಿದೆ. ಇದುವರೆಗೂ, ಕಳೆದ ಆರೇಳು ದಿವಸದಿಂದ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮತ್ತು ಆಯ ವ್ಯಯ ಪಟ್ಟಿಯ ಮೇಲೆ ವಿರೋಧ ಪಕ್ಷದ ಸದಸ್ಯರು ಮಾತಡಾಡಿ ಒಂದು ಕಹಿ ವಾತಾವರಣವನ್ನೇ ಕಲ್ಪಿಸಿದ್ದಾರೆ 20 ವರ್ಷದಲ್ಲಿ ನಾವು ಯಾವ ಒಂದು ಪ್ರಗತಿಯನ್ನೂ ಸಾಧಿಸಿಯೇ ಇಲ್ಲವೇನೋ ಅನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ನಿಜವಾಗಿಯೂ ಹೇಳುವುದಾದರೆ ಈ 20 ವರ್ಷದಲ್ಲಿ—ರಾಷ್ಟ್ರದ ಜೀವನದಲ್ಲಿ ಇದು ಒಂದು ಅತ್ಯಲ್ಪ ಕಾಲ — ಕೃಷಿ ಕ್ಷೇತ್ರದಲ್ಲಿ, ವಿದ್ಯಾ ಕ್ಷೇತ್ರದಲ್ಲಿ, ಕೈಗಾರಿಕಾ ಕ್ಷೇತ್ರದಲ್ಲಿ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಹೆಚ್ಚಿನ ರೀತಿಯ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. 20 ವರ್ಷದ ಹಿಂದೆ ಶಿಕ್ಷಣ ಕ್ಷೇತ್ರದಲ್ಲಿ 2 ಕೋಟಿ ಬಾಲಕ ಬಾಲಕಿಯರು ಓದುತ್ತಿದ್ದರು. ಇವತ್ತಿನ ದಿವಸ ಅದು 7 ಕೋಟಿಗೆ ಮೀರಿದೆ. ಆಹಾರದ ಉತ್ಪಾದನೆ 16 ಲಕ್ಷ ಟನ್ ಇದ್ದದ್ದು 60 ಲಕ್ಷ ಟನ್ ಆಗಿದೆ. ವಿದ್ಯುಚ್ಛಕ್ತಿ 23 ಕಿಲೋವಾಟ್‌ನಿಂದ 101 ಕಿಲೋವಾಟ್‌ವರೆಗೆ ಏರಿದೆ. ಇನ್ನು ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಕಾಲರಾ ಇವುಗಳು ಹೇಳಹೆಸರಿಲ್ಲದಂತಾಗಿವೆ. ಇವು ಪ್ರಗತಿಯಾಗಿರತಕ್ಕ ವಿಷಯಗಳಲ್ಲವೇ? ಆರ್ಥಿಕ ಸಚಿವರು ನಿಜವಾಗಿಯೂ ಸಹ ಈ ಆಯವ್ಯಯ ಪಟ್ಟಿಯನ್ನು ಬಹಳ ಶ್ರದ್ಧೆವಹಿಸಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಯಾವ ರೀತಿ ಯಾವ ಮಟ್ಟದಲ್ಲಿದೆ ಎಂಬುದನ್ನು ಬಹಳ ಕೂಲಂಕಷವಾಗಿ ನಮ್ಮ ಮುಂದೆ ಇಟ್ಟಿದ್ದಾರೆ, ಇದರಿಂದ ನಮ್ಮ ಹಣಕಾಸಿನ ಒಂದು ವ್ಯವಹಾರದ ಭದ್ರತೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ ಒಂದು ಪರಿಸ್ಥಿತಿ ಆದಂತಾಗಿದೆ, ಇಂತಹ ಒಂದು ಆಯವ್ಯಯ ಪಟ್ಟಿಯನ್ನು ನಮ್ಮ ಮುಂದೆ ಇಟ್ಟಿರುವುದಕ್ಕಾಗಿ ಮಾನ್ಯ ಅರ್ಥ ಸಚಿವರನ್ನು ಅಭಿನಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರಸಿ).—ಮಾನ್ಯ ಸಭಾಪತಿಗಳೇ, 1968-69ನೇ ಸಾಲಿನ ಬಡ್ಜೆಟ್ಟನ್ನು ಮಾನ್ಯ ಅರ್ಥಮಂತ್ರಿ ರಾಮಕೃಷ್ಣ ಹೆಗಡೆಯವರು ಮಂಡಿಸಿ, ಇದರ ಮೇಲಿನ ಚರ್ಚೆಯನ್ನು 3-4 ದಿವಸಗಳಿಂದ ನಡೆಸಿದ್ದೇವೆ. ಈ ಬಡ್ಜೆಟ್ಟು ಸಾಮಾನ್ಯ ಜನರಿಗೆ ನಿರಾಶೆಯನ್ನುಂಟುಮಾಡಿದೆ, ಈ ನಿರಾಶಾದಾಯಕವಾದ ಬಡ್ಜೆಟ್ಟು ಶ್ರೀ ರಾಮಕೃಷ್ಣ ಹೆಗಡೆಯವರ ವ್ಯಕ್ತಿತ್ವವನ್ನು ವ್ಯಕ್ತಪಡಿಸುತ್ತದೆ. ಕೃತಕ ಪ್ರಪಂಚದ ಕಲ್ಪನಾ ಜೀವನವನ್ನು ಕಲ್ಪಿಸಿಕೊಂಡಂಥ ಈ ಬಡ್ಜೆಟ್ಟು ನಿತ್ಯ ಪ್ರಪಂಚದ ಸತ್ಯ ಜೀವನವನ್ನು ಮರೆತುಬಿಟ್ಟಿದೆ. ಸಮಾಜವಾದದ ತತ್ವವನ್ನು ಗಾಳಿಗೋಪುರ ಮಾಡಿದೆ. ಈ ಉಳಿತಾಯ ಕೇವಲ ಕೃತಕವಾದದ್ದು ಸತ್ಯಕ್ಕೆ ದೂರವಾದದ್ದು. 11.9 ಕೋಟಿ ರೂಪಾಯಿ ನಿವ್ವಳ ಆದಾಯವಿರತಕ್ಕ ಈ ಬಡ್ಜೆಟ್ಟನ್ನು ಇಲ್ಲಿ ಮಂಡಿಸಿದ್ದಾರೆ. ಯಾವ ವಿಧವಾದ ಹೊಸ ತೆರಿಗೆಯನ್ನೂ ಹಾಕುವುದಿಲ್ಲ ಎಂಬ ಮಾತನ್ನು ಒಂದು ಕಡೆ ಬಡ್ಜೆಟ್ ಭಾಷಣದಲ್ಲಿ ಹೇಳುತ್ತಾರೆ. ಆದರೆ ಮತ್ತೊಂದು ಕಡೆ 8 ಕೋಟಿ ರೂಪಾಯಿಗಳನ್ನು ನಾವು ಈಗ ತುಟ್ಟಿಭತ್ಯದಲ್ಲಿ ಸರ್ಕಾರಿ ಉದ್ಯೋಗಸ್ಥರಿಗೆ ಹೆಚ್ಚಿಸಿರುವುದನ್ನು ಹೆಚ್ಚಿನ ತೆರಿಗೆ ರೂಪದಲ್ಲಿ ತೆಗೆದುಕೊಳ್ಳುತ್ತೇವೆ ಎಂಬ ಸೂಚನೆಯನ್ನು ಮಾನ್ಯ ಅರ್ಥಸಚಿವರು ತಮ್ಮ ಬಡ್ಜೆಟ್ ಭಾಷಣದಲ್ಲಿ ಸೂಚಿಸಿದ್ದಾರೆ. ಸರ್ಕಾರಿ ಉದ್ಯೋಗಸ್ಥರಿಗೆ ನೀವು ಹೆಚ್ಚಿನ ಸಂಬಳ ಅಥವಾ ತುಟ್ಟಿಭತ್ಯವನ್ನು ಹೆಚ್ಚಿಸಬೇಕಾದರೆ ನಿಮ್ಮ ಸಂಪನ್ಮೂಲಗಳಿಂದಲೇ ನೀವು ಅದನ್ನು ಸರಿದೂಗಿಸಿಕೊಳ್ಳಬೇಕೇ ಹೊರತು ಕೇಂದ್ರದಿಂದ ನಾವು ಯಾವ ಸಹಾಯವನ್ನೂ ಕೊಡುವುದಿಲ್ಲ, ನಮ್ಮಿಂದ ಯಾವ ಸಹಾಯವನ್ನೂ ನಿರೀಕ್ಷಿಸಬಾರದು ಎಂಬ ಮಾತನ್ನು ನೇರವಾಗಿ, ಸ್ಪಷ್ಟವಾಗಿ, ಖಚಿತವಾಗಿ ಶ್ರೀ ಮುರಾರ್ಜಿ ದೇಸಾಯ್‌ರವರು ಹೇಳಿದ್ದಾರೆ. ಆದ್ದರಿಂದ ಕೇಂದ್ರದಿಂದ ಯಾವ ಸಹಾಯವೂ ಬರುವುದಿಲ್ಲ ಎಂಬುದು ಖಚಿತವಾಯಿತು. ಇಂತಹ ಸಂದರ್ಭದಲ್ಲಿ ಈ 8 ಕೋಟಿ ರೂಪಾಯಿಗಳನ್ನು ಕೇಂದ್ರದಿಂದ ನಾವು ಕೇಳುತ್ತೇವೆ ಎಂದು ಅನ್ನುವ ಮಾತು ಕೇವಲ ಸತ್ಯಕ್ಕೆ ದೂರವಾದ ಮಾತು. ಇದು ಉಳಿತಾಯದ ಬಡ್ಜೆಟ್ ಅಲ್ಲ, ಇದು ನಮ್ಮೆಲ್ಲರಿಗೂ ಅಂದರೆ ಬಡವರನ್ನು, ಕೂಲಿಗಾರರನ್ನು, ನಿರ್ಗತಿಕರನ್ನು ಹಾಳುಮಾಡತಕ್ಕ ನಿರಾಶಾದಾಯಕ ಬಡ್ಜೆಟ್ಟು, ಬಂಡವಾಳಸ್ಥರನ್ನು ಬಂಡವಾಳಸ್ಥರನ್ನಾಗಿ ಮಾಡತಕ್ಕ ಬಡ್ಜೆಟ್ಟಾಗಿದೆ.

ಈ ಕಾಂಗ್ರೆಸ್ ಆಡಳಿತದಲ್ಲಿ ಸಾಮಾನ್ಯ ಜನರ ಅಭಿವೃದ್ಧಿಯಾಗಿದೆಯೇ ಎಂಬುದನ್ನು ನೀವು ನೋಡಿ. ಮಾನ್ಯ ಶ್ರೀ ನಿಜಲಿಂಗಪ್ಪನವರ ಸರ್ಕಾರ ಬಂದಮೇಲೆ ಎಲ್ಲೆಲ್ಲೂ ಅಭಾವ ಪರಿಸ್ಥಿತಿ ಇದೆ, ಮಳೆ ಇಲ್ಲದೆ ಬರಗಾಲ ಬಂದಿದೆ, ಆಹಾರದ ಕೊರತೆ ಹೆಚ್ಚಾಗಿದೆ. ಧಾರಣಿವಾಸಿ ಹೆಚ್ಚಾಗಿದೆ.

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಅನ್ನಾ! ಅನ್ನಾ!! ಅನ್ನಾ!!! ಅಂತ ಕೂಗತಕ್ಕ ಜನರು ನಮ್ಮ ದೇಶದಲ್ಲಿ ಹೆಚ್ಚಾಗಿಇದ್ದಾರೆ. ಇಂತಹ ಪರಿಸ್ಥಿತಿಗೆ ತಂದಂಥಾ ಈ ಸರ್ಕಾರ, ಅದಕ್ಷ ಸರ್ಕಾರ, ಬೂಟಾಟಿಕೆ ಸರ್ಕಾರ ಬಂಡವಾಳಸ್ಥರಿಗೆ ಉತ್ತೇಜನ ಕೊಡತಕ್ಕ ಸರ್ಕಾರ. ಸಾಮಾನ್ಯ ಜನ ಈ ದಿನ ವಿಮರ್ಶೆ ಮಾಡಿದರೆ ಇದು ಕೇವಲ ನಿರಾಶಾದಾಯಕವಾದ ಬಡ್ಜೆಟ್ಟು ಎಂದು ಖಂಡಿತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸ್ವಾಮಿ ಈ ಕಾಂಗ್ರೆಸ್ ಆಡಳಿತದಲ್ಲಿ ಈ ದೇಶ ಭಿಕ್ಷಾಟನೆ ಮಾಡುವ ದೇಶವಾಗಿದೆ. ಕಾಂಗ್ರೆಸ್ಸಿಗರು ಭಿಕ್ಷಾಪಾತ್ರೆಯನ್ನು ಕೈಗೆ ಕೊಟ್ಟಿದ್ದಾರೆ. 369 ಕೋಟಿ ರೂಪಾಯಿಗಳ ಸಾಲವನ್ನು ಜನರ ತಲೆಯ ಮೇಲೆ ಹೊರಿಸಿದ್ದೀರಿ. ಪ್ರಗತಿ ಎಷ್ಟುಮಟ್ಟಿಗೆ ಆಗಿದೆ ಎಂಬುದನ್ನು ನೋಡಿ ಎಂದು ನಮ್ಮ ಸ್ನೇಹಿತರೊಬ್ಬರು ಹೇಳಿದರು, ಒಂದು ಎರಡು ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 20 ಸಾವಿರ ಕೋಟಿ ರೂಪಾಯಿಗಳಷ್ಟು ಖರ್ಚಾದರೂ ಸಹ ಸಾಮಾನ್ಯ ಮನುಷ್ಯನ ನಿತ್ಯ ಜೀವನ ಪ್ರಗತಿ ಪಥದಲ್ಲಿ ಇಲ್ಲ. ಅಧೋಗತಿಯಲ್ಲೇ ಬಂದಿದೆ. ಕಾಂಗ್ರೆಸ್ ಎಂಬ ಹಡಗು ರಾಷ್ಟ್ರವೆಂಬ ಅರಬ್ಬೀ ಸಮುದ್ರದಲ್ಲಿ ಯಾನ ಮಾಡುತ್ತಾ ಹೊರಟಿರುವಾಗ ನಾಲ್ಕನೆ ಮಹಾಚುನಾವಣೆ ಹೊತ್ತಿಗೆ ಪೂರ್ತಾ ಮುಳುಗಿ ಹೋಗಲಿದೆ. 8 ರಾಜ್ಯಗಳಲ್ಲಿ ತನ್ನ ಸ್ಥಾನವನ್ನು ಕಾಂಗ್ರೆಸ್ ಉಳಿಸಿಕೊಂಡಿದೆ. ಮಾನ್ಯ ಮುಖ್ಯ ಮಂತ್ರಿಗಳು ಶ್ರೀ ಎಸ್. ನಿಜಲಿಂಗಪ್ಪನವರು ನಿನ್ನೆ ಇಲ್ಲಿ ಹೇಳಿದರು ಯಾವುದೋ ಒಂದು ಸಂದರ್ಭದಲ್ಲಿ—ಇಷ್ಟರಲ್ಲೇ ರಾಷ್ಟ್ರದಲ್ಲಿರತಕ್ಕ ಕಾಂಗ್ರೆಸ್ಸೇತರ ರಾಜ್ಯಗಳ ಆಡಳಿತವೆಲ್ಲಾ ಕಾಂಗ್ರೆಸ್ಸಿನವರಿಗೇ ಬರುತ್ತದೆ ಎಂದು. ಆದರೆ ತಮ್ಮ ನೈಜಚಿತ್ರವನ್ನು ತಾವು ವಿಮರ್ಶೆ ಮಾಡಿಕೊಂಡಿಲ್ಲ. ಅವರು ಆಶೆಯಿಂದಲೋ, ಅತಿ ಆಶೆಯಿಂದಲೋ, ದುರಾಶೆಯಿಂದಲೋ ಎರಡು ಎತ್ತುಗಳನ್ನು ದೂರ ತಳ್ಳಿ, ಎರಡು ಜೋಡಿ ಕುದರೆಗಳ ಸಾರೋಟಿನಲ್ಲಿ ಕುಳಿತಿದ್ದಾರೆ. ಒಂದು ಕಡೆ ಮುಖ್ಯ ಮಂತ್ರಿಗಳಾಗಿ ಒಂದು ಕಾಲು ಇಟ್ಟಿದ್ದಾರೆ, ಎ. ಐ. ಸಿ. ಸಿ. ಪ್ರೆಸಿಡೆಂಟ್‌ರಾಗಿ ಮತ್ತೊಂದು ಕಾಲು ಇಟ್ಟಿದ್ದಾರೆ. ಈ ಸಾರೋಟಿನಲ್ಲಿ ಒಂದು ಕುದರೆ ಮುಗ್ಗರಿಸಿದೆ. ಈಗಾಗಲೇ ಕಾಂಗ್ರೆಸ್ ಪಕ್ಷದಲ್ಲಿ ಕಚ್ಚಾಟ ಆರಂಭವಾಗಿದೆ, ಅಲ್ಲಲ್ಲೇ ಭಿನ್ನಾಭಿಪ್ರಾಯವುಂಟಾಗಿದೆ, ಆಶೆ, ಅತಿಆಶೆ, ದುರಾಶೆ ಇರತಕ್ಕ ಈ ಕಾಂಗ್ರೆಸ್ ಜನ ಸಮಾಜವಾದಿ ಸಮಾಜವನ್ನು ಸ್ಥಾಪನೆ ಮಾಡುವುದಕ್ಕೆ, ತಮ್ಮಲ್ಲಿರತಕ್ಕ ಅಧಿಕಾರವನ್ನು ವಿಕೇಂದ್ರೀಕರಣ ಮಾಡಲಿಲ್ಲ. ಇವರು ಬಂಡವಾಳಶಾಹಿಗಳಾಗಿ ಬಂಡವಾಳಸ್ಥರ ಹಿಡಿತಕ್ಕೆ ರಾಜ್ಯವನ್ನು ಒಪ್ಪಿಸತಕ್ಕ ಜನವೇ ಎಂಬುದನ್ನು ತಾವು ಈ ಸಂದರ್ಭದಲ್ಲಿ ಯೋಚನೆ ಮಾಡಬೇಕಾಗಿದೆ. 1972ರ ಚುನಾವಣೆಯ ಹೊತ್ತಿಗೆ ಕಾಂಗ್ರೆಸ್ ಎಷ್ಟು ಮಟ್ಟಿಗೆ ರಾಜ್ಯದಲ್ಲಿ ರಾಜಕೀಯದಲ್ಲಿ ಅಧೋಗತಿಗೆ ಬರುತ್ತದೆ ಎಂಬುದನ್ನು ರಾಷ್ಟ್ರದ ಜನ ಮತ್ತು ದೇಶದ ಜನ ತೋರಿಸಲಿದ್ದಾರೆ. ಕಾಂಗ್ರೆಸ್ ಎಂಬ ಒಂದು ಮಹತ್ವ ಇರತಕ್ಕ ಒಂದು ಪವಿತ್ರವಾದ ಸಂಸ್ಥೆ ಏನಿದೆ ಅದು ಒಂದು ಸ್ವಚ್ಛ ಕನ್ನಡಿಯಂತೆ ಇತ್ತು, ಸ್ವಚ್ಛವಾದ ಕನ್ನಡಿ ಇವತ್ತು ಅಕಸ್ಮಾತ್ ಕೈ ತಪ್ಪಿ ಕೆಳಗೆ ಬಿದ್ದು ಛಿದ್ರ ಛಿದ್ರವಾಗಿದೆ. ಹೀಗೆ ಛಿದ್ರ ಛಿದ್ರವಾಗಿ ಒಡೆದುಹೋಗಿರತಕ್ಕ ಕಾಂಗ್ರೆಸ್ ಎಂಬ ಕನ್ನಡಿಯ ಚೂರುಗಳನ್ನು ಮತ್ತೆ ಜೋಡಿಸಿ ಅದಕ್ಕೆ ಕಟ್ಟನ್ನು ಹಾಕಿದರೆ ಅದು ತನ್ನ ಮೊದಲಿನ ನೈಜಸ್ವರೂಪವನ್ನು ತೋರಿಸಲಾರದು.

ಇನ್ನು ನಮ್ಮ ಅರ್ಥ ಸಚಿವರು ನಮ್ಮ ದೇಶದಲ್ಲಿ ಸಾಕಷ್ಟು ವ್ಯವಸಾಯದ ಪ್ರಗತಿಯಾಗಿದೆ. ನಾವು ಬರುವ 1970ನೇ ಸಾಲಿನ ಹೊತ್ತಿಗೆ ಈ ಆಹಾರದಲ್ಲಿ ಸ್ವಾವಲಂಬಿಗಳಾಗುತ್ತೇವೆಂದು ಹೇಳಿರತಕ್ಕ ಮಾತೇನಿದೆ ಅದು ಒಂದು ಕುಹಕವಾದ ಮಾತೇ ವಿನಾ ನಂಬಲರ್ಹವಾದುದಲ್ಲ. ಇನ್ನು ಎರಡು ವರ್ಷಗಳಲ್ಲಿ ಅಕ್ಕಿಯನ್ನು ಅಗ್ಗವಾಗಿ ಮಾರಾಟ ಮಾಡುವಂತೆ ಮಾಡುತ್ತೇವೆ ಎಂದು ಹಿಂದೆ ಹೇಳಿಕೆ ಇತ್ತವರು ಸಾಧಿಸಿದರೆ ಈಗಲೂ ಇದು ಕುರುಡು ಮಾತೇ ಸರಿ. ಇಲ್ಲವೇ ಅದೊಂದು ಬುರುಡೇ ಮಾತು ಎಂದು ಹೇಳುತ್ತೇನೆ. ಈ ದಿವಸ ನಮ್ಮ ಮುಂದೆ ಇಟ್ಟಿರತಕ್ಕ ಬಡ್ಜೆಟ್ ಏನಿದೆ ಅದನ್ನು ಅವರು ಒಂದು ಉಳಿತಾಯ ಬಡ್ಜೆಟ್ಟೆಂದು ಹೇಳಿದ್ದಾರೆ. ಅದು ಎಂದಿಗೂ ಉಳಿತಾಯದ ಬಡ್ಜೆಟ್ಟಾಗಾಲು ಸಾಧ್ಯವಿಲ್ಲ. ಜನರು ತೆರಿಗೆಗಳ ಸಂಕಟದಲ್ಲಿ ಸಿಕ್ಕಿ ನರಳುತ್ತಿದ್ದಾರೆ. ಆಹಾರವಿಲ್ಲದೆ ಜನತೆ ಬಾಯಿ ಬಾಯಿ ಬಿಡುತ್ತಿದ್ದಾರೆ. ಎಲ್ಲಿ ನೋಡಿದರೂ ಆಹಾರದ ಅಭಾವ, ದೇಶದಲ್ಲಿ ಬಡ ಜನರಿಗೆ ವಿದ್ಯಾ ಸೌಕರ್ಯಗಳು ಸಾಲದೆ ಎಲ್ಲೆಲ್ಲೂ ಅಜ್ಞಾನ ತುಂಬಿ ತುಳುಕುತ್ತಿದೆ. ಹೀಗೆ ಅಜ್ಞಾನಾಂಧಕಾರದಲ್ಲಿ ಮುಳುಗಿರತಕ್ಕ ಬಡಜನರು ತಿಳುವಳಿಕೆ ಇಲ್ಲದೆ ಇರುವುದರಿಂದ ರಾಜ್ಯದ ಬಹುಪಾಲಿನ ಜನರಿಗೆ ಸರ್ಕಾರವನ್ನು ಟೀಕೆ ಮಾಡತಕ್ಕ ಧೈರ್ಯವಿಲ್ಲದೆಹೋಗಿದೆ. ಇಂಗ್ಲೆಂಡ್ ಅಥವಾ ಅಮೇರಿಕಾದಂಥ ದೇಶಗಳಾಗಿದ್ದರೆ ಇಂಥ ಆಡಳಿತವನ್ನು ಒಂದು ದಿನ ಸಹಿತ ಇರುವುದಕ್ಕೆ ಬಿಡುತ್ತಿರಲಿಲ್ಲ. ಕೇವಲ ಒಬ್ಬ ಮಂತ್ರಿ ಟಿ. ಎ. ಮತ್ತು ಡಿ. ಎ. ಗಳಿಗಾಗಿ 13 ಸಾವಿರ ರೂಪಾಯಿಗಳನ್ನು ಒಂದು ವರ್ಷ ಖರ್ಚುಮಾಡಿದ್ದಾರೆ. ಈ ಸರ್ಕಾರ ರಾಜ್ಯದ ಬೊಕ್ಕಸವನ್ನು ತಿಂದುತೇಗತಕ್ಕ ಸರ್ಕಾರವಾಗಿದೆ ! ಈ ರಾಜ್ಯದಲ್ಲಿ ಬಡವರ ಉದ್ಧಾರವಿನ್ನೆಲ್ಲಿ ಬಂತು ? ಈ

ಹಿಂದೆ ಭೂಕಂದಾಯವನ್ನು ರದ್ದು ಮಾಡುತ್ತೇವೆ ಎಂದು ಸರ್ಕಾರದವರು ಹೇಳುತ್ತಿದ್ದರು. ಆದರೆ ಹಾಗೆ ಅದನ್ನು ರದ್ದುಮಾಡದೆ ಅದು ಇರಲೇಬೇಕು ಎಂದು ಈ ದಿವಸ ಹೇಳುತ್ತಿದ್ದಾರೆ. ಉಳತಕ್ಕವನಿಗೆ ಭೂಮಿಯಿಲ್ಲ ದುಡಿಯತಕ್ಕವನಿಗೆ ಕೆಲಸವಿಲ್ಲ. ಇದು ಈ ಸರ್ಕಾರದ ನೈಜ ಚಿತ್ರ. ಲೆವಿ ಪದ್ಧತಿಯನ್ನು ಕೂಡಲೆ ರದ್ದುಮಾಡಬೇಕೆಂದು ಉತ್ತರ ಕನ್ನಡ ಜಿಲ್ಲೆಯವರೂ ಮತ್ತು ಶಿವಮೊಗ್ಗ ಜಿಲ್ಲೆಯವರೂ ಮನವಿಯನ್ನು ಮಾಡಿಕೊಂಡರು. ಸರ್ಕಾರದವರು ಇದನ್ನು ರದ್ದು ಮಾಡದಿದ್ದರೆ ಜನರು ಚಳವಳಿಯನ್ನು ಹೂಡುವುದಾಗಿ ಹೇಳಿದಾಗ, ಮಾನ್ಯ ಮುಖ್ಯ ಮಂತ್ರಿಗಳವರು ಓಪನ್ ಮಾರ್ಕೆಟ್ಟಿನಲ್ಲಿ ಧಾನ್ಯ ಸಿಕ್ಕುತ್ತಿದೆ. ಆದ್ದರಿಂದ ನಮಗೆ ಬೇಕಾಗತಕ್ಕ ಧಾನ್ಯವನ್ನು ಅಲ್ಲಿಂದ ಕೊಂಡು ಅದನ್ನು ಜನರಿಗೆ ಸಪ್ಲೈ ಮಾಡುವುದಕ್ಕೆ ಪ್ರಯತ್ನ ಮಾಡಲಾಗುವುದೆಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಅದು ಇನ್ನೂ ಕಾರ್ಯಗತವಾಗಿಲ್ಲ. ಯಾರು ಕಷ್ಟಪಟ್ಟು ದುಡಿದು ಹೆಚ್ಚು ಖರ್ಚುಗಳನ್ನು ಮಾಡಿ ಆಹಾರಧಾನ್ಯಗಳನ್ನು ಬೆಳೆಯುತ್ತಿದ್ದಾರೋ ಅಂಥವರಿಂದ ಸರ್ಕಾರದವರು ಧಾನ್ಯ ಕೊಳ್ಳಲು ಕೊಡುತ್ತಿರುವ ರೇಟುಭತ್ತಕ್ಕೆ ಕ್ವಿಂಟಾಲಿಗೆ 45 ರೂಪಾಯಿಗಳು ಮಾತ್ರ. ಅವನು ಅದೇ ಧಾನ್ಯವನ್ನು ಪಾರುಕಟ್ಟೆಗೆ ತೆಗೆದುಕೊಂಡುಹೋದರೆ ಅಲ್ಲಿ ಕ್ವಿಂಟಾಲಿಗೆ 75 ರೂಪಾಯಿ ಸಿಕ್ಕುತ್ತದೆ. ಹೀಗಾದರೆ ಬೆಳೆಯತಕ್ಕ ರೈತನಿಗೆ ಸರ್ಕಾರದವರು ಉತ್ತೇಜನ ಕೊಟ್ಟಂತಾಯಿತೆ ? ಇದನ್ನು ಸರ್ಕಾರದವರೇ ವಿಮರ್ಶೆ ಮಾಡಬೇಕು.

ದೇಶದಲ್ಲಿ ದಿನ ದಿನಕ್ಕೂ ಬೆಳೆಯುತ್ತಿರುವ ನಿರುದ್ಯೋಗದ ಸಮಸ್ಯೆಯನ್ನು ನೋಡಿದರೆ ದೇಶದ ಮುಂದಿನ ಸ್ಥಿತಿ ಗತಿಯೇನು ?

> " The present system of education is bad, these degrees and diplomas are passports to Government jobs ". It is to be re-oriented.

ಆ ಮಹಾತ್ಮ ಗಾಂಧಿಯವರು ಶಿಕ್ಷಣದ ಬಗ್ಗೆ ಏನು ಹೇಳಿದ್ದಾರೆ ? ನಮ್ಮ ಶಿಕ್ಷಣ ಪದ್ಧತಿ ಕೂಡಲೆ ಮಾರ್ಪಾಡಾಗಬೇಕು. ನಾವು ದೇಶದಲ್ಲಿ ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡತಕ್ಕ ವೃತ್ತಿ ಶಿಕ್ಷಣಗಳನ್ನು ಕೊಡಬೇಕು ಎಂದು ಹೇಳಿದ್ದಾರೆ. ಈ ಗಾಂಧಿ ಸರ್ಕಾರ ಎಂದು ಹೇಳಿಕೊಂಡು ಆಡಳಿತ ನಡೆಸತಕ್ಕ ಜನರು ಅದನ್ನು ಜಾರಿಗೆ ತಂದಿದ್ದಾರೇನು ? ಇಂದು ಸರ್ಕಾರವನ್ನು ನಡೆಸುತ್ತಿರುವ ಜನರು ಕೇವಲ ತಮ್ಮ ಮಕ್ಕಳ ಹಾಗೂ ತಮ್ಮ ತಮ್ಮ ಅಳಿಯಂದಿರುಗಳ ವಿಚಾರವನ್ನು ಮಾತ್ರ ನಿಗಾವಹಿಸಿ ನೋಡುತ್ತಿದ್ದಾರೆ. ತಮ್ಮ ತಮ್ಮವರಿಗೆ ಕೆಲಸಗಳನ್ನು ಕೊಡಿಸಿ ಕೊಂಡರೆ ದೇಶವೆಲ್ಲಾ ಉದ್ಧಾರವಾಯಿತು ಎಂದು ಭಾವಿಸತಕ್ಕ ಜನರಿವರು. ದೇಶದ ಬಹುಸಂಖ್ಯಾತರಾದ ಬಡವರ ದರಿದ್ರರ ಉದ್ಧಾರದ ಕಡೆಗೆ ಈ ಸರ್ಕಾರದ ಗಮನವಿಲ್ಲ. ರಾಜ್ಯದಲ್ಲಿರತಕ್ಕ ಹರಿಜನ ಗಿರಿಜನರ ಉದ್ಧಾರ ಕಾರ್ಯ ಸರಿಇಲ್ಲ. ಬಡ ವ್ಯವಸಾಯದ ಕೂಲಿಗಾರರ ಉದ್ಧಾರಕ್ಕೆ ಯೋಜನೆ ಇಲ್ಲ ದೇಶದ ಬಡಜನರ ವಿದ್ಯಾಭ್ಯಾಸ ಬಹಳ ಕೀಳುಮಟ್ಟದಲ್ಲಿದೆ. ಈ ದಿವಸ ವಿದ್ಯಾಭ್ಯಾಸಕ್ಕೆ ಒದಗಿಸಿರತಕ್ಕ ಹಣ ಕಡಮೆ. ರಾಜ್ಯದಲ್ಲಿರತಕ್ಕ ವೀಕರ್ ಸೆಕ್ಷನ್ ಎಂದು ಹೇಳತಕ್ಕ ಹರಿಜನ ಗಿರಿಜನರವನಿದ್ದಾರೆ ಅವರೆಲ್ಲರ ವಿದ್ಯಾಭ್ಯಾಸಕ್ಕಾಗಿ ರಾಜ್ಯದ ವರಮಾನದಲ್ಲಿ ನಾಲ್ಕನೇ ಒಂದು ಭಾಗದ ಹಣವನ್ನು ರಾಜ್ಯಸರ್ಕಾರ ವಿಶೇಷ ಸ್ಕೀಂ ಮಾಡಿ ಆ ಜನಾಂಗದ ಬಾಲಕರಿಗೆ ಬಾಲ ಮಂದಿರಗಳನ್ನೂ ವಿದ್ಯಾರ್ಥಿನಿಲಯಗಳನ್ನೂ ಮತ್ತು ಶಾಲೆಗಳನ್ನೂ ನಿರ್ಮಿಸುವುದಕ್ಕೆ ಪ್ರಯತ್ನಪಟ್ಟರೆ ಆಗೇನಾದರೂ ಈ ಜನಾಂಗಕ್ಕೆ ಸ್ವಲ್ಪ ಅನುಕೂಲವಾಗುತ್ತೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ರಾಜ್ಯದಲ್ಲಿ ಎಲ್ಲಿ ನೋಡಿದರೂ ಜನರಿಗೆ ಕುಡಿಯುವ ನೀರಿನ ತೊಂದರೆ ಬಹಳವಾಗಿದೆ. ಕುಡಿಯುವ ನೀರಿನ ಬಗ್ಗೆಯಾದರೂ ಈ ಸರ್ಕಾರ ಸ್ವಾವಲಂಬನೆ ಪಡೆದಿದೆಯೇ ? ಎಂದರೆ ಅದೂ ಕೂಡ ಇಲ್ಲ. ಇವರು ಕೈಗೊಂಡಿರತಕ್ಕ ಬಾವಿಗಳಲ್ಲಿ ಮೂರೂವರೆ ಸಾವಿರ ಬಾವಿಗಳ ಕೆಲಸ ಅರ್ಧಮರ್ಧವಾಗಿ ಹಾಗೇ ನಿಂತುಬಿಟ್ಟಿದೆ. ಅವನ್ನು ಯಾವಾಗ ಪೂರ್ಣ ಮಾಡುತ್ತಾರೋ ಗೊತ್ತಿಲ್ಲ. ಇನ್ನು ಸುಮಾರು 2,700 ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳಿರುವುದಿಲ್ಲ. ಕಾಂಗ್ರೆಸ್ ಪಕ್ಷದವರ ಕೈಗೆ ರಾಜ್ಯ ಸಿಕ್ಕಿ ಇಲ್ಲಿಗೆ 20 ವರ್ಷಗಳು ಕಳೆದಿದ್ದರೂ ಜನರಿಗೆ ಕುಡಿಯುವ ನೀರನ್ನು ಕೂಡ ಒದಗಿಸುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿಯೇ ಆದರೆ ಮುಂದಕ್ಕೂ ಸಾಧ್ಯವಾಗುವುದಿಲ್ಲ. ಇನ್ನು ಆಹಾರದ ವಿಚಾರ ಭಿಕ್ಷಾಟನೆಯಲ್ಲದೆ; ಜನರ ಕೈಗೆ ಇವರು ಭಿಕ್ಷಾ ಪಾತ್ರೆಯನ್ನು ಕೊಟ್ಟಿದ್ದಾರೆ. ಆದುದರಿಂದ ನಾನು ಈ ಸರ್ಕಾರವನ್ನು ದಬ್ಬಾಳಿಕೆಯ ಸರ್ಕಾರ, ಹೇಡಿ ಸರ್ಕಾರ ಮತ್ತು ಬಡವರನ್ನು ಹಾಳುಮಾಡತಕ್ಕ ಸರ್ಕಾರ ಎಂದು ಹೇಳದಿದ್ದರೆ ವಿಧಿಯಿಲ್ಲ.

Mr. CHAIRMAN.—The member must now conclude, because the time that was allotted to him by his whip is over.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಸ್ವಾಮಿ ಅಧ್ಯಕ್ಷರೇ, ರಾಜ್ಯಕ್ಕೆ ಹರಿಜನ ಗಿರಿಜನರು ಬೆನ್ನುಮೂಳೆ ಇದ್ದ ಹಾಗೆ. ಅವರ ಬೆನ್ನು ಮೂಳೆಯನ್ನು ಈ ಸರ್ಕಾರ ಮುರಿದಿದೆ. ಅದನ್ನು ಮುರಿದವರು ಯಾರು ಎಂದರೆ ಶ್ರೀ ನಿಜಲಿಂಗಪ್ಪನವರು ಮತ್ತು ಶ್ರೀ ನಿಜಲಿಂಗಪ್ಪನವರ ಸರ್ಕಾರದಲ್ಲಿರುವ ಈ ಮಂತ್ರಿಗಳು. ಈ ಹಿಂದೆ 1940ರಲ್ಲಿ ಆ ಬ್ರಿಟಿಷರಿದ್ದ ಕಾಲದಲ್ಲಿ ಇಂಡಿಯಾ ಸರ್ಕಾರದವರೊಡನೆ ಹೋರಾಡಿ ನಮ್ಮ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಈ ಹರಿಜನರಿಗೆ ಇಂಡಿಯಾ ಗೌರ್ನ್‌ಮೆಂಟ್ ಸ್ಕಾಲರ್‌ಷಿಪ್ ಕೊಡುವ ನೀತಿಯನ್ನು ಪ್ರಥಮ ಬಾರಿಗೆ 1940ರಲ್ಲಿ ಜಾರಿಗೆ ತಂದರು. ಹಾಗೆ ಆ 1940ರಲ್ಲಿ ಪ್ರಥಮವಾಗಿ ಇದು ಜಾರಿಗೆ ಬಂದಾಗ ಪ್ರತಿಯೊಬ್ಬ ಕಾಲೇಜಿನಲ್ಲಿ ಓದುವ ಹರಿಜನ ವಿದ್ಯಾರ್ಥಿಗೂ ತಿಂಗಳೊಂದಕ್ಕೆ 40 ರೂಪಾಯಿಗಳನ್ನು ಕೊಡಲಾಗುತ್ತಿತ್ತು. ಅದೇ ಮೊಬಲಗನ್ನು ಈ 1968ರಲ್ಲೂ ಕೊಡುತ್ತಿದ್ದಾರೆ. ನಮಗೆ ಸ್ವರಾಜ್ಯ ಬಂದ ಮೇಲೇನೂ ಈ ಸ್ಕಾಲರ್‌ಷಿಪ್ಪನ್ನು ಇವರು ಹೊಸದಾಗಿ ಕೊಡುವುದಕ್ಕೆ ಪ್ರಾರಂಭ ಮಾಡಲಿಲ್ಲ. ಇದು ಆ ನಮ್ಮ ಡಾ. ಅಂಬೇಡ್ಕರ್ ಅವರ ಸಾಹಸದಿಂದ ಸಿಕ್ಕಿತು. ಸ್ವರಾಜ್ಯ ಬಂದ ಈ 20 ವರ್ಷಗಳಲ್ಲಿ ಈ ಸರ್ಕಾರದವರು ತಮ್ಮ ಸಂಬಳಸಾರಿಗೆಗಳನ್ನು ಎಷ್ಟು ಸಾರಿ ವಿಮರ್ಶಿಸಿಕೊಂಡು ಒಂದಕ್ಕೆ ನಾಲ್ಕರಷ್ಟನ್ನು ಹೆಚ್ಚಿಸಿಕೊಂಡಿದ್ದಾರೆ. ಮಂತ್ರಿಗಳ ಸಂಬಳಸಾರಿಗೆ ಎಷ್ಟು ಸಾರ್ತಿ ಹೆಚ್ಚಿಸಲಾಯಿತು ? ಗರ್ಭಗುಡಿಯ ದೇವರಂತೆ ಇರತಕ್ಕ ರಾಜ್ಯದ ಗವರ್ನರ್‌ಗೆ 13 ಲಕ್ಷ ರೂಪಾಯಿಗಳನ್ನು ಕೇವಲ ಟಿ.ಎ. ಮತ್ತು ಡಿ.ಎ.ಗಳಿಗಾಗಿ ಈ ಸರ್ಕಾರ ವೆಚ್ಚ ಮಾಡುತ್ತಿದೆ. ಆದರೆ 1935ರಿಂದಲೂ ಈ ಹರಿಜನ ವಿದ್ಯಾರ್ಥಿಗಳಿಗೆ ಮಿಡಲ್‌ಸ್ಕೂಲಿನಲ್ಲಿ ವ್ಯಾಸಂಗ ಮಾಡತಕ್ಕವರಿಗೆ ತಿಂಗಳಿಗೆ 3 ರೂಪಾಯಿ ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗೆ ಏಳೂವರೆ ರೂಪಾಯಿ ಕೊಡುತ್ತಿದ್ದಾರೆ. ನಮ್ಮ ಹರಿಜನರನ್ನು ಸರಿಯಾದ ರೀತಿಯಲ್ಲಿ ರಕ್ಷಣೆ ಮಾಡುವುದಕ್ಕೆ ಅವರಿಗೆ ಶಕ್ತಿಯಿಲ್ಲದಿದ್ದರೆ ಸಂಬಂಧಪಟ್ಟ ಮಂತ್ರಿಗಳು ತಮ್ಮ ಸ್ಥಾನಕ್ಕೆ ಕೂಡಲೇ ರಾಜೀನಾಮೆ ಕೊಟ್ಟು ಇತ್ತ ಕಡೆಗೆ ಬರಲಿ ಅವರನ್ನೇ ನಾವು ಮುಖ್ಯಮಂತ್ರಿಗಳನ್ನಾಗಿ ಮಾಡುತ್ತೇವೆ. ನಮಗೆ ಅಂಥ ಶಕ್ತಿ ಇದೆ. ಈ ಸಭೆಯಲ್ಲಿ ಅನೇಕ ಜನ ಹರಿಜನ ಸದಸ್ಯರಿದ್ದರೂ ಅನ್ಯಾಯವನ್ನು ಕಣ್ಣಾರೆ ನೋಡುತ್ತಿದ್ದರೂ ಅವರು ಸುಮ್ಮನೆ ಕುಳಿತಿದ್ದಾರೆ. ಹಾಗೆ ಅವರು ಸುಮ್ಮನೆ ಕುಳಿತಿರುವುದು ಏತಕ್ಕೆಂದರೆ ಶ್ರೀ ನಿಜಲಿಂಗಪ್ಪನವರ ವರಪ್ರಸಾದ ಸಿಕ್ಕೀತೆ, ನಾನೇನಾದರೂ ಒಬ್ಬ ತುಂಡು ಮಂತ್ರಿಯಾಗಲಿ ಅಥವಾ ದಪ್ಪ ಮಂತ್ರಿ ಸ್ಥಾನ ಮಾನದಿಂದ ಸಿಕ್ಕೀತೇ, ಎಂಬ ಆಸೆಯಿಂದ ಬಾಯಿಮುಚ್ಚಿ ಕುಳಿತಿದ್ದಾರೆ. ಈ ದಿವಸ ಎ.ಐ.ಸಿ.ಸಿ. ಅಧ್ಯಕ್ಷರಾಗಿರತಕ್ಕ ಶ್ರೀ ನಿಜಲಿಂಗಪ್ಪನವರು ಬರುವ ಏಪ್ರಿಲ್ ತಿಂಗಳಿನಲ್ಲಿ ಹೊಸ ನಾಯಕರನ್ನು ಚುನಾವಣೆ ಮಾಡಲಾಗುತ್ತದೆ ಎಂದು ಒಂದು ಆಶ್ವಾಸನೆ ಕೊಟ್ಟಿದ್ದಾರಂತೆ. ಅದು ನಿಜವಾದರೆ ಅವರಿಂದ ದೇಶಕ್ಕೂ ಕ್ಷೇಮ, ಅವರಿಗೂ ಕ್ಷೇಮ ಮತ್ತು ಕಾಂಗ್ರೆಸ್ ಪಕ್ಷಕ್ಕೂ ಕ್ಷೇಮ ಎಂದು ಹೇಳುತ್ತೇನೆ.

Mr. CHAIRMAN.—The Hon'ble Member will please resume his seat. The time allotted to him by his whip is over.

Sri M. H. JAYAPRAKASH NARAYAN.—I request the Hon'ble Chair to give me a few minutes more.

Mr. CHAIRMAN.—The member will resume his seat.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನಮ್ಮ ಅರ್ಥಸಚಿವರು ಒಂದು ಲಕ್ಷ ಎಕರೆ ಅರಣ್ಯ ಭೂಮಿಯನ್ನು ಸಾಗುವಳಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ರಿಲೀಜ್ ಮಾಡಲಾಗಿದೆ ಎಂದು ಹೇಳಿದ್ದಾರೆ. ಹಾಗೆ ರಿಲೀಜ್ ಮಾಡಿರತಕ್ಕದ್ದು ಅವರ ನೆಂಟರಿಷ್ಟರಿಗೂ ಮತ್ತು ಶ್ರೀಮಾನ್ ಹೆಗಡೆಯವರ ಸಂಬಂಧೀಕರು ಇಲ್ಲಿಯವರೆಗೂ ಅಕ್ರಮ ಸಾಗುವಳಿ ಮಾಡಿಕೊಂಡು ಬಂದಿರತಕ್ಕ ಭೂಮಿಯನ್ನು ಅವರಿಗೆ ಖಾಯಂ ಮಾಡಲು ಅದನ್ನು ರಿಲೀಜ್ ಮಾಡಿದ್ದಾರೆಯೇ ? ಅಥವಾ ಅದನ್ನು ಅವರು ನಿಜವಾಗಿಯೂ ಭೂಮಿ ಇಲ್ಲದ ನಿರ್ಗತಿಕರಿಗೆ ರಿಲೀಜ್ ಮಾಡಿದ್ದಾರೆಯೇ ಎಂದು ಅವರನ್ನು ಪ್ರಶ್ನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

Mr. CHAIRMAN.—The member will please resume his seat. We have got a system and we have to adopt that system. It is for the good of all the members.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನನಗೆ ಇನ್ನು ಒಂದು ನಿಮಿಷ ಕೊಟ್ಟರೆ ಸಾಕು. ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ನಾನು ಸಭಾಪತಿಗಳ ಹೇಳಿಕೆಗೆ ಮನ್ನಣೆ ಕೊಡುತ್ತೇನೆ. ನಾನು ಹೇಳಿರತಕ್ಕ ಅಂಶಗಳು ರಚನಾತ್ಮಕವಾಗಿದ್ದರೆ ಈ ಕಾಂಗ್ರೆಸ್ ಸರ್ಕಾರಕ್ಕೆ ನಿಜವಾಗಿ ಹರಿಜನೋದ್ಧಾರ ಕಾರ್ಯದಲ್ಲಿ ಆಸಕ್ತಿ ಇದ್ದರೆ, ಗಾಂಧೀಜಿಯವರ ತತ್ವಗಳನ್ನು ಅವರ ಹೃದಯದಲ್ಲಿ ಅಡಗಿಸಿಕೊಂಡಿದ್ದರೆ, ಹರಿಜನೋದ್ಧಾರಕ್ಕೆ ನಿಜವಾಗಿ ಇವರು ಹೆಚ್ಚಿನ ಪ್ರಾತಿನಿಧ್ಯವನ್ನು ಕೊಟ್ಟು ಕೆಲಸಗಳನ್ನು ಮಾಡಲೇಬೇಕು.

ಇಷ್ಟು ಹೇಳಿ, ಮಾನ್ಯ ಸಭಾಪತಿಗಳು ನನಗೆ ಇಲ್ಲಿ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. CHAIRMAN.—It is unfair to do like that. We are legislators. We must obey the rules. If we ourselves create confusion like this, what will the country think of us ? The party whips have given the list of names. We must go in a systematic manner. We must stick to the time that has been allotted for each one of the members. Then only, the members of this side and the other side will be able to participate in the debate. If we go according to the schedule, everybody will have his chance.

Sri M. Y. GHORPADE.—Mr. Speaker Sir, I hope I may not be able to do justice to the budget in the time allotted to me. However, I will try my best to touch upon the salient features in the budget. I must say that the Financce Minister has tried to do his best in the presentation of the budget. But what he can now do within the limits of his authority is not enough to meet the challenge of the very difficult situation we are facing and which is really not peculiar to Mysore alone. The pattern of Central Financing of the previous plans to some extent is responsible for this and also some lapses in the implementation of the plan. So, I say that we are at the cross roads in the history of Mysore finances. The future prosperity of the Mysore State depends on a proper understanding of what has happened in the previous plan periods and what should be done in the next plan to avoid these mistakes and to function in a climate of financial responsibility. I have no hesitation in saying that most of the States in the Country are having these difficulties. The position is very bad. I do agree with our Chief Minister when he says that a certain amount of deficit financing is necessary for the development of the State. But Deficit financing means we must get sufficient income and return by which we can repay the debts. Otherwise we can get into a situation which I can only describe as runaway borrowing. Where we have to borrow in order to repay previous borrowing. Most of the States are in this situation and therefore, I have no hesitation in saying that the whole concept of budgetary deficits and surplus have broken down. Therefore there is no meaning at all to talk in terms of surplus budget or deficit budget if we at the end of year we run into the tremendous overdraft, which was not contemplated in the budget. I am not saying that this is happening in Mysore only. But this is the situation prevailng in almost all the States. For instance, take 1967-68 Mysore Budget. We had an estimated revenue surplus of Rs.8-58 crores and an overall surplus of about 50 lakhs. What happened at the end of the year was, our

(SRI M. Y. GHORPADE)

negative cash balance went up from 2·95 crores to 12·79 crores after taking about 11 crores from the Government of India as an *ad hoc* loan. without the *ad hoc* loan the negative eash balance would have been to the tune of 24 crores. So, these are our figures and nobody has tried to dispute them. This is after borrowing 44 crores from the Government of India for debt repayment of 40 crores during 1967-68. This was because of defective financing of plans. This defective financing has resulted in the dependence of the States on Central Government. The Madras Government has said that the dependence of the State on Centre should not be so much. In Mysore towards a plan of 60 crores last year, we were able to contribute only Rs. 9 crores and the rest came by overdraft and Government of India loan. Now I submit that such dependence on the Central Government means that State Governments will not be able to take independent political decisions on matters which concern the people vitally. Therefore, there is much strength in saying that the dependence on the centre must be limited as far as possible and the State centre responsiblity must be reviewed in a fundamental way.

In the year 1968-69, there in no great change and the sme story will repeat itself.

5-00 P.M.

In 1968-69 the surplus has been calculated without taking into account the emoluments with regard to Dearness allowance which is going to be 8 crores this year and if you take the liability as a result of last year's increase, then as the Finance Minister has pointed out it is 14 crores. This 14 crores has been left-out. What is relevant is negative cash balance at the end of the year. It is also going to be of a very heavy order next year also because the over-drafts has to bear the deficit of this year plus that portion of the plan, which we will not be able to finance from our own resources. Therefore Sir, the time has come when Mysore along with other States will have to fight this issue.

No doubt, the Finance Minister rightly points out that has against a debt of 342 crores, we have assests to the tune of 427 crores. But what we are concerned here is the earning capacity of the assests and I think the Finance Minister will have to make a calculation, as to what is that portion of the debt which we will never be able to re-pay out of earnings and normally revenues of the State, and such portion of the debt will have to be treated differently. Otherwise it will be a permanent drag. We have come to a stage where no further development is likely to take place. For instance, in this budget, there is no provision, whatsoever, even for a single new Minor Irrigation tank. It is very significant. There is the rural electrification, which is vital. At the rate at which we are going, we will never be able to complete it in a reasonable period.

Out of 24,000 villages only 6,000 villages have been electrified. It is possible to electrify all villages in five years, if proper priority is givin to it.

Sri H. SIDDAVEERAPPA.—If a proper Government is there.

Sri M. Y. GHORPADE.—Sir, in the next plan loan liability is likely to be of the order of 400 to 500 crores, let us say. That means, our annual repayment on interst loan will be 50 crores and annual repayment of the capital will be another 50 crores. That means during fourth plan period every year the State will have to spend 100 crores by way of interest and repayment, which amounts to about 50 per cent of the revenues of the State. Therefore, I said the Finance Commission will have to view this position. Unfortunately inspite of all State Governments talking about it, this has not been included in the terms of references of the Finance Commission. I think they shoud review the whole position regarding loans to State Governments and regarding discretionary grants to State Governments which is not a part of the terms and references of the Finance Commission.

Now I understand Sir, that for better planing, the State Government is thinking of setting up, what is called, the planning board at the State level. Sir, if this planning board which is contemplated is to function effectively, I suggest that it should be responsible not only for plan formulation but also for effective review and supervision of plan implementation. Because failure has not been in the formulation of plan. Failure has been at the plan implementation level. It must function as an effective sub-committee of the Cabinet. It must have sufficient powers to supervise implementation of what we want to do. Not only plan formulation there is a tremendous gap between formulation and implementation. The central Planning Commission makes plans. But the implementation is at the State level, over which they have no control. Planning at the state-level need not suffer from that disadvantage. Therefore I make that suggestion. Now Sir, inspite of this position in Mysore which resluts from the general pattern of central state finances it is not the condemnation of the Finance Minister or the Government, I say that, once we tell the Government of India that this is the portion of the loan that we will be able to repay cut of earnings and once the problem is removed from our way, than we can we look forward to a plan, *i. e.*, fourth plan, in a climate of financial responsibility. It is possible. Now the Hon'ble Member Mr. Siddaveerappa said that he is not prepared to pay taxes and do savings. Now he is fully entitled to criticise the Government if some amounts are mis-spent or if priorities are not correct. But if a respectable Member of the opposition like Mr. Siddaveerappa says that we are not prepared to pay taxes or to do savings, then I feel Sir, it is not fair, because we come to a dead end. After all, if you want to develop anything, it has to come either from taxes or from savings or from profits made by public enterprises and if you do not want to do this through taxes or savings and still want to develop, then it has come from deficit financing, as

(SRI M. Y. GHORPADE)

has been happening. The poor man does not get saved. As a matter of fact defecit financing is the worst form of taxation. Take for instance, from the last 4 or 5 years prices went up by 50 to 60 per cent, which means that the poor man is able to buy half the quantity of goods with the same money, as the purchasing power of money has gone down by half. In other words, his hardship is the same as would have been the case if he is taxed at 50 per cent of his real income at central prices. To tax the poor indirectly by allowing inflation, I think is more cruel than to tighten our belt by way of progressive taxation and maximising savings. Therefore, the Finance Minister, in his speech has rightly said that a certain amount of resources will have to be raised and from the rural sector as well. But the only problem of taxing the rural sector is that agriculture has not yet become an industry. We say that agriculture should become an industry. It is yet to become a reality. The concept of net profit in agriculture is yet to develop. In industry it is easy to tax, because the profit is very clear. But in agriculture what is the net profit is difficult to determine. And then there are so many fluctuations like price and seasonal fluctuations. The cultivator is not used to book-keeping, accounting and the entire dry-farming, results in tremendous variations from year to year. There is need to prevent migration of talent from rural areas to towns. We have to take all these factors into account before we tax rural arears. At the same time, there is much meaning when the Finance Minister says on page 16 of the budget speech that:

> "while tax revenue to National Income is about 15 per cent, the tax on land and agricultural income is less than Two per cent of the total agricultural income."

He adds that "mobilising resources in Rural Sector by suitable taxation and intensification of Small Savings. This is necessary not only for strengthening the resources position but also to curb the inflationary pressures." Here, I would add that inflationary pressure is avoided or kept to the maximum only when we use this money in quick yielding projects and that becomes the primary responsibility of the Government. I would go a step further and say that there is a great need to transfer resources from irrigated to unirrigated areas. Today, vested intrest has developed in the rural sector in the irrigated areas which are politically powerful and who do not want to part with a reasonable part of their prosperity or income for the benefit of all especially the rainfed areas. Therefore the unirrigated area which constitutes two-thirds of this country will never develop and this position both the Government and the Opposition will have to face. I Feel that in the rural sector there is more scope for mobilisings savings than for taxation right now. Commercial Banks can play a very important part. If the commercial banks are going to lend and support agriculture, then the Reserve Bank should

make money available at a low rate of interest and there should be no question of our protecting any inefficiency in the co-operative sector. Commercial Bank should play a very prominent role.

I should like to say a word about food levy and distribution. I also personally feel that food levy is wearisome and troublesome. But it is absolutely essential to safeguard the weaker sections of people of Mysore State that some stocks are built up. Therefore, we cannot take a hasty decision to give up levy before other methods are developed to collect grain. For instance, I am all for market purchases when prices are low. For the present let both these things go on side by side until we are sure that market purchases alone will prove satisfactory. After all, our levy target is 2½ lakhs tons and we expect another 2½ lakh tons from the Government of India. Therefore, every year we must have 5 lakh tons stock in order to meet the situation where for two or three months poor people do not get grains. Therefore we should not give up levy in a hurry until other methods succeed. Otherwise, vulnerable sections of society especially labour are not getting what they are entitled to get. The Finance Minister in the very first paragraph of his speech has mentioned about the language problem and even the Education Minister has said in the Legislative Council that the Centre should rectify the situation either by removing the unequal language burden or by shelving the resolution. He has also said that those who intend to join the Central Services must pass in three languages and Hindi speaking people should pass in a South Indian language also. Of course, the Education Minister does not specify whether a candidate will be free to take the UPSC examination in any medium he likes. After all equality must be real and not superficial. Now, in my own view, it is unrealistic to expect the North or the Hindi speaking people to learn a South Indian language. Past experience clearly shows that in the North there has been only two-language formula and now if you permit them to take the UPSC examination in Hindi there, there will be only one language formula, that is their mother tongue, whereas in South Indian States, we have to learn three-languages and if our mother tongue is different from the regional languages, then we may have to learn four languages. On the top of all this, there is no room for learning a classical language like Sanskrit. I feel it is more easy and more realistic to leave the South to learn a Third language voluntarily and not compulsorily. I think that not more than two languages should be compulsory for examination purposes and there should be the option to learn a third language. No language should be excluded from the available choice. I feel that until the South is ready for it, we should not make any changes at the Centre. The very essence of Nehru's assurance was that the arrangement regarding the running of the Central Government and the UPSC and the rest of it should continue as it is and nothing of that will be changed until the South accepts it. The trouble is not against learning Hindi. We would like to learn Hindi. The trouble is medium of UPSC examination and the running of Central Government which has been changed without consideration for the opinion in South India, in the non-Hindi

(SRI M. Y. GHORPADE)

States. I feel *status quo* should continue at the Centre, *i.e.*, whatever was there before the Language Amendment Act and the Resolution was passed should continue until such time as South agrees voluntarily for change from English to Hindi. It is unrealistic to expect two languages in the Centre to thrive and co-exist side by side in the hands of officials with unequal knowledge of these languages and supported by an army of translators who would only make confusion worst confounded. So long as language formula at the academic level is concerned, it should not be compulsory to learn more than 2 languages for an examination; it should be optional to learn the third language. So far as medium is concerned, it should be left to the choice of the parents and students. If the Government says we shall not recognise any school or college and shall not give grant unless this or that medium exists, it is wrong to say so; it violates the very fundamental rights of the citizens of this country. I think if these principles are kept in view, there would be no difficulty. When the Prime Minister, Srimathi Indira Gandhi had come to Bellary District, she addressed a big public meeting in Kudligi. I welcomed her in Kannada and requested her to address the gathering in Hindi and she did so. Mr. Chavan has picked up enough Hindi to address a public meeting in Hindi. But it is altogether a different thing to appear for UPSC Examination in Hindi or to write complicated financial or judicial notes in Hindi or make court decisions in Hindi. People like Mr. Setalvad and Chagala have said that it will take atleast 30 years before court decisions are translated to a level adequate for interpretation. So, Sir, in view of the shortness of time, and in order to make my ideas of language clear, I shall write an article and give it to the Press.

Sri H. SIDDAVEERAPPA.—By way of personal explanation, my friend referred to my speech and said that I advocated no tax payment. I did do it but for an entirely different reason altogether. That was because by way of answer to the squander-mongering of Government, spending-spree and without any purpose on losing concerns and not properly husbanding the resources and utilising it for the public. I said that in the hands of such men, administration can never be safe and therefore people should never pay any tax to them.

† ಶ್ರೀ ಎಂ. ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಮುಂಗಡಪತ್ರವು ನಮಗೆ ಹೊಸದೇನೂ ಅಲ್ಲ. ಇದರಲ್ಲಿ ಯಾವ ಒಂದು ಹೊಸ ವಿಶೇಷ ಕಂಡು ಬರುತ್ತಾ ಇಲ್ಲ. ವರ್ಷ ವರ್ಷ ಮಾಮೂಲಾಗಿ ಬರತಕ್ಕಂತಹದ್ದು. ನಮಗೆ ಇವತ್ತು ಸಮಾಜದಲ್ಲಿರತಕ್ಕಂತಹ ಸಮಸ್ಯೆ ಏನೇ ಆಗಲೀ, ದೇಶದಲ್ಲಿರತಕ್ಕ ಯಾವ ಒಂದು ನಿರುದ್ಯೋಗ ಸಮಸ್ಯೆಯಾಗಲಿ, ನೀಗುವ ಒಂದು ದೇಶದ ಪ್ಲಾನಾಗಲೀ, ಸ್ಕೀಮಾಗಲಿ ನಮಗೆ ಕಾಣುತ್ತಾ ಇಲ್ಲ. 20 ವರ್ಷದಿಂದ ನಮ್ಮ ರಾಜ್ಯದಲ್ಲಿ ಒಂದೇ ತರನಾದಂತಹ ಬಜೆಟನ್ನು ನೋಡುತ್ತಿದ್ದೇವೆ. ಬರಬರುತ್ತಾ ನಿರುದ್ಯೋಗ ಸಮಸ್ಯೆಯು ದೇಶದಲ್ಲಿ ತಾಂಡವಾಡುತ್ತಾ ಇದೆ. ವಿದ್ಯಾವಂತನಿಗಾಗಲಿ, ಅಥವಾ ಅವಿದ್ಯಾವಂತರಿಗಾಗಲಿ, ನಿರುದ್ಯೋಗವನ್ನು ಬಗೆಹರಿಸತಕ್ಕಂಥದ್ದು ಈ ಬಜೆಟಿನಲ್ಲಿ ಏನೂ ಕಾಣುತ್ತಾ ಇಲ್ಲ. ಆದ್ದರಿಂದ ಇದು ಮಾಮೂಲಾಗಿ ಇಂದು ಅಧಿಕಾರಿಗಳಿಂದ

ಹೇಳಿಸಿ ಬರೆಸಿದಂತಹ ಬಜೆಟ್ ಅಲ್ಲದೆ, ಹೊಸದಾಗಿ ಸ್ವಾಗತ ಮಾಡತಕ್ಕ ಬಜೆಟ್ ಏನೂ ಅಲ್ಲ. ದಿನೇ ದಿನೇ ದೇಶದಲ್ಲಿ ನಮ್ಮ ಯುವಕರುಗಳ ಶಕ್ತಿ ಮತ್ತು ಅವರ ಸೇವೆಯ ಸಾಮರ್ಥ್ಯವನ್ನು ಹೆಚ್ಚಿಸತಕ್ಕ ಅವರನ್ನು ಉಪಯೋಗ ಮಾಡಿಕೊಳ್ಳತಕ್ಕ ಯಾವ ಪ್ರಯತ್ನವನ್ನೂ ನಾವು ಮಾಡುತ್ತಾ ಇಲ್ಲ. ಇವತ್ತು ತಂಡೋಪತಂಡವಾಗಿ ವಿದ್ಯಾವಂತರಾಗಿರತಕ್ಕ ಯುವಕರು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಬಲಯುತವಾದ ರೈತಾಪಿ ಜನರ ಮಕ್ಕಳು ಕೆಲಸವಿಲ್ಲದೆ ದೇಶದಲ್ಲಿದ್ದಾರೆ. ಈಗ ವ್ಯವಸಾಯ ಕ್ಷೇತ್ರದಲ್ಲಿಯಾದರೂ ಮಳೆಬೆಳೆ ಆಗಾಗ್ಗೆ ಆಗದೆ, ಯಾವ ಕೆಲಸಕಾರ್ಯಗಳನ್ನು ಮಾಡದೆ ನಿರುದ್ಯೋಗದಿಂದಾಗಿ ಸುಮ್ಮನೆ ಕಾಲ ಕಳೆಯುತ್ತಾ, ಮರಗಳ ಅಡಿಯಲ್ಲಿ ಆಡುತ್ತಾ ಕುಳಿತಿರುತ್ತಾರೆ. ವ್ಯವಸಾಯಕ್ಕೆ ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದೇವೆಂದು ಇವರು ಹೇಳಿದ್ದಾರೆ. ಅದೇನೋ ನಿಜ. ಹಾಗೆ ಇವತ್ತು ನಾವು ಪಂಪ್‌ಸೆಟ್ಟುಗಳನ್ನು, ಮೈನರ್ ಇರಿಗೇಷನ್ ಮತ್ತು ಪ್ರೊಜೆಕ್ಟುಗಳನ್ನು, ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಹಾಕತಕ್ಕದ್ದು ಎಂದು ಹೇಳುತ್ತಿದ್ದಾರೆ. ಹಾಗೆ ಹೇಳುತ್ತಾರಲ್ಲದೆ ಕಾರ್ಯದಲ್ಲಿ ಮಾಡುತ್ತಾ ಇಲ್ಲ. ಈಗ 20 ವರ್ಷಗಳಿಂದ ನಾವು ನೋಡುತ್ತಿದ್ದೇವೆ. ಗ್ರಾಮಾಂತರ ಜನರು ಕೂಡ ಹೇಳುತ್ತಿದ್ದಾರೆ. ರಾಜರ ಕಾಲದಲ್ಲಿ ಕೈಗೊಂಡಂತಹ ಅಭಿವೃದ್ಧಿ ಕಾರ್ಯಗಳನ್ನು ಬಿಟ್ಟರೆ, ಪ್ರಜಾಪ್ರಭುತ್ವದಲ್ಲಿ, ಏನು ಮಾಡಿದ್ದಾರೆ? ಎಷ್ಟು ಎಕರೆ ನೀರಾವರಿ ಮಾಡಿದ್ದಾರೆ, ? ಎಂದು. ಪ್ರಾಜೆಕ್ಟಿಗೆ ಏನೋ ಫೌಂಡೇಶನ್ ಆಗಿರುತ್ತದೆ. ಇವತ್ತು ತುಂಗಾ ಮತ್ತು ಭದ್ರಾ ನೋಡಿ. ಈಗಾಗಲೇ 10-12 ವರ್ಷವಾಯಿತು. ವ್ಯವಸಾಯಕ್ಕೆ ಎಷ್ಟು ಭೂಮಿ ಬಂದಿದೆ? ನೀವು ಮಾಡತಕ್ಕ ಕೆಲಸ ಅಷ್ಟು ಜರೂರಾಗಿ ಮಾಡುತ್ತಾ ಇಲ್ಲ. ಪ್ಲಾನ್ ಹಾಕುತ್ತೀರಿ, ಮಾಡುತ್ತೀರಿ, ಸ್ಕೀಮ್ಸ್ ಹಾಕುತ್ತೀರಿ. ಘೋರ್ಪಡೆಯವರು ಹೇಳಿದ ಹಾಗೆ ಪ್ಲಾನಿಂಗ್ ಹಾಕಿರತಕ್ಕ ಸ್ಕೀಮ್ಸ್ ಕಾರ್ಯಗತ ಮಾಡತಕ್ಕದ್ದು ಅಷ್ಟು ದಕ್ಷತೆಯಿಂದ ಮಾಡುತ್ತಾ ಇಲ್ಲ. ಆದ್ದರಿಂದ ದೇಶದಲ್ಲಿರತಕ್ಕ ಸಂಪಾದನೆ ಜಾಸ್ತಿಯಾಗುತ್ತಾ ಇಲ್ಲ.

[MR. DEPUTY SPEAKER in the Chair.]

ನಿಮಗೆ ಸಾಮರ್ಥ್ಯವಿರುವಂತಹ ಜನರನ್ನು ಇಟ್ಟುಕೊಳ್ಳುವುದಕ್ಕೆ ಮನಸ್ಸಿಲ್ಲ. ಇವತ್ತು ದಾರಿದ್ರ್ಯ ದೇಶಕ್ಕೆ ಬಂದಿರಬೇಕಾದರೆ, ಅದು ದೇವರ ಶಾಪದಿಂದಲ್ಲ, ಅದು ನೀವು ಮಾಡತಕ್ಕ ಕಲ್ಪನೆ. ಇವತ್ತು ಲಕ್ಷಾಂತರ ರೂಪಾಯಿಗಳನ್ನು ವ್ಯವಸಾಯಕ್ಕೆ ಖರ್ಚು ಮಾಡುತ್ತಾರೆ. 20 ವರ್ಷದಿಂದ ಹೀಗೆ ಆದರೆ, ಇನ್ನು ಎಷ್ಟು ವರ್ಷಬೇಕು, ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಿ ಅದರಿಂದ ಜನತೆಗೆ ಅನುಕೂಲ ಮಾಡಿಕೊಡಬೇಕೆಂದರೆ ಎಷ್ಟು ವರ್ಷಬೇಕು ಎಂದು ಯೋಚಿಸಬೇಕು. ಅದೇ ರೀತಿಯಲ್ಲಿ ಹೇಮಾವತಿ, ಕಬಿನಿ ಇವೆಲ್ಲಕ್ಕೂ ಯೋಜನೆಗಳನ್ನು ಹಾಕುತ್ತಿದ್ದಾರೆ, ಲಕ್ಷಗಟ್ಟಲೆ ಖರ್ಚು ಮಾಡುತ್ತಿದ್ದಾರೆ. ಈ ವೇಗದಲ್ಲಿ ಕೆಲಸಮಾಡಿದರೆ, ಎಂದಿಗೆ ದೇಶದ ಸಂಪಾದನೆ ಹೆಚ್ಚಿಸಬಹುದು ? ದೇಶದಲ್ಲಿರತಕ್ಕ ನಿರುದ್ಯೋಗ ಅಭಾವವನ್ನು ನೀಗಿಸಬಹುದು ? ಸುಮ್ಮನೆ ಕೇವಲ ದರ್ಬಾರು ಮಾಡುತ್ತಾ, ರಾಜಕೀಯ ಮಾಡಿದರೆ ಏನು ಪ್ರಯೋಜನ ? ಆದ್ದರಿಂದ ವ್ಯವಸಾಯ, ಅದರ ಜೊತೆಗೆ ಅಂಟಿಕೊಂಡಿರತಕ್ಕ ಪಿ.ಡಬ್ಲ್ಯು.ಡಿ. ಇಲಾಖೆಗಳು ಅಸಕ್ತಿಯಿಂದ ಕಾತುರತೆಯಿಂದ ಕೆಲಸ ಮಾಡಬೇಕು. ಇವೆರಡೂ ದೇಶದಲ್ಲಿ ಬಹಳ ಚೆನ್ನಾಗಿ ನಡೆದರೆ, ಮತ್ತು ಅದರ ಜೊತೆಗೆ ಕೈಗಾರಿಕೆಯೂ ಮುಂದುವರಿದರೆ ನಮ್ಮ ದೇಶವು ಎಲ್ಲದರಲ್ಲಿಯೂ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ. ಅದರ ಬದಲು ಡೋಲಾಯಮಾನವಾಗಿ, ಏನೋ ಮಾಡುತ್ತಿದ್ದೇವೆ, ಎಂಬ ಒಂದು ದೃಷ್ಟಿಯಿಂದ ಸರ್ಕಾರ ನೋಡುತ್ತಿದ್ದರೆ, ಇವತ್ತಿನ ದಿವಸ ಏನು ಪ್ಲಾನ್‌ಗಳು, ಸ್ಕೀಮುಗಳು ಇವೆ, ಅವುಗಳನ್ನು ಎಲ್ಲಾ ಬಿಟ್ಟು ಬಿಡಿ ಎಂದು ಹೇಳುತ್ತೇನೆ. ಇವತ್ತು ದೇಶದಲ್ಲಿ ಕೈಗಾರಿಕೆ ಅಭಿವೃದ್ಧಿಯಾಗಬೇಕು, ವ್ಯವಸಾಯ ಅಭಿವೃದ್ಧಿಯಾಗಬೇಕು. ಇವೆರಡಕ್ಕೂ ಎಷ್ಟು ಬೇಕಾದರೂ, ತೆಗೆದುಕೊಳ್ಳಿ. ಇನ್ನು ಬೇರೆ ಯಾವುದು ಬೇಡ. ಯುದ್ಧ ಕಾಲದಲ್ಲಿ ಏನೊಂದು ಕೆಲಸ ಮಾಡುತ್ತೇವೆ, ಅ ರೀತಿಯಲ್ಲಿ ಇದನ್ನು ಮಾಡಿ. ನೀವು 200 ಕೋಟಿ ಏನು ಹೇಳಿದ್ದೀರಿ, ಅದನ್ನು ಹಳ್ಳಿಯಲ್ಲಿ, ಹೇಳಿದರೆ, 'ಅಯ್ಯೋ ಬಿಡಯ್ಯಾ, ಇಲ್ಲ ಹೊಟ್ಟೆಗಿಲ್ಲ, ಬಟ್ಟೆಗಿಲ್ಲ, ಇವರ 200 ಕೋಟಿಯಿಂದ ಏನು ಬಂತು' ಎಂದು ಹೇಳುತ್ತಿದ್ದಾರೆ. ಅನೇಕ ಹಳ್ಳಿಗಳಲ್ಲಿ ಜನರು ಹೊಟ್ಟೆ ತುಂಬಾ ಉಣ್ಣುತ್ತಾ ಇಲ್ಲ. ಎಷ್ಟೋ ಜನರು ವಾರಕ್ಕೆ ಎರಡು ಮೂರು ಸಲ ಉಪವಾಸ ಮಾಡತಕ್ಕ ಪರಿಸ್ಥಿ ಇದೆ. ನಿಮ್ಮ ಸಣ್ಣ ಸಣ್ಣ ಸ್ಕೀಮುಗಳನ್ನು ಇವತ್ತು ಬಿಟ್ಟು ಬಿಡಬೇಕು. ಅದು ಇಂದು ಬಡವರ ಹೆಸರಿನಲ್ಲಿ ಯಾರ್ಯಾರಿಗೋ ಹೋಗುತ್ತಿದೆ. ಇಂಥ ಸ್ಕೀಮುಗಳಿಂದ ಪ್ರಯೋಜನವಿಲ್ಲ. ಇಂಥವುಗಳನ್ನು ಬಿಟ್ಟು ಮುಖ್ಯವಾಗಿರತಕ್ಕಂಥ ವ್ಯವಸಾಯ, ಮತ್ತು ಕೈಗಾರಿಕೆಯನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಕೈಗಾರಿಕೆಗಳನ್ನು ಕೂಡ ಎಲ್ಲಾ ಒಂದೇ ಕಡೆ ಸೇರಿಸುತ್ತಿದ್ದಾರೆ. ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸಿನಲ್ಲಿ ಒಂದೊಂದನ್ನು ತೆಗೆಯುವುದಕ್ಕೆ ಏರ್ಪಾಡು ಮಾಡಿ. ಸರ್ ವಿಶ್ವೇಶರಯ್ಯನವರು ಏನು ಒಂದು

(ಶ್ರೀ ಎಂ. ಕೆ. ಬೊಮ್ಮೇಗೌಡ)

ನೀತಿ ಇಟ್ಟುಕೊಂಡಿದ್ದರು, ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆಗಳು ಬೆಳೆಯಬೇಕು ಎಂದು ಹೇಳಿ ಅದು ಎಲ್ಲಿ ಹೋಯಿತು? ದುರಾದೃಷ್ಟದಿಂದ ಕಾಟೇಜ್ ಇಂಡಸ್ಟ್ರಿಯನ್ನು ಕೈ ಬಿಟ್ಟದ್ದಕ್ಕೆ ಕಾರಣವೇನು? ದೇಶಕ್ಕೆ ಇದರಿಂದ ಏನೂ ಪ್ರಯೋಜನವಿಲ್ಲವೆಂದು ಕಂಡುಹಿಡಿದರೇನು? ಅದೂ ಇಲ್ಲ.

5-30 P.M.

ನೀವು ಮಾಡುವ ಯಾವ ಸ್ಕೀಂ ಆಗಲಿ ಅಥವಾ ನೀವು ಯಾವ ಯೋಜನೆಯನ್ನೇ ಮಾಡಲಿ ಅಲ್ಲೆಲ್ಲಾ ಬರೀ ಅಧಿಕಾರಿಗಳನ್ನು ತುಂಬಿಕೊಂಡು ಸಂಬಳಗಳನ್ನು ಕೊಡುತ್ತಿದ್ದೀರಿ. ಇದರಿಂದ ಹಳ್ಳಿಗಾಡಿನ ಜನಕ್ಕೆ ಏನೂ ಉಪಯೋಗವಾಗುತ್ತಿಲ್ಲ. ಇಲ್ಲಿರುವ ಅಧಿಕಾರಿಗಳು ವರ್ಷದಲ್ಲಿ ಸುಮಾರು ಒಂಭತ್ತು ತಿಂಗಳು ಕಾಲ ಸುಮ್ಮನೆ ಕಾಲಹರಣ ಮಾಡುತ್ತಿರುತ್ತಾರೆ. ಇದರಿಂದ ರಾಜ್ಯಭಾರ ಮಾಡತಕ್ಕ ನಿಮ್ಮ ಜನರ ಕೈಲಿ ಶಕ್ತಿ ಹಾಳಾಗಿ ಹೋಗುತ್ತದೆ, ರೈತಾಪಿ ಜನರಿಗೆ ಅನುಕೂಲಗಳೇನೂ ಆಗುತ್ತಿಲ್ಲ ಮತ್ತು ಇದರ ಬಗ್ಗೆ ಜನ ನಿಮ್ಮ ಮೇಲೆ ನಿಗಾ ಇಡಬೇಕು ಎನ್ನುವುದನ್ನು ಈಗಾಗಲೇ ಅರ್ಥಮಾಡಿಕೊಂಡಿದ್ದಾರೆ. ಮತ್ತು ಹಳ್ಳಿಗಾಡಿನ ಜನರು ಜಾಗರೂಕತೆ ವಹಿಸುತ್ತಿದ್ದಾರೆ. ಇದನ್ನು ನಾನು ಬೇರೆಯಾಗಿ ಇಲ್ಲಿ ಹೇಳಬೇಕಾಗಿಲ್ಲ. ಅವರೇನು ಮಾಡುತ್ತಾರೆ ಎನ್ನುವುದು ತಮಗಾಗಲೇ ತಿಳಿದಿದೆ. ಇದರ ಕಡೆಗೆ ಸರಕಾರ ಲಕ್ಷ್ಯ ಕೊಡಬೇಕು. ಮತ್ತು ಈಗ ಸರಕಾರದವರು ಏನು ಮಾಡುತ್ತಿದ್ದಾರೆಂದರೆ, ಬರೀ ಪ್ರಾಬ್ಲಂಸ್ ಎಂದರೆ ಸಮಸ್ಯೆಗಳನ್ನು ತಯಾರು ಮಾಡುತ್ತಿದ್ದಾರೆ. ನಿಮಗೆಲ್ಲಾ ಗೊತ್ತಿರುವ ಹಾಗೆ ಭಾಷಾ ಸಮಸ್ಯೆ ಯಾರಿಗೆ ಬೇಕಾಗಿತ್ತು? ಹಿಂದಿಯನ್ನು ನಮ್ಮ ಮಕ್ಕಳು ಕಲಿಯುತ್ತಿರಲಿಲ್ಲವೇನು? ಓದುತ್ತಿರಲಿಲ್ಲವೇನು? ನಮ್ಮ ಮನೆಯಲ್ಲೂ ಕೂಡ ಹುಡುಗರು ಈ ಸಾರಿ ಪ್ರಾಥಮಿಕ ಪರೀಕ್ಷೆಗೆ ಕೂರುತ್ತೇವೆ, ಬೇಸಿಗೆಯಲ್ಲಿ ಮಾಧ್ಯಮ ಪರೀಕ್ಷೆಗೆ ಕೂರುತ್ತೇವೆ ಎಂದು ಹೇಳುತ್ತಿರುವುದನ್ನು ಕೇಳಿದ್ದೇವೆ. ಹಿಂದಿ ಭಾಷೆಯ ಬಗ್ಗೆ ಯಾರಿಗೂ ದ್ವೇಷವೇ ಇರಲಿಲ್ಲ. ಹಿಂದಿಯ ಭಾಷೆ ಬಗ್ಗೆ ದ್ವೇಷವನ್ನು ಹುಟ್ಟಿಸಿದವರೇ ಇಂಡಿಯಾ ಸರಕಾರದವರು. ಹಿಂದಿ ವೈರತ್ವವನ್ನು ನೀವು ಈ ದೇಶದಲ್ಲಿ ತಂದು ಸಮಾಜದಲ್ಲಿ ಒಂದು ರೀತಿಯಾದ ಅಶಾಂತಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಯಾವ ಯಾವ ಕಡೆ ಹುಡುಗರಿಂದ ಭಾಷಾ ಸಮಸ್ಯೆಗಳಾಯಿತೋ ಇಂತಹ ಭಾಷಾ ಸಮಸ್ಯೆಯನ್ನು ನಿಗಾ ಇಟ್ಟು ತಡೆಯಲಿಕ್ಕೆ ನಿಮಗೆ ಆಗಲಿಲ್ಲ. ಇಲ್ಲದ ಅಶಾಂತಿಗೆ ಕಾರಣವಾಯಿತು. ಇದರ ಬಗ್ಗೆ ಸರಿಯಾದ ಕಾಲದಲ್ಲಿ ಒಂದು ತೃಪ್ತಿಕರವಾದ ತೀರ್ಮಾನವನ್ನು ತೆಗೆದುಕೊಂಡಿದ್ದರೆ ಇಂತಹ ಅಶಾಂತಿಗಳೇ ಬರುತ್ತಿರಲಿಲ್ಲ. ಸಕಾಲದಲ್ಲಿ ಇದರ ಬಗ್ಗೆ ತೃಪ್ತಿಕರವಾದ ತೀರ್ಮಾನವನ್ನು ಮಾಡದೇ ಇರುವುದರಿಂದ ಭಾಷಾ ಸಮಸ್ಯೆಯನ್ನು ಇನ್ನೂ ಹೆಚ್ಚು ಮಾಡಲು ಕಾರಣವಾಯಿತು. ಅಶಾಂತಿ ಹೆಚ್ಚಾಯಿತು. ಇದಕ್ಕೆಲ್ಲಾ ಹೊಣೆ ಯಾರು ಎಂದರೆ, ನೀವೇ. ಆಡಳಿತ ನಡೆಸುತ್ತಿರುವ ನೀವು ಹಿಂದಿಯ ಬಗ್ಗೆ ಇಲ್ಲದ ದ್ವೇಷ ಬರುವಂತೆ ಮಕ್ಕಳಲ್ಲಿ ಹರಡಿದ್ದೀರಿ. ಇದಕ್ಕೆಲ್ಲಾ ಸರಕಾರವೇ ಕಾರಣ. ನಾನಾಗಲೇ ಹೇಳಿದಂತೆ ಸುಮಾರು ಎರಡು ಮೂರು ತಿಂಗಳ ಹಿಂದೆ ನಮ್ಮ ಮಕ್ಕಳು ಬಲಿಯಾದ ಮೇಲೆ ನಿಮಗೆ ಕಣ್ಣು ತೆರೆಯುತ್ತಿದೆ! ಇದರಲ್ಲಿ ಎಲ್ಲೋ ಏನೋ ದೋಷಗಳಿವೆ ಎಂದು ಹೇಳುತ್ತಿದ್ದರೂ ನೀವು ಅದಕ್ಕೆ ಗಮನ ಕೊಡುತ್ತಿಲ್ಲ. ಇದರ ಬಗ್ಗೆ ಈ ಹೌಸಿನಲ್ಲಿ ಒಂದು ಸಾರಿ ತ್ರಿಭಾಷಾ ಸೂತ್ರಕ್ಕೆ ಕೈ ಹಾಕಬೇಕು ಎಂದು ಹೇಳುವಾಗ ನಿಮ್ಮ ದೃಷ್ಟಿ ಎಲ್ಲಿ ಹೋಗಿತ್ತು? ಇದರಲ್ಲಿ ಜನಗಳ ಅಭಿಪ್ರಾಯವೇನು, ಸಾರ್ವಜನಿಕರು ಇದಕ್ಕೆ ವಿರೋಧವಾಗಿದ್ದಾರೋ ಇಲ್ಲವೇ ಅನುಕೂಲವಾಗಿದ್ದಾರೋ, ಇವನ್ನು ಸರಿಯಾಗಿ ಪರಿಶೀಲನೆ ಮಾಡಿ ತಿಳಿದುಕೊಳ್ಳಲಿಲ್ಲ. ಯಾರೋ ಹುಡುಗರು ಅಥವಾ ಗೂಂಡಾಗಳು ತೊಂದರೆ ಮಾಡಿದರು ಎಂದು ಅವರ ಮೇಲೆ ಗುಂಡು ಹಾಕಿ ಕೊಂದಾಗ ನಿಮಗೆ ಕಣ್ಣು ತೆರೆಯಿತು ಮತ್ತು ಹಾಗೂ ಸಾರ್ವಜನಿಕರ ಆಸ್ತಿ ಪಾಸ್ತಿಗಳನ್ನು ಹಾಳುಮಾಡುವಾಗ ನಿಮ್ಮ ಆಡಳಿತ ಹೇಗಿತ್ತು ಎಂದು ಕೇಳಬೇಕಾಗಿದೆ. ಹುಡುಗರು ರಸ್ತೆಗಳಲ್ಲಿ ದೀಪಗಳನ್ನು ಹಾಗೂ ಇತರ ಕಟ್ಟಡಗಳನ್ನು ಹಾಳು ಮಾಡಿದರು ಎಂದರೆ ಇದರಿಂದ ಯಾರಿಗೆ ಹಾನಿಯಾಯಿತು? ಇದನ್ನು ಸರಿಪಡಿಸಬೇಕಾದರೆ ಬಡ ಬೋರೇಗೌಡ ಕೊಟ್ಟಿರುವ ಸುಂಕದಿಂದಲೇ ಇದನ್ನು ತುಂಬಿಕೊಳ್ಳಬೇಕಾಗುತ್ತದೆ. ಇದಕ್ಕೆಲ್ಲಾ ಆಡಳಿತ ನಡೆಸತಕ್ಕ ನೀವೇ ಜವಾಬುದಾರರು ಆಗಿರತಕ್ಕವರು ಮತ್ತು ಇದರ ಜವಾಬುದಾರಿಯನ್ನು ಬೇರೆ ಯಾರ ಮೇಲೂ ಹಾಕುವುದಕ್ಕೆ ಆಗುವುದಿಲ್ಲ. ಇಲ್ಲದ ಸಮಸ್ಯೆಗಳನ್ನು ಸೃಷ್ಟಿ ಮಾಡಲು ನೀವೇ ಕಾರಣರು.

ಮತ್ತೆ ಆಡಳಿತ ನಡೆಸುವ ಪಕ್ಷದಲ್ಲಿ ಪ್ರಜಾಪ್ರಭುತ್ವದಂತೆ ನಡೆಯುತ್ತಿದ್ದೇವೆ ಎಂದು ಹೇಳುತ್ತಾರೆ ಕಾರ್ಯತಃ ನೀವು ಮಾಡುತ್ತಿರುವುದು ಪ್ರಜಾಪ್ರಭುತ್ವವೇ ಅಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಯಾವುದಾದರೂ ಒಂದು ಹೊಸ ಯೋಜನೆ ಮಾಡುವಾಗ ನೋಡಿದರೆ ಲಕ್ಷಾಂತರ ರೂಪಾಯಿ

ಗಳಷ್ಟು ಖರ್ಚು ಮಾಡಿದರೂ ಅದರಿಂದ ಸಾಕಷ್ಟು ಪ್ರತಿಫಲ ಇಂದು ದೊರೆಯದೇ ಕೆಲಸಗಳು ಹಾಗೇ ನಿಂತಿವೆ. ಮತ್ತು ಯಾವಾಗಲಾದರೂ ಜನಕ್ಕೆ ಅನುಕೂಲವಾಗುವಂತಹ ಬದಲಾವಣೆಗಳನ್ನು ಮಾಡುವಾಗ ಚುನಾವಣೆಗಳು ನಡೆಯುವುದಕ್ಕೆ ಮುನ್ನ ಅದನ್ನು ಜನರಿಗೆ ಹೇಳಿ ಚುನಾವಣೆ ನಡೆಸಬೇಕು. ಆದರೆ ಇಲ್ಲೇನು ಮಾಡಿದ್ದೀರಿ ಎಂದರೆ, ಚುನಾವಣೆಯಾದಮೇಲೆ ನೀವು ಬದಲಾವಣೆ ಮಾಡುತ್ತಿದ್ದೀರಿ. 67ನೇ ಚುನಾವಣೆಯಾಗುವಾಗ ಜನರ ಮುಂದೆ ಬಂದು ಕಂದಾಯ ತೆಗೆಯುತ್ತೇವೆ ಎಂದು ಹೇಳಿ ಬಂದಿರಿ. ಆದರೆ ಚುನಾವಣೆ ಮುಗಿಸಿ ಬಂದಕೂಡಲೇ ಈಗ ಈ ಸಭೆಯಲ್ಲಿ ಬಂದು ಕಂದಾಯದ ವಸೂಲಿಯನ್ನು ಮಾರ್ಚಿ 31 ರ ವರೆಗೆ ವಸೂಲುಮಾಡಬೇಡಿ ಎಂದು ಹೇಳಿದುದನ್ನು ಬದಲಾವಣೆ ಮಾಡಿ ಈಗ ವಸೂಲು ಮಾಡಿ ಎಂದು ಅಧಿಕಾರಿಗಳಿಗೆ ಹೇಳುತ್ತಿದ್ದೀರಿ. ಇದು ಯಾವ ನೀತಿ ? ಯಾವ ನ್ಯಾಯ ! ಇದೇ ಪ್ರಶ್ನೆಯ ಮೇಲೆ ಚುನಾವಣೆಗೆ ಮುಂಚೆ ಜನರ ಮುಂದೆ ಬಂದು ಇಂತಹ ಬದಲಾವಣೆ ಮಾಡುತ್ತೇವೆಂದು ಅವರಿಗೆ ಹೇಳಿ ಅಮೇಲೆ ಚುನಾವಣೆಗೆ ನಿಂತಿದ್ದರೆ ನಿಮಗೆ ಜನರ ಅಭಿಪ್ರಾಯ ಹೇಗಿದೆ ಎನ್ನುವುದು ಗೊತ್ತಾಗುತಿತ್ತು. ಈಗ ಪುನಃ ಹಳ್ಳಿಗಳಲ್ಲಿ ಬಂದು ಕಂದಾಯ ವಸೂಲು ಮಾಡುತ್ತೇವೆ ಎಂದು ಹೇಳುತ್ತಾ ಬಂದು ಅವರ ಅರಿಷಿಗೇ ತರದಂತೆ ಹೀಗೆ ಮಾಡುವುದು ಪ್ರಜಾಪ್ರಭುತ್ವದ ಲಕ್ಷಣವೇ ? ಇದರಿಂದ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯುತ್ತದೆಯೇ ? ಯಾವಾಗಲಾದರೂ ಇರುವ ಮುಖ್ಯ ತತ್ವಗಳನ್ನು ಬದಲಾವಣೆ ಮಾಡುವಾಗ ಜನರಿಗೆ ತಿಳಿಯುವಂತೆ ಅದನ್ನು ಚುನಾವಣೆಯ ಮ್ಯಾನಿಫೆಸ್ಟೋದಲ್ಲಿ ಸೇರಿಸಬೇಕು ಹಾಗೂ ಜನಗಳ ಮುಂದೆ ಇಂತಹ ಬದಲಾವಣೆಗಳನ್ನು ಮಾಡುತ್ತೇವೆ ಎಂದು ಅವರಿಗೆ ತಿಳಿಯುವಂತೆ ಮಾಡಬೇಕು. ಹೀಗೆ ಮಾಡದೇ ಇದ್ದಕ್ಕಿದ್ದಂತೆ ನೀವು ಹೇಳಿದ ಮಾತಿಗೆ ವಿರೋಧವಾಗಿ ಹೋಗುವುದು ಎಂದರೆ ಪ್ರಜಾಪ್ರಭುತ್ವವನ್ನು ಕಾಪಾಡಿಕೊಳ್ಳುವಂತಹ ಮಾರ್ಗ ಇದಲ್ಲ. ಹಿಂದೆ ಇಲ್ಲಿ ಚುನಾವಣೆ ನಡೆಯುವುದಕ್ಕೆ ಮುಂಚೆ ಹಳ್ಳಿಗಾಡಿನ ರೈತರ ಬಳಿ ಬಂದು ಕಂದಾಯವನ್ನು ರದ್ದುಪಡಿಸುತ್ತೇವೆ ಎಂದು ಹೇಳಿ ಚುನಾವಣೆ ಮುಗಿದ ಮೇಲೆ ರೈತರಿಂದ ಕಂದಾಯ ವಸೂಲಿ ಮಾಡುತ್ತೇವೆ ಎಂದು ಹೇಳಿದರೆ ಜನ ನಿಮ್ಮನ್ನು ಏನಂದಾರು ಎನ್ನುವುದಾದರೂ ನಿಮ್ಮ ಗಮನಕ್ಕೆ ಬರಬೇಡವೇ ? ಯಾವ ರೀತಿಯಾಗಿ ಜನತೆಗೆ ಭರವಸೆಯನ್ನು ಕೊಟ್ಟು ಆಡಳಿತ ಮಾಡಲು ಬಂದರೋ ಆದರಂತೆಯೇ ನಡೆಸಿಕೊಂಡು ಹೋಗಬೇಕು. ಸಾರ್ವಜನಿಕರ ಬೆಂಬಲ ಇಲ್ಲದೇ ಇರುವಂತಹ ಇಂತಹ ವಿಚಾರದಲ್ಲಿ ಸರಕಾರ ಒತ್ತಾಯ ಮಾಡುವುದಾದರೆ ಸರಕಾರಕ್ಕೆ ಜನತೆಯ ಬೆಂಬಲ ಸಿಗುವುದೇ ? ಇದನ್ನು ಯಾರೂ ಯೋಚನೆ ಮಾಡುತ್ತಿಲ್ಲ. ಹಿಂದೆ ಈ ದೇಶದ ಸಂಪತ್ತು ಕಡಿಮೆಯಾಗುತ್ತಿದೆ ಎಂದು ಬೇರೆ ರೀತಿಯಾದ ಸುಂಕಗಳನ್ನು ಹಾಕಬೇಕಾಗುತ್ತದೆ ಎಂದು ಹೇಳುತ್ತ ಇದ್ದವರು ಚುನಾವಣೆ ಮುಗಿದಕೂಡಲೇ ಕಂದಾಯ ವಸೂಲಿ ಮಾಡುತ್ತೇವೆ ಎಂದು ಹೇಳುವುದನ್ನು ಜನರನ್ನು ಒಪ್ಪಿಸಿ ಇಲ್ಲಿ ವಸೂಲು ಮಾಡುತ್ತಿದ್ದೀರಾ ? ಜನರ ಅವಗಾಹನೆಗೆ ತರದೇ ನಿಮ್ಮ ಮನಸ್ಸಿಗೆ ಬಂದಂತೆ ಆಡಳಿತ ನಡೆಸುವುದಾದರೆ ಇದು ಪ್ರಜಾಪ್ರಭುತ್ವದ ಲಕ್ಷಣವೇ ? ಇದನ್ನು ಯೋಚನೆ ಮಾಡಬೇಕು. ಇದೂ ಅಲ್ಲದೆ ಇನ್ನೂ ಸರಕಾರ ಇರಿಗೇಷನ್ ಸೆಸ್ ಬೇರೆ ತಂದು ರೈತರ ಮೇಲೆ ಹೊರಿಸುತ್ತಾರೆ ಎಂದು ಕೇಳಿದ್ದೇವು. ಇದನ್ನು ತಂದರೆ ಬಹುಶಃ ಇನ್ನಾವ ರೀತಿಯಾದ ಅನಾಹುತಗಳು ಆಗುವುದೋ ನನಗೇನೂ ಗೊತ್ತಾಗುತ್ತಿಲ್ಲ. ಇರಿಗೇಷನ್ ಸೆಸ್, ಇನಕಂ ಟ್ಯಾಕ್ಸ್ ಹೀಗೆ ಇನ್ನೇನೋ ತರಬೇಕು ಎಂದು ಹೇಳುತ್ತಿದ್ದಾರೆ. ನಾನು ಸರಕಾರದಲ್ಲಿ ಹೇಳುತ್ತಿರುವುದು ಇಂತಹ ಇರಿಗೇಷನ್ ಸೆಸ್ಸುಗಳು ಎಂದು ಯಾವ ತರಹದ ಸೆಸ್‌ಗಳನ್ನೂ ಹಾಕುವುದಕ್ಕೆ ಹೋಗಬೇಡಿ. ಈಗಾಗಲೇ ರೈತನ ಮೇಲೆ ಹೊರಿಸಿರುವ ಹೊರೆಗಳೇ ಸಾಕಾಗಿದೆ. ಇನ್ನು ಮುಂದೆ ಯಾವ ರೀತಿಯ ಸೆಸ್ ಅಥವಾ ಟ್ಯಾಕ್ಸ್‌ಗಳನ್ನು ಹಾಕುವುದಕ್ಕೆ ಹೋಗಬೇಡಿ. ರೈತರ ಶಕ್ತಿ ಈಗಾಗಲೇ ಕುಂದಿ ಹೋಗಿದೆ. ಇನ್ನು ಹೆಚ್ಚು ಭಾರವನ್ನು ರೈತ ಹೋರುವುದಕ್ಕೆ ಆಗುವುದಿಲ್ಲ. ಈಗಾಗಲೇ ದವಸ ದಾನ್ಯಗಳ ಬೆಲೆ ಹೆಚ್ಚಾಗುತ್ತಾ ಹೋಗುತ್ತದೆ. ಇದರಿಂದ ಹೆಚ್ಚು ಬೆಲೆ ಕೊಟ್ಟು ಬೀಜ ಗೊಬ್ಬರ ಇತ್ಯಾದಿಗಳನ್ನು ಕೊಂಡು ಅವನು ಜೀವನ ಮಾಡುವುದೇ ಕಷ್ಟವಾಗಿದೆ. ರೈತನಾದವನು ಕೂಡ ಅವನ ಮಕ್ಕಳನ್ನು ವಿದ್ಯಾಭ್ಯಾಸ ಮಾಡಿಸಬೇಡವೇ ? ಅವರ ಹುಡುಗರಿಗೆ ಬಟ್ಟೆಗಳನು ತೆಗೆದುಕೊಡಬೇಡವೆ ? ಈಗಿನಕಾಲದಲ್ಲಿ ಜೀವನಕ್ಕೆ ಬೇಕಾದ ವಸ್ತುಗಳಿಗೆ ರೈತನಾದವನು ಕೂಡ ಹೆಚ್ಚು ಖರ್ಚು ಮಾಡಬೇಕಾಗಿ ಬಂದಿದೆ. ಅವರು ಬಹು ಕಷ್ಟದಿಂದ ಜೀವನ ನಡೆಸುತ್ತಾ ಬರುತ್ತಿದ್ದಾರೆ ಇಂತಹ ಕಷ್ಟಗಳಲ್ಲಿರುವಾಗ ಇನ್ನೂ ಹೆಚ್ಚಿಗೆ ತೆರಿಗೆ ಹೊರುವಂತೆ ಅವನ ಮೇಲೆ ಹೊರಿಸಬಾರದು ಎಂದು ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಕೆಲವು ಜನರಿಗೆ ಅನುಕೂಲವಾಗಿರತಕ್ಕ ಹಾಗೂ ಇಲ್ಲಿಟ್ಟಿರತಕ್ಕ ಬಜೆಟ್ಟನ್ನು ಸ್ವಾಗತಿಸುತ್ತಾ ನಾನು ಇಲ್ಲಿ ಕೆಲವು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ನಮಗೆ ಇಲ್ಲಿ ಮೊದಲನೆಯದಾಗಿ ಕಣ್ಣಿಗೆ ಕಾಣುತ್ತಿರುವುದು ಲ್ಯಾಂಗ್ವೇಜ್ ಇಷ್ಯೂ. ಇದರ ವಿಚಾರವಾಗಿ ಈಗ ತಾನೆ ಮಾತನಾಡಿದ ಶ್ರೀಮಾನ್ ಘೋರ್ಪಡೆಯವರು ಬಹಳ ಚೆನ್ನಾಗಿ ಹೇಳಿದರು. ಇದರಲ್ಲಿ ನಿಜವಾಗಿಯೂ ಯೋಚನೆ ಮಾಡಿದರೆ ನಮಗೆಲ್ಲ ಬಹಳ ಅನುಕೂಲವಾಗಿದ್ದ ಹಾಗೂ ಅತಿ ಸುಂದರವಾಗಿದ್ದ ಸರಳವಾಗಿ ಬರತಕ್ಕ ಹಿಂದಿ ಭಾಷೆಯ ಬಗ್ಗೆ ಅನ್ಯಾಯವಾಗಿ ಅವರಾಗಿ ಅವರೇ ನಮ್ಮ ಸರಕಾರವೇ ಅಗಲಿ ಕೇಂದ್ರ ಸರಕಾರವೇ ಆಗಲಿ ಇಂತಹ ತೊಂದರೆಗಳಿಗೆ ಕಾರಣರಾದರೋ ನಮಗೆ ಅರ್ಥವಾಗುತ್ತಿಲ್ಲ. ಮತ್ತು ಇದನ್ನು ನೋಡಿದರೆ ನಮಗೆ ತುಂಬಾ ವ್ಯಸನವಾಗುತ್ತದೆ. ನಮ್ಮ ಸರಕಾರದವರೇನೋ ತ್ರಿಭಾಷಾ ಸೂತ್ರವೆಂದು ಒಪ್ಪಿಕೊಂಡಿದ್ದೇವೆ, ಇದರಿಂದ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಯಾವ ಭಾರವನ್ನು ಹೊರಿಸದ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆಂದು ಈಗಾಗಲೇ ಹೇಳಿದ್ದಾರೆ. ಹೀಗಿರುವಾಗ ಹಿಂದಿ ಭಾಷೆಯನ್ನು ದಕ್ಷಿಣದವರ ಮೇಲೆ ಹೇರಿಸಿ ಭಾರತದಲ್ಲೆಲ್ಲಾ ಒಂದೇ ಭಾಷೆ ಇರಬೇಕು ಎಂದು ನಮ್ಮ ಮಕ್ಕಳಿಗೆ ಹೆಚ್ಚು ಹೊರೆ ಬರುವಂತೆ ಹೊರಿಸುವುದು ನ್ಯಾಯವೇ, ಧರ್ಮವೇ ಎಂದು ನಾನು ಇಲ್ಲಿ ಕೇಳುತ್ತೇನೆ. ಇದನ್ನು ಎಲ್ಲರೂ ಯೋಚನೆ ಮಾಡಬೇಕಾದ ವಿಚಾರ. ಇಲ್ಲಿ ನಮ್ಮ ಮಾತೃಭಾಷೆ ಹಾಗೂ ಇದರ ಜೊತೆಯಲ್ಲಿ ಇಂಗ್ಲಿಷ್ ಭಾಷೆ ಇವೆರಡು ಭಾಷೆಗಳು ಇದ್ದರೆ ಸಾಕು ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ ಇಲ್ಲಿ ತ್ರಿಭಾಷಾ ಸೂತ್ರವನ್ನು ಜಾರಿಗೆ ತರಬೇಕು ಎಂದು ಹೇಳುತ್ತಾರೆ. ಆದರೆ ಇದನ್ನು ಇಂತಿಷ್ಟೇ ಕಾಲದಲ್ಲಿ ಮಾಡಬಹುದು ಎನ್ನುವುದಕ್ಕೆ ಎಲ್ಲರ ಅಭಿಪ್ರಾಯಗಳನ್ನು ತಿಳಿದುಕೊಂಡು ಸರ್ಕಾರ ಮಾಡುವುದು ಸೂಕ್ತ ಎಂದು ನನ್ನ ಅಭಿಪ್ರಾಯವನ್ನು ಇಲ್ಲಿ ತಿಳಿಸಲು ಇಷ್ಟಪಡುತ್ತೇನೆ. ಇಂಗ್ಲೀಷು ಇರಬೇಕೋ ತೆಗೆದು ಹಾಕಬೇಕೋ ಎಂದರೆ ಇಂಗ್ಲೀಷ್ ಇರಲೇ ಬೇಕು ಮತ್ತು ಎಲ್ಲ ಕೆಲಸಕಾರ್ಯಗಳಲ್ಲೂ ಇಂಗ್ಲೀಷೇ ಇರಬೇಕು ಮತ್ತು ಹೈಸ್ಕೂಲು ಶಿಕ್ಷಣದಿಂದ ಇಂಗ್ಲೀಷ್ ಭಾಷೆಯನ್ನು ಕಲಿಸುವುದಕ್ಕೆ ಬದಲಾಗಿ ಇಂಗ್ಲೀಷು ಭಾಷೆಯನ್ನು ಪ್ರೈಮರಿ ವಿದ್ಯಾಭ್ಯಾಸದಿಂದಲೇ ಕಲಿಸುವಂತೆ ಮಾಡಿದರೆ ಹಳ್ಳಿಗಾಡಿನಲ್ಲಿರುವ ಎಲ್ಲ ಮಕ್ಕಳೂ ಇಂಗ್ಲೀಷನ್ನು ಕಲಿತುಕೊಳ್ಳಲು ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಹೈಸ್ಕೂಲಿಗೆ ಬರುವ ಮಕ್ಕಳಿಗೆ ಎ.ಬಿ.ಸಿ.ಡಿ. ಹೇಳುವುದಕ್ಕೆ ಬರುವುದಿಲ್ಲ. ನಮ್ಮ ಊರಿನಲ್ಲಿರುವ ಹೈಸ್ಕೂಲು ಹೆಡ್ ಮಾಸ್ಟರವರಿಗೂ ನನಗೂ ಒಂದು ಸಾರಿ ಜಗಳವಾಯಿತು. ಅವರೊಡನೆ ನಾನು ಒಂದು ಸಾರಿ ನಿಮ್ಮ ಸ್ಕೂಲಿನಲ್ಲಿ ಬಹಳ ಪೂರ್ ರಿಸಲ್ಟ್ ಬರುತ್ತಿದೆ, ಇದಕ್ಕೆ ಕಾರಣವೇನು ಎಂದು ಕೇಳಿದೆ. ಅಗ ಅವರು ಏನೂ ಹೇಳಲಿಲ್ಲ. ಆಮೇಲೆ ಹೈಸ್ಕೂಲಿಗೆ ಅಡ್ಮಿಷನ್‌ಗಳನ್ನು ಮಾಡುವಾಗ ನನ್ನನ್ನು ಅವರಸ್ಕೂಲಿಗೆ ಕರೆದುಕೊಂಡು ಹೋಗಿ ಒಬ್ಬರು ಫೋರ್ತ್‌ಫಾರಂ ಸ್ಟೂಡೆಂಟರನ್ನು ಕರೆದು ಎ. ಬಿ. ಸಿ. ಡಿ. ಯಿಂದ ಎಲ್ಲ ಅಕ್ಷರಗಳನ್ನೂ ಹೇಳಲಿಕ್ಕೆ ಹೇಳಿದರೆ ಅವರು ಎ. ಬಿ. ಸಿ. ಡಿ. ಟಿ. ಜಡ್. ಎಂದು ಒರೀ ತಪ್ಪು ತಪ್ಪಾಗಿ ಹೇಳಿದರು. ಅದುರಿಂದ ಪಟ್ಟಣದಲ್ಲಿ ಚಿಕ್ಕತನದಿಂದ ಕಾನ್‌ವೆಂಟಿನಲ್ಲಿ ಓದಿ ವಿದ್ಯಾಭ್ಯಾಸ ಪಡೆದ ವಿದ್ಯಾರ್ಥಿಗಳ ಜೊತೆಗೆ ಸ್ಪರ್ಧೆ ಮಾಡುವುದು ಸಾಧ್ಯವಾಗುವುದಿಲ್ಲ. ಆದಕಾರಣ ಪ್ರಾಥಮಿಕ ಶಿಕ್ಷಣವನ್ನು ಸರಿಯಾದ ರೀತಿಯಲ್ಲಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನು ಹಣಕಾಸಿನ ಮಂತ್ರಿಗಳ ಭಾಷಣದ 7ನೇ ಪುಟದಲ್ಲಿ ಫೈನಾನ್ಸ್ ಮಿನಿಸ್ಟರ್ ಅವರು ಮುಖ್ಯಮಂತ್ರಿಗಳವರು ಬೊಂಬಾಯಿ ಕಲಕತ್ತಾ ಮುಂತಾದ ಕೆಲವಾರು ಮುಖ್ಯ ಮುಖ್ಯ ಉದ್ದಿಮೆ ಕೇಂದ್ರಗಳನ್ನು ಸಂದರ್ಶಿಸಿ ಅಲ್ಲಿಯ ಕೈಗಾರಿಕೋದ್ಯೋಮಿಗಳಿಗೆ ಅಹ್ವಾನ ಕೊಟ್ಟು ಬಂದಿದ್ದೇವೆ. ಹೊರಗಿನಿಂದ 87 ಉದ್ಯಮಿಗಳು ಈ ವಿಚಾರದಲ್ಲಿ ಮಾಹಿತಿಗಳನ್ನು ಕೋರಿ ಪತ್ರ ಬರೆದಿದ್ದಾರೆ ಎಂದು ಹೇಳಿದ್ದಾರೆ. ಆದರೆ ಇವರಲ್ಲಿ ಎಷ್ಟು ಜನ ನಿಜವಾಗಿಯೂ ನಮ್ಮ ರಾಜ್ಯದಲ್ಲಿ ಕೈಗಾರಿಕೆ ಸ್ಥಾಪನೆ ಮಾಡಲು ಬರುತ್ತಾರೋ ಎಂದು ನನಗೆ ಯೋಚನೆ ಬರುತ್ತದೆ. ನಾನು ಹೋದ ಕಡೆಯಲ್ಲಿ ಈ ಬಗ್ಗೆ ವಿಚಾರಿಸಿದರೆ ಅವರು ಹೇಳುವುದು ಏನೆಂದರೆ ಈಗ ಕೊಟ್ಟಿರತಕ್ಕ ಭರವಸೆಗಳು ಸಾಲದು ಎನ್ನುವ ಭಾವನೆ ಅವರಿಗೆ ಬಂದಿದೆ. ಆ ಸ್ನೇಹಿತರು ಕೇಳುತ್ತಾರೆ, ನಾವೇನೋ ಲಕ್ಷಾಂತರ ರೂಪಾಯಿ ಇನ್‌ವೆಸ್ಟ್ ಮಾಡಿ ಕೈಗಾರಿಕೆ ಸ್ಥಾಪನೆ ಮಾಡಿದ ಮೇಲೆ ವೆಸ್ಟ್ ಬಂಗಾಳದಲ್ಲಿ ಆದ ಹಾಗೆ ನಿಮ್ಮ ಕೈಗಾರಿಕೆ ಕಿತ್ತುಕೊಂಡು ಹೋಗಿ ಎಂದು ಹೇಳಿದರೆ ಏನು ಮಾಡುವುದು ಎಂದು ? ಈ ರೀತಿ ಭಾವನೆ ಉಂಟಾಗಿರುವುದರಿಂದ ಸರಕಾರದವರು ದಯಮಾಡಿ ಇಂಡಸ್ಟ್ರಿಯಲ್ ಪಾಲಸಿ ಸರಿಯಾಗಿ ಮಾಡಿ ಕೈಗಾರಿಕೋದ್ಯೋಮಿಗಳಿಗೆ ಸಾಕಷ್ಟು ಭರವಸೆಗಳನ್ನು ಕೊಟ್ಟರೆ ಕೆಲವು ಕೈಗಾರಿಕೆಗಳನ್ನು ನಮ್ಮ ರಾಜ್ಯದಲ್ಲಿ ಅವರು ಪ್ರಾರಂಭ ಮಾಡಬಹುದು. ಇಲ್ಲದಿದ್ದರೆ ಅವರು ಖಂಡಿತವಾಗಿ ಇಲ್ಲಿ ಇದಕ್ಕಾಗಿ ಬರುವುದಿಲ್ಲ ಎಂದು ನನ್ನ ಅನುಭವಕ್ಕೆ ಬಂದಿದೆ.

ಇನ್ನು 13 ಮತ್ತು 14ನೇ ಪುಟದಲ್ಲಿ ವ್ಯವಸಾಯಾಭಿವೃದ್ಧಿಯಲ್ಲಿ ಸಂಸ್ಥೆಗಳು ವಹಿಸಿದ ಪಾತ್ರವು ಗಮನಾರ್ಹವಾಗಿದೆ. ಟ್ರ್ಯಾಕ್ಟರುಗಳು, ಪಂಪ್‌ಸೆಟ್ಟುಗಳು ಇತ್ಯಾದಿಯನ್ನು ಒದಗಿಸುವ ಸಲುವಾಗಿ ವ್ಯವಸಾಯೋದ್ಯಮ ನಿಗಮ ಸ್ಥಾಪಿತವಾಗಿದೆ. ಈ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಅಸ್ತಿತ್ವದಲ್ಲಿ ಬಂದಿದೆ. ಇದುವರೆಗೆ ರೈತರಿಗೆ ಸಹಾಯ ಧನ ಟ್ರ್ಯಾಕ್ಟರ್ಸ್, ಪಂಪ್‌ಸೆಟ್ಸ್ ಒದಗಿಸಲು ಸರಕಾರ ಸೊಸೈಟಿಗಳ ಮೂಲಕ ಕೊಡುವುದಕ್ಕೆ ಪ್ರಾಯಾರಿಟಿ ಇತ್ತು. ಆದರೆ ಇದು ಈಗ ಈ ಕಾರ್ಪೋರೇಷನ್ನಿಗೆ ಬಂದಿದೆ. ಈ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ತೆಗೆದು ಕೊಳ್ಳುವ ಬಡ್ಡಿ ದರ ಏನು ? ಇದರ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ರೈತರ ತಲೆಯ ಮೇಲೆ ಬೀಳು ತ್ತದೆಯೋ ? ಯಾವ ತಾರೀಖಿನಿಂದ ಬಡ್ಡಿ ಚಾರ್ಜ್ ಮಾಡುತ್ತಾರೆ ಈ ವಿವರ ತಿಳಿದುಬಂದಿಲ್ಲ. ಇವರು ರೈತರಿಗೆ ಸಾಲ ಕೊಟ್ಟು ಇದಕ್ಕಾಗಿ ದೊಡ್ಡ ಎಸ್ಟಾಬ್ಲಿಷ್‌ಮೆಂಟ್ ಇಟ್ಟುಕೊಂಡು ರೈತರ ಮೇಲೆ ಹೆಚ್ಚಿನ ಹೊರೆ ದಂಡಕ್ಕೆ ಹೊರಿಸುವುದಾದರೆ ಅದು ಸರಿಯಲ್ಲ. ಇದುವರೆಗೆ ನಡೆದುಕೊಂಡು ಬಂದ ಪದ್ಧತಿ ಸರಿಯಾಗಿತ್ತು ಇದನ್ನೇ ಅನುಸರಿಸಬೇಕು ಎಂದು ಸರಕಾರಕ್ಕೆ ಸೂಚನೆ ಮಾಡಲು ಇಷ್ಟಪಡುತ್ತೇನೆ.

ಮಾತು ಎತ್ತಿದರೆ ಫೈನಾನ್ಸ್ ಮಿನಿಸ್ಟರ್ ಅವರು ನ್ಯಾಷನಲ್ ಇನ್‌ಕಂ ಜಾಸ್ತಿಯಾಗಿದೆ, ರೂರಲ್ ಇನ್‌ಕಮ್ ಜಾಸ್ತಿಯಾಗಿದೆ ಆದರೆ ಅವರು ಟ್ಯಾಕ್ಸ್ ಕೊಡುತ್ತಾ ಇಲ್ಲ, ಟ್ಯಾಕ್ಸ್ ಜಾಸ್ತಿ ಮಾಡಬೇಕು ಎಂದು ಹೇಳುತ್ತಾರೆ. ನಿಜವಾಗಿಯೂ ಇದರಿಂದ ನಮಗೆ ಸಮಾಧಾನವಾಗಲಿಲ್ಲ. ಇನ್‌ಕಂ ಟ್ಯಾಕ್ಸ್ ಅರ್ಬನ್ ಏರಿಯಾದಲ್ಲಿ ಕೊಡುತ್ತಾರೆ ಎಂದು ಹೇಳಿದರು ಆದರೆ ಡೈರೆಕ್ಟ್ ಹಾಗು ಇನ್‌ಡೈರೆಕ್ಟ್ ಟ್ಯಾಕ್ಸ್ ಹಳ್ಳಿಯವರೇ ಕೊಡುತ್ತಾರೆ. ಬರುವ ಯಾವುದೇ ಹೊಸ ಟ್ಯಾಕ್ಸ್ ಭಾರ ಹಳ್ಳಿಯವರ ಮೇಲೆ ಬೀಳುತ್ತದೆ. ಅವರ ಮೇಲೆ ಬಹಳ ಅನ್ಯಾಯವಾಗಿದೆ. ಆದುದರಿಂದ ಮುಳುಗುವವನ ಮೇಲೆ ಕಲ್ಲು ಹಾಕುವುದು ಒಳ್ಳೆಯದಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ.

ಇನ್ನು ಎಜ್ಯುಕೇಷನ್ ಡಿಪಾರ್ಟ್‌ಮೆಂಟಿನಲ್ಲಿ 38 ಕೋಟಿ ರೂಪಾಯಿ ಖರ್ಚಾಗುತ್ತಾ ಇದೆ. ನಿಜವಾಗಿಯೂ ಇದು ಶ್ಲಾಘನೀಯವಾದ ವಿಚಾರ. ರಾಜ್ಯದಲ್ಲಿ ಇಷ್ಟು ಎಂಜಿನಿಯರಿಂಗ್ ಕಾಲೇಜು ಗಳಿವೆ, ಡಿಪ್ಲೊಮಾ ಹೋಲ್ಡರ್ಸ್ ಇಷ್ಟು ಜನ ಇದ್ದಾರೆ ಎಂದು ಹೇಳಿದ್ದಾರೆ. ಇದು ಸಂತೋಷ. ಆದರೆ ಕಾಲೇಜುಗಳಿಂದ ವಿದ್ಯಾಭ್ಯಾಸ ಮುಗಿಸಿ ಹೊರಗೆ ಬರುತ್ತಾ ಇರುವವರಿಗೆ ಕೆಲಸ ಒದಗಿಸುವ ಬಗ್ಗೆ ಏನು ಮಾಡಿದ್ದೀರಿ ? ಇಂದು ಒಂಬತ್ತು ಸಾವಿರ ಜನ ಡಿಪ್ಲೋಮಾ ಹೋಲ್ಡರ್ಸ್‌ಗಳಿಗೆ ಕೆಲಸ ವಿಲ್ಲ ಎಂದು ಹೇಳಿದರು. ಮೂರು ಸಾವಿರ ಬಿ. ಇ. ಆದವರಿಗೆ ಕೆಲಸವಿಲ್ಲ. ಇದೊಂದು ದೊಡ್ಡ ಸಮಸ್ಯೆಯಾಗಿದೆ. ಕೈಯಲ್ಲಿ ಕೆಲಸವಿಲ್ಲದೆ ಐಡಲ್ ಬ್ರೇನ್ ಆಗಿಬಿಟ್ಟರೆ ಯಾವ ಡೆವಿಲ್ ವರ್ಕ್‌ಶಾಪ್ ಆಗುತ್ತದೋ ? ಇವರಿಗೆ ಕೆಲಸ ಕೊಟ್ಟು ಇವರನ್ನು ಉಪಯೋಗಿಸಿಕೊಳ್ಳಲಿಕ್ಕೆ ಯಾವುದೇ ರೀತಿಯಲ್ಲಿ ಉಪಾಯ ಹುಡುಕಬೇಕು. ಇದನ್ನು ತಜ್ಞರು ದೊಡ್ಡವರಾದವರು ಸಾಲ್ವ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇಂಥ ಒಂದು ಸೂಚನೆಯನ್ನು ಅಪೋಜಿಷನ್ ಮೆಂಬರ್ಸ್ ಹೇಳಿದರು ಎಂದು ಅದನ್ನು ಮಾಡಬಾರದು, ನಮ್ಮ ಪಾರ್ಟಿಯವರು ಹೇಳಿದರು ಅದನ್ನು ಮಾಡಬೇಕು ಎಂದು ಇರಕೂಡದು. ದೊಡ್ಡವರು ಯಾರೇ ಇರಲಿ ಏನು ಹೇಳಿದರೂ ಅದನ್ನು ಸಾಲ್ವ್ ಮಾಡುವುದಕ್ಕೆ ಪ್ರಯತ್ನ ಮಾಡ ಬೇಕು ಎಂದು ಸೂಚಿಸುತ್ತೇನೆ.

ಇನ್ನು ಸ್ಕಾಲರ್‌ಷಿಪ್ ವಿಷಯ. ಮೂರು ವರ್ಷಗಳಾದರೂ ಮಹಾರಾಣಿ ಕಾಲೇಜಿ ನಲ್ಲಿ ಸ್ಕಾಲರಷಿಪ್ಸ್ ಡ್ರಾ ಮಾಡಿಲ್ಲ. ಯಾಕೆ ಡ್ರಾ ಮಾಡಿಲ್ಲ ಎಂದು ಕೇಳಿದರೆ ಸರಿಯಾದ ಸ್ಟಾಫ್ ಇಲ್ಲ, ಟೈಪಿಸ್ಟ್ ಇಲ್ಲ ಎಂದು ಹೇಳುತ್ತಾರೆ. ಈ ಕೆಲಸಕ್ಕೆ ಒಬ್ಬ ಕ್ಲಾರ್ಕ್ ಇಲ್ಲವೆ ಮೂರು ವರ್ಷ ಸ್ಕಾಲರ್‌ಷಿಪ್ ಡ್ರಾ ಮಾಡದೇ ಇದ್ದರೆ ಇದು ಯಾವ ನ್ಯಾಯ ? ಸ್ಕಾಲರ್ ಷಿಪ್ ಡ್ರಾ ಮಾಡಿ ಕೊಡುವುದು ಬೇಡವೇ ? ಸಮಯಕ್ಕೆ ಇಲ್ಲದ್ದು ಆಮೇಲೆ ಕೊಟ್ಟರೆ ಏನು ಪ್ರಯೋಜನ ? ಆದುದರಿಂದ ಇದರಲ್ಲಿ ಇರತಕ್ಕಂಥ ನ್ಯೂನತೆಗಳನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ.

ಹಳ್ಳಿಗಾಡಿನಲ್ಲಿ ಫ್ರೀ ಪ್ರೈಮರಿ ಸ್ಕೂಲ್ಸ್ ಪ್ರಾರಂಭ ಮಾಡುವ ಅಗತ್ಯ ಇದೆ. ಹಳ್ಳಿಗಳಲ್ಲಿ ಆರು ಆರೂವರೆ ವರ್ಷದ ಮಕ್ಕಳು ಬೀದಿಯಲ್ಲಿ ಗೆಜ್ಜುಗ ಗೋಲಿ ಆಟವಾಡುತ್ತಾ ಇರುತ್ತವೆ. ಪ್ರೈಮರಿ ಸ್ಕೂಲುಗಳಿಗೆ ಅವರನ್ನು ಒಮ್ಮೆಲೆ ಸೇರಿಸಿದರೆ ಏನೂ ಪ್ರಯೋಜನವಿಲ್ಲ. ಸರಕಾರ ಇದಕ್ಕೆ ನಿಗಾ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು 34ನೇ ಪುಟದಲ್ಲಿ ಅಡ್ಮಿನಿಸ್ಟ್ರೇಷನ್ ಎಕ್ಸ್‌ಪೆಂಡಿಚರ್ ಆದಷ್ಟು ಮಟ್ಟಿಗೆ ಕಡಿಮೆ ಮಾಡು ವುದಕ್ಕೆ ಪ್ರಯತ್ನ ಮಾಡಿ ನೋಡುತ್ತೇವೆ ಎಂದು ಹೇಳಿದೆ. ಆದರೆ 26ನೇ ಪುಟದಲ್ಲಿ ಅದಕ್ಕೆ ಕಾಂಟ್ರಡಿಕ್ಟರಿ ಸ್ಟೇಟ್‌ಮೆಂಟ್ ಇದೆ. ಸ್ಮಾಲ್ ಸೇವಿಂಗ್ಸ್ ಸ್ಕೀಮಿಗೆ ಒಬ್ಬ ಜಾಯಿಂಟ್

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಡೈರೆಕ್ಟರ್ ನೇಮಿಸುತ್ತೇವೆ ಎಂದು ಹೇಳಿದೆ. ಹಳ್ಳಿಗಳಲ್ಲಿ ಜೂರ್ ಮಾಡಿ ಅವರು ಸ್ಮಾಲ್ ಸೇವಿಂಗ್ಸ್ ಏನು ಮಾಡುತ್ತಾರೆ ? ಹಳ್ಳಿಗಳಲ್ಲಿ ಮಣ್ಣು ಕಲ್ಲು ಬಿಟ್ಟರೆ ಏನೂ ಇಲ್ಲ. ಇಂಥ ಅಧಿಕಾರಿಯ ನೇಮಕ ಮಾಡಿ ಅನ್ಯಾಯವಾಗಿ ಅವರಿಗೆ ಸಂಬಳ ಕೊಡುವ ಹೊರೆ ನಮ್ಮ ಮೇಲೆ ಹೊರಿಸಬೇಡಿ ಎಂದು ಹೇಳುತ್ತೇನೆ.

ಇನ್ನು ಲ್ಯಾಂಡ್ ರೆವಿನ್ಯೂ ವಿಚಾರ ತಮಾಷೆಯಾಗಿದೆ. ಲ್ಯಾಂಡ್ ರೆವಿನ್ಯೂ ಕೊಡುವುದಿಲ್ಲ ಎಂದು ಹೇಳುವ ರೈತನನ್ನು ನಾನು ಇದುವರೆಗೆ ನೋಡಿಲ್ಲ. ಅಂಥ ರೈತರು ಯಾರೂ ಇಲ್ಲ. ಲ್ಯಾಂಡ್ ರೆವಿನ್ಯೂ ಕೊಡದೇ ಹೋದರೆ ತನ್ನ ಹಕ್ಕು ಹೋಗುತ್ತದೆ ಎಂದು ಹೇಳುವ ರೈತರನ್ನು ನೋಡಿದ್ದೇನೆ. ಕಂದಾಯ ಕೊಡಬೇಡಿ ಎಂದು ಹೇಳುವ ರೈತನನ್ನು ನಾನು ನೋಡಲಿಲ್ಲ. ರೈತನ ವಿಚಾರ ಗೊತ್ತಿಲ್ಲದೆ ಮಾತನಾಡುವುದು ಸರಿಯಲ್ಲ. ಕಂದಾಯ ಅವನ ಜಮೀನಿನ ಹಕ್ಕನ್ನು ಸೂಚಿಸುವ ಪ್ರಮಾಣ ಪತ್ರ. ಏನೂ ಗೊತ್ತಾಗದ ರೈತನ ಹೆಸರಿನಲ್ಲಿ ಏನೇನೋ ರಾಜಕೀಯ ಅಭಿಪ್ರಾಯಗಳು ವ್ಯಕ್ತಪಡುತ್ತಿವೆ. ದಯವಿಟ್ಟು ಏನೇನೋ ಹೇಳಿ, ಬರೆಯಲು ಓದಲು ಬಾರದವರಿಗೆ ಅನ್ಯಾಯ ಮಾಡಬೇಡಿ. ರೈತನ ವಿಚಾರ ಗೊತ್ತಿಲ್ಲದೆ ಮಾತನಾಡುವುದಕ್ಕೆ ಹೋಗಬೇಡಿ. ರೈತನ ಜೀವನ ತಿಳಿದುಕೊಂಡು ಬರುವುದಕ್ಕೆ ಇವರು ಕ್ಯಾಡಾಲಿಕ್ ಕಾರಿನಲ್ಲಿ ಓಡಾಡುತ್ತಾರೆ. ನಿಜವಾಗಿಯೂ ಕಷ್ಟಪಟ್ಟು ರೈತನ ಬಾಳು ತಿಳಿದುಕೊಂಡು ಮಾತನಾಡಿದರೆ ಹೋ ಹೋ ಎಂದು ನಗುವುದು. ಇದರಿಂದ ರೈತ ಹಾಳಾಗುತ್ತಿದ್ದಾನೆ. ಇಂಥ unhealthy habits ಎಲ್ಲಿಸಬೇಕು. ಹಳ್ಳಿಯ ರೈತರನ್ನು ಇವರು ಎಕ್ಸ್‌ಪ್ಲಾಯಿಟ್ ಮಾಡುತ್ತಾರೆ. ಹಣ್ಣು ಹೆಂಗಸು ಹಾಲು ಮೊಸರು ಬೆಣ್ಣೆ ತೆಗೆದುಕೊಂಡು ಬಂದರೆ ಏತಕ್ಕೆ ಐದು ಸೇರು ಬೆಣ್ಣೆ ಮಾರುತ್ತೀ, ಆರು ಸೇರು ಬೆಣ್ಣೆ ಕೊಡುವುದಿಲ್ಲವೇ ಎಂದು ಕೇಳುತ್ತಾರೆ. ಅಂಥ ರೈತ ಹೆಣ್ಣು ಮಗಳಿಗೆ ಔಷಧ ತರುವ ಅಗತ್ಯ ಏನಾದರೂ ಇದ್ದರೆ, ಅರ್ಜಿ ಬರೆಸಬೇಕಾಗಿದ್ದರೆ ಎಷ್ಟಕ್ಕೆ ಕೇಳಿದರೂ ಅಷ್ಟಕ್ಕೆ ಕೊಟ್ಟು ಬಿಟ್ಟು ಹೋಗುತ್ತಾರೆ. ಅವರನ್ನು ದೂರ ಇಡುತ್ತಾರೆ. ಆದರೆ ಅವರು ತಂದು ಕೊಟ್ಟ ಕುಂಬಳ ಕಾಯಿ ಅಲ್ಲೇ ಇಟ್ಟು ಬಿಡು ಹತ್ತಿರ ಬರಬೇಡ ಎಂದು ಹೇಳಿ ಅದನ್ನು ಅಡಿಗೆಯಲ್ಲಿ ಉಪಯೋಗಿಸಿ ಊಟ ಮಾಡುತ್ತಾರೆ. ಇವರು ಮುಂದೆ ಬರುವುದು ಬೇಡ ಗಾವುದ ದೂರ ಗಂಜಲ ವಾಸನೆಯಲ್ಲಿಯೇ ಅವರು ಇದ್ದರೆ ಇವರಿಗೆ ಸಂತೋಷ. ಯಾಕೆಂದರೆ ಇವರ ಸಮಕ್ಕೆ ಎಲ್ಲಿ ಬಂದು ಬಿಡುತ್ತಾರೋ ಅನ್ನೋ ಸಂಕಟ ಅವರಿಗೆ ಬಂದು ಬಿಟ್ಟಿದೆ. ಈ ಮನೋಭಾವನೆ ಹೋಗಿ ಅವರೂ ಒಂದು ಮಟ್ಟಕ್ಕೆ ಬರಲಿ, ಅವರೂ ಪ್ರಜೆಗಳಾಗಿ ಬಾಳಲಿ ಎನ್ನುವುದು ಬಾರದೆ ಹೋದರೆ ಅಲ್ಲಿಯವರೆಗೂ ಈ ದೇಶ ಸುಭಿಕ್ಷವಾಗುವುದಿಲ್ಲ. ರೈತರು ಕಂದಾಯ ಕೊಡುವುದಿಲ್ಲ, ನೀವು ಕಂದಾಯ ವಜಾ ಮಾಡಿ ಎಂದು ಸರ್ಕಾರದವರನ್ನು ಕೇಳುವ ಅನ್ಯಾಯಕ್ಕೆ ಅಂಥ ಹವ್ಯಾಸಕ್ಕೆ ಹೋಗದೆ ರೈತ ಕಂದಾಯವನ್ನು ಕೊಡಲಿ. ಅವನ ವಿಚಾರಕ್ಕೆ ಹೋಗಬೇಡಿ. ಕಂದಾಯಕ್ಕೆ ಬದಲಾಗಿ ಅಗ್ರಿಕಲ್ಚರಲ್ ಟ್ಯಾಕ್ಸ್, ಇನ್‌ಕಂಟ್ಯಾಕ್ಸ್, ಇವುಗಳ ವ್ಯಾಪ್ತಿಗೆ ರೈತರನ್ನು ತಳ್ಳಿ, ಬರೆಯುವುದಕ್ಕೆ ಬಾರದೆ, ಓದುವುದಕ್ಕೆ ಬಾರದೆ ಇರುವವರಿಗೆ ಅನ್ಯಾಯ ಮಾಡುವುದಕ್ಕೆ ಹೋಗಬೇಡಿ. ಕಂದಾಯವನ್ನು ಈಗ ಇರುವ ರೀತಿಯಲ್ಲಿ ಹಾಕಿಕೊಂಡು ಹೋಗುವುದಕ್ಕೆ ನೀವು ಯಾರೂ ವಿರೋಧ ಮಾಡಬಾರದೆಂದು ತಮ್ಮೆಲ್ಲರನ್ನೂ ನಾನು ಕೇಳಿಕೊಳ್ಳುತ್ತೇನೆ.

ಆರೋಗ್ಯ, ಲೋಕೋಪಯೋಗಿ, ವಿದ್ಯಾಭ್ಯಾಸ ಇವುಗಳ ಬಗ್ಗೆ ಮಾತನಾಡಲು ಪ್ರಯತ್ನ ಮಾಡುವುದಿಲ್ಲ. ಅಧ್ಯಕ್ಷರು ಗಂಟೆ ಹೊಡೆಯುತ್ತಿದ್ದಾರೆ.

ರೈಲುಗಳ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ರೈಲ್ವೆಯವರು ನಮ್ಮ ರಾಜ್ಯದಲ್ಲಿರುವ ನ್ಯಾರೋ ಗೇಜ್ ರೈಲು ಮಾರ್ಗಗಳನ್ನೆಲ್ಲ ಮುಚ್ಚಿಬಿಡಬೇಕು ಎಂದು ಹೇಳಿರುವುದನ್ನು ಮೊನ್ನೆ ಪತ್ರಿಕೆಗಳಲ್ಲಿ ನೋಡಿದೆ, ಪ್ರತಿಯೊಂದು ಬಾಬಿನಲ್ಲಿಯೂ ದಕ್ಷಿಣದವರಿಗೆ ಅನ್ಯಾಯವಾಗುತ್ತಿದೆ ಎನ್ನುವ ಕೂಗು ಇರುವಾಗ ನ್ಯಾರೋ ಗೇಜ್ ಇರುವುದನ್ನು ಮೀಟರ್‌ಗೇಜ್ ಮಾಡಿ ಉತ್ತಮ ಸ್ಥಿತಿಗೆ ತರುವುದನ್ನು ಬಿಟ್ಟು ಇರುವುದನ್ನು ಮುಚ್ಚಿಬಿಡುತ್ತೇವೆ ಎನ್ನುವುದರಲ್ಲಿ ಸ್ವಲ್ಪವೂ ಅರ್ಥವಿಲ್ಲ. ಕೋಲಾರದ ಕಡೆಯಿಂದ ಬೆಂಗಳೂರಿಗೆ ಒಂದು ನ್ಯಾರೋಗೇಜ್ ರೈಲು ಮಾರ್ಗವಿದೆ. ಆ ಮಾರ್ಗದಿಂದ ಬೇಕಾದಷ್ಟು ಕ್ಯಾಷ್‌ಕ್ರಾಪ್ಸ್ ಎಂದರೆ ಆಲೂಗಡ್ಡೆ ಈರುಳ್ಳಿ, ತರಕಾರಿ, ಹೂವು ಇವೆಲ್ಲ ಬರುತ್ತದೆ. ಜನಗಳು ಅದರಲ್ಲಿ ಓಡಾಡುವುದು ಕಡಮೆ ಇದ್ದರೂ ಈ ಪದಾರ್ಥಗಳೆಲ್ಲ ಆ ರೈಲಿನಲ್ಲಿ ಬರುತ್ತವೆ. ಇದರಲ್ಲಿ ಸ್ವಲ್ಪ ನಷ್ಟವಾಗಬಹುದು. ಇದನ್ನು ಸ್ವಲ್ಪ ಅಭಿವೃದ್ಧಿ ಮಾಡಿ ಮೀಟರ್ ಗೇಜ್‌ಗೆ ಬದಲಾಯಿಸಿ ಅನುಕೂಲ ಮಾಡಿಕೊಡುವುದಕ್ಕೆ ಬದಲು ಇರುವ ಮಾರ್ಗವನ್ನೇ

ಕಿತ್ತು ಹಾಕುತ್ತೇವೆಂದು ಹೇಳುವುದು ಸರಿಯಲ್ಲ. ಮದ್ರಾಸ್ ಮಂತ್ರಿಗಳು ಇಂಥ ಮಾರ್ಗಗಳನ್ನು ಉಳಿಸಿಕೊಡಬೇಕೆಂದು ಹೇಗೆ ಹೇಳಿದರೋ ಅವೇ ರೀತಿಯಲ್ಲಿ ನಮ್ಮ ಮಂತ್ರಿಗಳೂ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ನಮ್ಮ ಸರ್ಕಾರದವರು ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ನಾನ್ ಗೆಜೆಟೆಡ್ ನೌಕರರು ಒಂದು ದೊಡ್ಡ ವರ್ಗ. ಅವರು ನಮ್ಮ ಸರ್ಕಾರಕ್ಕೆ ಆಧಾರವಾಗಿದ್ದಾರೆ. ಅವರುಗಳಿಗೆಲ್ಲ ಸರಿಯಾದ ತುಟ್ಟಿಭತ್ಯವನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದ್ದಾರೆ. ಇದಕ್ಕೆ ನಿಜವಾಗಿಯೂ ಸರ್ಕಾರದವರು ಅಭಿನಂದನಾರ್ಹರು. ಆದರೆ ಇದನ್ನು ತೆಗೆದುಕೊಂಡಾದ ಮೇಲೆ ನಾನ್ ಗೆಜೆಟೆಡ್ ನೌಕರರು ಮಾತ್ರ ಅವರ ಜವಾಬ್ದಾರಿಯನ್ನು ಮರೆಯಬಾರದು. ಅವರು ದುಡ್ಡನ್ನೇನೋ ತೆಗೆದುಕೊಳ್ಳುತ್ತಾರೆ. ಅದು ಮಂತ್ರದಿಂದ ಬಂದಂಥ ದುಡ್ಡಲ್ಲ. ರೈತರು ಮತ್ತು ಇತರ ಬಡವರು ತೆರಿಗೆಯ ರೂಪದಲ್ಲಿ ಕೊಟ್ಟಿರುವ ಹಣ. ಈ ಹಣ ಅವರ ಕೈಗೆ ಹತ್ತಬೇಕಾದರೆ ಅವರೂ ಕಷ್ಟಪಟ್ಟು ಕೆಲಸ ಮಾಡಬೇಕು. ಯಾವ ಆಫೀಸಿನಲ್ಲಿ ಹೋಗಿ ನೋಡಲಿ ಗುಮಾಸ್ತರಿರುವುದಿಲ್ಲ. ಅವರು ಎಲ್ಲಿ ಹೋಗಿದ್ದಾರೆ ಎಂದು ಕೇಳಿದರೆ ಕಾಫಿಗೆ ಹೋಗಿದ್ದಾರೆಂದು ಹೇಳುತ್ತಾರೆ. ಎಷ್ಟು ಹೊತ್ತಿಗೆ ಹೋದರೂ ಕಾಫಿಗೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಹೀಗೆ ಮಾಡಿದರೆ ಅವರು ತೆಗೆದುಕೊಂಡ ಹಣ ಅವರಿಗಾಗಲೀ ಅವರ ಮಕ್ಕಳಿಗಾಗಲೀ ಕೈಹತ್ತುವುದಿಲ್ಲ. ಇದರ ಜವಾಬ್ದಾರಿಯನ್ನು ಅವರು ಸರಿಯಾಗಿ ತಿಳಿದುಕೊಳ್ಳಬೇಕು.

ಸರ್ಕಾರದವರು ಪೆನ್‌ಷನ್‌ದಾರರಿಗೂ ಬಹಳಮಟ್ಟಿಗೆ ಸಹಾಯ ಮಾಡಿದ್ದಾರೆ. ಅದರಲ್ಲಿ ಒಂದು ಪಂಗಡವನ್ನು ಕೈಬಿಟ್ಟಿದ್ದಾರೆ. ಫ್ಯಾಮಿಲಿ ಪೆನ್‌ಷನ್ ತೆಗೆದುಕೊಳ್ಳುವವರಿಗೆ ಮುಖ್ಯವಾಗಿ ಸಹಾಯ ಮಾಡಬೇಕಾಗಿತ್ತು. ಅವರ ಮನೆಯವರು ಕಷ್ಟಪಟ್ಟು ದೇಶಕ್ಕಾಗಿ ಕೆಲಸ ಮಾಡಿ ಸತ್ತುಹೋಗಿರುತ್ತಾರೆ. ಅಂಥ ಕುಟುಂಬಗಳ ಕಷ್ಟನೋಡಿ ಅವರು ಕೆಲಸ ಮಾಡಿರುವುದನ್ನು ನೋಡಿ ಅವರ ಕುಟುಂಬದವರಿಗೂ ಪೆನ್‌ಕ್ಷನ್ ಕೊಡುವ ಏರ್ಪಾಡು ಮಾಡಿದ್ದೀರಿ. ಅವರಿಗೆ ತುಟ್ಟಿಭತ್ಯದ ರೂಪದಲ್ಲಿ ಸಹಾಯ ಮಾಡುವುದಿಲ್ಲ ಎಂದರೆ ಅಷ್ಟು ಸೂಕ್ತವಾಗಿರುವುದಿಲ್ಲ. ತುಟ್ಟಿಭತ್ಯವನ್ನು ನೀಡುವಾಗ ಅವರನ್ನೂ ಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ನಿನ್ನೆ ಒಂದು ಪ್ರಶ್ನೆಗೆ ತಾಲ್ಲೂಕು ಬೋರ್ಡ್ ಮುನಿಸಿಪಲ್ ಹೈಸ್ಕೂಲ್ ಮತ್ತು ಏಡೆಡ್ ಸ್ಕೂಲುಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯರುಗಳ ಕುಟುಂಬದವರಿಗೆ ಏನಾದರೂ ಮೇಲೆ ಹೇಳಿದಂತಹ ತೊಂದರೆ ಬಂದರೆ ಅವರಿಗೆ ಪೆನ್‌ಷನ್ ಯಾರು ಕೊಡಬೇಕು ಎಂದರೆ ಮ್ಯಾನೇಜ್‌ಮೆಂಟಿನವರು ಕೊಡಬೇಕು ಎಂದು ಹೇಳಿದರು. ಅವರ ಸಂಬಳ ಕೊಡುವವರು ಸರ್ಕಾರದವರು. ಆ ಉಪಾಧ್ಯಾಯರ ಕುಟುಂಬಕ್ಕೆ ಕಷ್ಟಕಾಲ ಬಂದಾಗ ಅವರಿಗೆ ಫ್ಯಾಮಿಲಿ ಪೆನ್‌ಷನ್ ಕೊಡುವುದಿಲ್ಲ ಎಂದು ಹೇಳುವುದು ಅಷ್ಟು ಸರಿಹೋಗುವುದಿಲ್ಲ. ಅವರನ್ನೂ ಸರ್ಕಾರಿ ನೌಕರರಂತೆ ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ ಅವರು ಹೆಣ್ಣು ಮಕ್ಕಳನ್ನು ಬಹಳ ನಿರ್ಲಕ್ಷ್ಯದಿಂದ ನೋಡುತ್ತಾರೆ ಎಂದು ಹೇಳಿದರು. ಈ ರೀತಿ ಮಾಡುವುದು ಸ್ವಲ್ಪವೂ ಸರಿಯಲ್ಲ. ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಅದು ಮಾಡಿಲ್ಲ ಇದು ಮಾಡಿಲ್ಲ ಎಂದು ಎಲ್ಲರೂ ಹೇಳುವಾಗ 51 ಪರ್ಸೆಂಟು ಇರುವ ಹೆಣ್ಣುಮಕ್ಕಳನ್ನು ಈ ರೀತಿ ನೋಡಬಾರದು.

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮನ್ನು ಈಗ ಆಳುತ್ತಿರುವವರೇ ನೀವು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾತೆತ್ತಿದರೆ ಡೆಲ್ಲಿ ಕಡೆ ಕೈ ತೋರಿಸುತ್ತೀರಿ. ಆ ರೀತಿಯಾಗಿ ಹೇಳುವುದು ಬೇಡ. ಹಾಗೆಲ್ಲ ಮಾತನಾಡಿದರೆ ಒಂದಲ್ಲ ಒಂದು ದಿವಸ ಇದಕ್ಕೂ ಹಿಂದುಮುಂದು ಯೋಚನೆ ಮಾಡಬೇಕಾದ ಕಾಲ ಬಂದೀತು. ಅದನ್ನು ಯೋಚನೆ ಮಾಡಿ ಎಂದು ಹೇಳಿ ಆರ್ಥಿಕ ಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರುವ ಆಯವ್ಯಯವನ್ನು ವಿರೋಧಿಸಿ ನಾಲ್ಕು ಮಾತುಗಳನ್ನು ಆಡಬೇಕೆಂದಿದ್ದೇನೆ. ಕಾಂಗ್ರೆಸ್ ಸರ್ಕಾರ ಇವೊತ್ತಿನ ದಿವಸ ಗಾಂಧೀಜಿಯವರ ಹೆಸರನ್ನೇನೋ ಹೇಳುತ್ತಿದೆ. ಆದರೆ ಗಾಂಧೀಜಿಯವರು ಯಾವ ತತ್ವಗಳನ್ನು ದೇಶಕ್ಕೆ ಉಪದೇಶ ಮಾಡಿದರೋ ಅವುಗಳನ್ನು ಗಾಳಿಗೆ ತೂರುತ್ತಿದ್ದಾರೆ ಎನ್ನುವ ಮಾತನ್ನು ಕೇಳಿದರೆ ವ್ಯಸನವಾಗುತ್ತದೆ. ಗಾಂಧೀಜಿಯವರು ಹೇಳಿ

(ಶ್ರೀ ಕೆ. ಪಿ. ನಾಡಗೌಡ)

ದರು, ಸಾದಾ ಜೀವನ ಇರಬೇಕು ಎಂದು. ಸಾದಾ ಜೀವನವನ್ನು ನಡೆಸುತ್ತ ಕಲಿತವರು ಹಳ್ಳಿಗಾಡು ಪ್ರದೇಶಗಳಿಗೆ ಹೋಗಿ ವಿಧಾಯಕವಾದ ಕಾರ್ಯಗಳನ್ನು ಮಾಡಬೇಕು ಎನ್ನುವ ಉಪದೇಶ ಮಾಡಿದರು. ಗಾಂಧೀಜಿಯವರ ತತ್ವವನ್ನು ಅಕ್ಷರಶಃ ಪಾಲಿಸದೆ ಇದ್ದರೂ ಕೂಡ ಹಣಕಾಸಿನ ಮಂತ್ರಿಗಳು ಒಂದು ವಿಷಯದಲ್ಲಿ ಗಾಂಧೀಜಿಯವರನ್ನು ಅನುಕರಣ ಮಾಡಿದ್ದಾರೆ.

Mr. DEPUTY SPEAKER.—The Whips are also agreed to sit up to 7 P.M. I think all the members are agreeable because many members desire to speak.

Sri H. SIDDAVEERAPPA.—I think we can sit up to 7 P.M.

HON. MEMBERS.—Yes.

ಶ್ರೀ ಕೆ. ಪಿ. ನಾಡಗೌಡ.—ಅರ್ಥ ಸಚಿವರು ಬಹಳಷ್ಟು ಓದಿದವರು, ಅರ್ಥಶಾಸ್ತ್ರ ಪಂಡಿತರು, ಬುದ್ಧಿಮತ್ತೆಯಲ್ಲಿ ಕುಶಲರೂ ಆಗಿದ್ದಾರೆ ಎನ್ನುವಂಥ ಮಾತನ್ನು ಅವರು ಬಜೆಟ್ಟಿನ ಮೇಲಿನ ಭಾಷಣದಲ್ಲಿ ನೋಡಬಹುದು. ಅವರು ಗಾಂಧೀಜಿಯವರನ್ನು ಅನುಕರಿಸುತ್ತಿದ್ದಾರೆ. ಗಾಂಧೀಜಿಯವರು ಧರಿಸುವ ಉಡುವು ಬಹಳ ಚಿಕ್ಕದಾಗಿದ್ದಿತು. ಗಾಂಧೀಜಿಯವರು ವಿನಾಕಾರಣವಾಗಿ ಹೆಚ್ಚಿಗೆ ಯಾವುದನ್ನೂ ತಿನ್ನಬಾರದು, ಹೆಚ್ಚಿಗೆ ತರಬಾರದು ಎಂದು ಏನು ಹೇಳಿದರೋ ಅದನ್ನು ಅಕ್ಷರಶಃ ಇಲ್ಲದೇ ಇದ್ದರೂ ಅಂಶತಃ ಪಾಲಿಸುತ್ತಿದ್ದಾರೆ. ಆದರೆ ಇವರು ಬಜೆಟ್ಟನು ಮಂಡಿಸುವಾಗ ಸೂಟುಧಾರಿಗಳಾಗಿ ಅರ್ಥ ಮಂತ್ರಿಗಳು ಇಂಥ ಸರ್ಪ್ಲಸ್ ಬಜೆಟ್ಟನ್ನು ಮಂಡಿಸಿದರು ಎನ್ನುವಂಥದ್ದು ವೃತ್ತಪತ್ರಿಕೆಗಳಲ್ಲಿ ಪ್ರಕಟವಾಯಿತು. ಹಾಗಾದರೆ ಪ್ರತಿದಿವಸ ಇರುವ ಜೀವನಕ್ಕೂ, ವೇಷಭೂಷಣಕ್ಕೂ, ಈ ಬಜೆಟ್ಟನ್ನು ಮಂಡಿಸುವಾಗ ಅವರು ಧರಿಸಿದ ಪೋಷಾಕನ್ನು ನೋಡಿದಾಗ, ಈ ತಾರತಮ್ಯ ಏಕೆ ಎಂದು ವಿಚಾರ ಮಾಡಿದೆ. ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದರು, ಇದರಲ್ಲಿ ಜಗ್ಲರಿ ಇದೆ, ಇದೇ ಇದರ ವೈಖರಿ ಎಂದು. ಆದರೆ ಅವರು ಭಾಷಣ ಮಾಡಿದಾಗ ಆ ದಿನ ಅವರನ್ನು ನೋಡಿದಾಗ ನನಗನ್ನಿಸಿದ್ದು ಏನೆಂದರೆ ಅವರು ಪ್ರೊಫೆಸರ್ ಎಲ್. ಕೆ. ಷಾ, ಪ್ರೊಫೆಸರ್ ರಘುಬೀರ್ ಅವರಂತೆ ಬಜೆಟ್ ಮಂಡಿಸುತ್ತಿದ್ದಾರೆ ಎಂದು. ಆದರೆ ಅವರು ಮೆಸ್ಮೆರಿಸಂ ಹಿಪ್ನಾಟಿಸಂ ಮಾಡಲಿಕ್ಕೆ ಈ ವೇಷವನ್ನು ಹಾಕಿದ್ದಾರೆ ಎಂದು ಅವರ ಆಯವ್ಯಯ ಭಾಷಣವನ್ನು ಪುನಃ ಮನೆಯಲ್ಲಿ ಓದಿದಾಗ ಅರ್ಥವಾಯಿತು. ಹಾಗೆ ಆಗಲಿಕ್ಕೆ ಕಾರಣವೇನು ಎಂದು ವಿಚಾರ ಮಾಡಿದರೆ, ಸ್ವತಃ ಗಾಂಧಿ ತತ್ವಗಳನ್ನು ಹೇಳಿದರೂ ಕೂಡ ಎಷ್ಟೋ ಜನ ಮಂತ್ರಿಗಳು ಅದನ್ನು ಆಚರಣೆಯಲ್ಲಿ ತಂದಿಲ್ಲ, ತರುವುದಕ್ಕೆ ಮನಸ್ಸಿಲ್ಲ ಎಂದು ಕಾಣುತ್ತದೆ.

ನಮ್ಮ ಸರ್ಕಾರದ ಕೇಂದ್ರ ಸರ್ಕಾರ ಆದೇಶಕ್ಕನುಗುಣವಾಗಿ ಪಂಚವಾರ್ಷಿಕ ಯೋಜನೆಗಳಲ್ಲಿ ಹೇರಳವಾಗಿ ಹಣವನ್ನು ವ್ಯಯ ಮಾಡಿತು. ಹೇರಳವಾಗಿ ಪರದೇಶಗಳಿಂದ ಸಾಲದ ರೂಪದಿಂದ ತಂದ ಹಣವನ್ನು ಯಾವ ರೀತಿಯಿಂದ ಖರ್ಚ ಮಾಡಬೇಕೋ ಹಾಗೆ ಮಾಡದೆ, ಅದರಿಂದ ಉಪಯೋಗವನ್ನು ಹೇಗೆ ಸಾಧಿಸಬೇಕು ಎನ್ನುವಂಥದ್ದರಲ್ಲಿ ಅಚ್ಚುಕಟ್ಟುತನವನ್ನು ಪಾಲಿಸಲಿಲ್ಲ.

6-00 P.M.

ಏಕೆಂದರೆ ಈಗ ದೊಡ್ಡ ಹುಡುಗರು ಆಸ್ತಿಯು ತಮ್ಮ ವಶಕ್ಕೆ ಬಂದಕೂಡಲೆ ಅದನ್ನು ಮಾರಾಟ ಮಾಡಿ ತಮಗೆ ಮನಬಂದಹಾಗೆ ಬರುವ ಹಣವನ್ನು ವಿನಿಯೋಗ ಮಾಡುತ್ತಿದ್ದಾರೆ. ಕೈಲಿ ಹಣವಿರುವಾಗ ಯಾವ ರೀತಿ ಉಪಯೋಗವಮಾಡಬೇಕು ಎಂದು ವಿಚಾರವಮಾಡಿ ದಕ್ಷತೆಯಿಂದ ಕೆಲಸ ಮಾಡಬೇಕು ಎಂಬುದು ಸರಕಾರಕ್ಕೆ ಈವರೆಗೂ ತಿಳಿದಿಲ್ಲ. ಆದರೆ ಆರ್ಥಿಕ ಸಚಿವರು ತಮ್ಮ ಭಾಷಣದಲ್ಲಿ ಒಂದು ಅಂಶ ಹೇಳಿದ್ದಾರೆ. ಅದು ಈ ರೀತಿ ಇದೆ : ''ಸರ್ಕಾರಿ ಉದ್ಯಮ ವಲಯ-ಖಾಸಗಿ ವಲಯಗಳೆರಡೂ ಒಟ್ಟೊಟ್ಟಿಗೆ ಶ್ರಮಿಸಿ ದೇಶದ ಆರ್ಥಿಕ ಸ್ಥಿತಿಯ ಅಭಿವೃದ್ಧಿಗೆ ನೆರವಾಗಬೇಕಾದ ಕಾಲ ಈಗ ಸನ್ನಿಹಿತವಾಗಿದೆ. ಈ ದಿಶೆಯಲ್ಲಿ ಇವೆರಡೂ ವಲಯಗಳು ಪ್ರಮುಖ ಪಾತ್ರ ವಹಿಸಬೇಕಾಗಿದೆ.'' ಸರಕಾರಿ ಉದ್ಯಮಗಳು ಹಿಂದೆ ಅರಸರ ಕಾಲದಲ್ಲಿ ಎಷ್ಟೋ ದಕ್ಷತೆಯಿಂದ ಕೆಲಸ ಮಾಡುತ್ತಿದ್ದುವು. ಮಹಾರಾಜರ ಕಾಲದಲ್ಲಿ ಹೇಗೆ ಉದ್ಯಮಗಳು ಪ್ರಗತಿ ಸಾಧಿಸಿದುವು, ಈಗೇಕೆ ಅವು ಪ್ರಗತಿ ಪಥದಲ್ಲಿ ನಡೆಯುತ್ತಿಲ್ಲ ಎಂದು ನೋಡಿದರೆ ಅದಕ್ಕೆ ಕಾರಣ ಹಿಂದೆ ಸರಕಾರದ ಹೆದರಿಕೆ ಇತ್ತು. ಸರಿಯಾಗಿ ಕೆಲಸ ಮಾಡದಿದ್ದರೆ, ಲೋಪದೋಷಗಳಿದ್ದರೆ ಹಿಂದೆ ತಪ್ಪಿತಸ್ಥರಿಗೆ ಶಿಕ್ಷೆ ಮಾಡಲ್ಪ

ಅಧಿಕಾರವಿತ್ತು, ಅದರಂತೆ ಮಾಡುತ್ತಿದ್ದರು. ಆದುದರಿಂದ ಅಧಿಕಾರಿಗಳು ದಕ್ಷತೆಯಿಂದ ಶ್ರದ್ಧೆಯಿಂದ ಮುತವರ್ಜಿ ವಹಿಸಿ ಕೆಲಸ ಮಾಡುತ್ತಿದ್ದರು. ಅದೇ ಈಗ ಪರದೇಶದವರನ್ನು ಅನುಸರಿಸಿ ಸೋಷಿಯಲಿಸಂ ಆಚರಣೆಗೆ ತರಲು ಪ್ರಯತ್ನಮಾಡುತ್ತಿದ್ದಾರೆ. ಆದರೆ ಇದರಿಂದ ಅನುಕೂಲವಾಗಿಲ್ಲ. ಅದು ಓವರ್‌ಲೋಡೆಡ್. ಜನರಲ್ಲಿ ಪ್ರಾಮಾಣಿಕತೆ ಇಲ್ಲದಿರುವುದರಿಂದ ಸರಕಾರಿ ರಂಗದಲ್ಲಿ ಉತ್ಪತ್ತಿ ಸರಿಯಾಗಿ ಆಗುತ್ತಿಲ್ಲ. ಶ್ರೀಮಂತರಿಗೆ ಅವಕಾಶ ಕೊಟ್ಟರೆ ಅವರು ದೇಶಾಭಿವೃದ್ಧಿಗಾಗಿ ಕೈಗಾರಿಕೆ ಮುಂತಾದುವನ್ನು ಸ್ಥಾಪಿಸುತ್ತಾರೆ ಎಂಬುದು ಮೊದಲು ಸರಕಾರಕ್ಕೆ ತಿಳಿಯಲಿಲ್ಲ. ಇಂದು ಮುಂಬಯಿ, ಕಲ್ಕತ್ತ ಮುಂತಾದ ಕಡೆಗಳಿಂದ ಉದ್ಯಮದಾರರು ನಮ್ಮ ದೇಶಕ್ಕೆ ಬಂದು ಉದ್ಯಮಗಳನ್ನು ಸ್ಥಾಪಿಸಲು ಆಮಂತ್ರಣ ಕೊಡುತ್ತಿದ್ದಾರೆ. ಇಷ್ಟು ವರ್ಷ ಇದನ್ನು ವಿಚಾರ ಮಾಡದೆ ಪ್ರಯೋಗ ಮಾಡಿ ನಷ್ಟ ಮಾಡಿ ಈ ದಿವಸ ಖಾಸಗಿ ರಂಗ ಮತ್ತು ಸರಕಾರಿ ರಂಗ ಜೊತೆಯಲ್ಲಿ ಕೆಲಸ ಮಾಡಬೇಕಾಗಿದೆ ಎಂಬ ತತ್ವವನ್ನು ಪ್ರತಿಪಾದಿಸುತ್ತಿದ್ದಾರೆ. ಏಕೆಂದರೆ ಉದ್ಯಮಗಳಲ್ಲಿ ನಾವು ಹೊಸಬರು, ಸರಕಾರಕ್ಕೆ ಅದು ಹೊಸದು ; ಅಧಿಕಾರಿಗಳಲ್ಲಿ, ಮಂತ್ರಿಗಳಲ್ಲಿ ದಕ್ಷತೆಯಿಲ್ಲ. ಇಂಥ ಪರಿಸ್ಥಿತಿಯಲ್ಲಿ ಹೇರಳವಾಗಿ ಹಣ ಖರ್ಚು ಮಾಡುವಾಗ ಉದ್ಯಮ ನಡೆಸುವಾಗ ಚೆನ್ನಾಗಿ ಪರಿಶೀಲನೆ ಮಾಡಬೇಕು. ಮೊಗೆ ಮಾಡುವುದಕ್ಕೆ ಬಾರದ ಕುಂಬಾರ ಏನೋ ಮಾಡಿದಂತೆ ಈಗ ಮಾಡಿದ್ದಾರೆ. ರಸ್ತೆ, ಸೇತುವೆ ಮುಂತಾದುವುಗಳ ಕೆಲಸವನ್ನು ಸರಕಾರ ಮಾಡಬೇಕು. ಇತರ ಉದ್ಯಮಗಳನ್ನು ಬಂಡವಾಳಗಾರರಿಗೆ ಬಿಡಬೇಕು, ಅವರು ನಷ್ಟವಾಗದಂತೆ ಕೆಲಸ ಮಾಡಬಲ್ಲರು. ಲಾಭ ಬಂದಾಗ ವರಮಾನ ತೆರಿಗೆ ಹಾಕುವುದಕ್ಕೆ ಅಧಿಕಾರವಿದೆ. ಸರಕಾರ ರಾಜ್ಯವಾಳಬೇಕು, ಆಳುವುದನ್ನೂ ದುಡಿಯುವುದನ್ನೂ ಒಬ್ಬರೇ ಮಾಡುವುದು ಸರಿಯಲ್ಲ. ಪೂರ್ವ ಕಾಲದಲ್ಲಿ ಅರಸರು ನಡೆಸುತ್ತಿದ್ದ ಉದ್ಯಮಗಳನ್ನು ಮಾತ್ರ ಸರಕಾರ ಇಟ್ಟುಕೊಂಡು ಉಳಿದದ್ದನ್ನು ಖಾಸಗಿಯವರಿಗೆ ವಹಿಸಬೇಕು. ಹಳ್ಳಿಗಾಡುಗಳಲ್ಲಿ ಭೂಮಿಯ ಮೇಲೆ ಕೂಲಿಗಳ ಒತ್ತಡ ಹೆಚ್ಚಾಗಿರುವುದರಿಂದ ಗ್ರಾಮಾಂತರಗಳಲ್ಲಿ ಚಿಕ್ಕ ಉದ್ಯಮಗಳನ್ನು ಆರಂಭಿಸಿ ಅಲ್ಲಿ ದಕ್ಷತೆಯಿಂದ ಕೆಲಸ ಮಾಡುವ ತಜ್ಞರನ್ನು ಮತ್ತು ಅಧಿಕಾರಿಗಳನ್ನು ನೇಮಕ ಮಾಡಬೇಕು. ಹಾಗೆ ಮಾಡಿದರೆ ಹಳ್ಳಿಗಳು ಉದ್ಧಾರವಾಗುತ್ತವೆ. ಮತ್ತು ಸಾಕಷ್ಟು ಕೆಲಸ ಪ್ರತಿಯೊಬ್ಬರಿಗೂ ಸಿಕ್ಕುತ್ತದೆ; ಬೆಂಗಳೂರಿನಲ್ಲಿ ಇಂಥ ಕೈಗಾರಿಕೆಗಳು ವಿಶೇಷವಾಗಿ ಬೆಳೆಯುವುದೂ ಇಲ್ಲ. ಈಗ ಬೆಂಗಳೂರು ಬೆಳೆದಿರುವುದನ್ನು ನೋಡಿದರೆ ಅದನ್ನು ಸಂರಕ್ಷಣೆ ಮಾಡುವುದೇ ಕಷ್ಟವಾಗಿರುವಾಗ ಹೆಚ್ಚು ಜನರು ಇಲ್ಲಿ ಸೇರಲು ಅವಕಾಶ ಕೊಡದಿರುವುದು ಒಳ್ಳೆಯದು. ಮೊನ್ನೆ ಹಿಂದೆ ಆಂದೋಳನ ನಡೆದಾಗ ಬೆಂಗಳೂರಿನಲ್ಲಿ ಎಷ್ಟು ಗಲಾಟೆಯಾಯಿತೆಂಬುದು ಎಲ್ಲರಿಗೂ ಗೊತ್ತಿದೆ ಬೃಹತ್ ಪ್ರಮಾಣದಲ್ಲಿ ಚಳವಳಿ ನಡೆಯಿತು ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ತಪ್ಪಿಸಲು ಉದ್ಯಮಗಳನ್ನು ಹಳ್ಳಿಗಾಡಿಗೆ ಸಾಗಿಸಿ ಚಿಕ್ಕಪುಟ್ಟ ಉದ್ಯಮಗಳನ್ನು ಸರಕಾರಿ ರಂಗದಲ್ಲೂ ದೊಡ್ಡ ಉದ್ಯಮಗಳನ್ನು ಖಾಸಗಿ ರಂಗದಲ್ಲೂ ಮಾಡಿದರೆ ಅದರಿಂದ ಪಟ್ಟಣಗಳಲ್ಲಿ ಜನಸಂಖ್ಯೆಯೂ ಕಡಮೆಯಾಗುವುದಲ್ಲದೆ ಸಾರ್ವಜನಿಕರ ಹಣವೂ ಹೆಚ್ಚಾಗಿ ಖರ್ಚಾಗುವುದಿಲ್ಲ, ಜನತೆಗೂ ಒಳ್ಳೆಯದಾಗುತ್ತದೆ.

ಇನ್ನು ಸಹಕಾರಿ ರಂಗಕ್ಕೆ ಹೇರಳವಾಗಿ ಸರಕಾರ ಸಹಾಯ ಮಾಡುತ್ತಿದೆ. ಆದರೆ ಅಲ್ಲಿ ಪ್ರಾಮಾಣಿಕತನ ಉಳಿದಿಲ್ಲ. ಕಾರಣ ಮಂತ್ರಿಗಳ ಅನುಯಾಯಿಗಳು ಎಷ್ಟೋ ಜನರು ಸೊಸೈಟಿಗಳನ್ನು ನಡೆಸುತ್ತಾರೆ, ಅವರು ಅಲ್ಲಿ ಹಣ, ಪದಾರ್ಥ ಇತ್ಯಾದಿಗಳನ್ನು ದುರುಪಯೋಗಪಡಿಸಿದಾಗ ಅವರಮೇಲೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮಕೈಕೊಂಡರೂ ಮಂತ್ರಿಮಂಡಲ ಠರಾವನ್ನು ಪಾಸುಮಾಡಿ ಕೋರ್ಟಿನಲ್ಲಿರುವ ಕೇಸುಗಳನ್ನು ವಾಪಸು ತೆಗೆದುಕೊಳ್ಳುತ್ತಿದ್ದಾರೆ, ಇಂಥ ಉದಾಹರಣೆಗಳು ಸಾಕಾದಷ್ಟಿವೆ. ಅಂದಮೇಲೆ ಸಹಕಾರಿ ರಂಗದಲ್ಲಿ ಸರಕಾರಕ್ಕೆ ಹೆಚ್ಚು ಹಾನಿಯೇ ಹೊರತು ಲಾಭವಾಗುವುದಿಲ್ಲ.

ಶಿಕ್ಷಣ ರಂಗದಲ್ಲಿ ಪ್ರಗತಿಯಾಗಿದೆ. ಅದನ್ನು ಹೇಗೆ ಅಳೆಯುವುದಕ್ಕೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕು. ಹೆಚ್ಚು ಪ್ರೈಮರಿ ಸ್ಕೂಲುಗಳನ್ನು ಸ್ಥಾಪಿಸಿದ್ದಾರೆ, ಹೆಚ್ಚು ಶಿಕ್ಷಕರನ್ನು ನೌಕರಿಗೆ ತೆಗೆದುಕೊಂಡಿದ್ದಾರೆ. ಆದರೆ ಇದರಿಂದ ಶಿಕ್ಷಣ ಸುಧಾರಿಸುವುದಿಲ್ಲ. ಈಗಿನ ಶಾಲಾ ಬಾಲಕರ ಅಭ್ಯಾಸಕ್ರಮ ಅವರ ತರಬೇತಿ ನೋಡಿದರೆ ಅವರಿಗೆ ಶುದ್ಧವಾದ ಒಂದು ವಾಕ್ಯವನ್ನು ಕೂಡ ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಬರೆಯುವುವಕ್ಕೆ ಬರುವುದಿಲ್ಲ, ಶೇಕಡ 55 ಹುಡುಗರ ವಿಷಯ ಹೀಗಿದೆ. ಹೀಗಾದರೆ ಸರಿಯಾದ ಕೆಲಸವಾಗುವುದಿಲ್ಲ. ಅದಕ್ಕಾಗಿ ಅಯಾ ತಾಲ್ಲೂಕುಗಳಲ್ಲಿರುವ ಸದಸ್ಯರು ಉಪಾಧ್ಯಾಯರ ಮೇಲೆ ಹತೋಟಿ ಇಟ್ಟುಕೊಳ್ಳಬೇಕು. ತಪ್ಪು ಕಂಡುಬಂದಾಗ ಗಮನಕ್ಕೆ ತಂದರೆ ಸರಕಾರ ಸೂಕ್ತ ಕ್ರಮ ಕೈಕೊಳ್ಳಬೇಕು. ಆದರೆ ಕಾಂಗ್ರೆಸ್ಸಿನವರು ವಿರೋಧ ಪಕ್ಷದವರು ಯಾರು ದೂರು ಕೊಟ್ಟಿದ್ದಾರೆ ಎಂಬುದನ್ನು ನೋಡಿ ಕ್ರಮ ತೆಗೆದುಕೊಳ್ಳುವ ಸಂಪ್ರದಾಯವಿದೆ. ತಮಗೆ ಬೇಕಾದ ಶಿಕ್ಷಕರಿದ್ದರೆ ಅವರಿಗೆ ಕೆಲವರು ಬೆಂಬಲ ಕೊಡುವ ನಿದರ್ಶನಗಳಿವೆ.

(ಶ್ರೀ ಕೆ. ಪಿ. ನಾಡಗೌಡ)

ಉತ್ತರ ಕರ್ಣಾಟಕದಲ್ಲಿ ಸ್ಕೂಲ್ ಬೋರ್ಡ್ ಇದೆ, ಅಲ್ಲಿ ಇರುವ ನೌಕರರನ್ನು ಶಿಕ್ಷಿಸುವ ಅಧಿಕಾರ ಸರಕಾರಕ್ಕಿಲ್ಲ, ಸ್ಕೂಲು ಬೋರ್ಡಿಗಿದೆ, ಸ್ಕೂಲು ಬೋರ್ಡಿನ ಛೇರ್ಮನ್ನರು ಆ ಅಧಿಕಾರ ಹೊಂದಿದ್ದಾರೆ ಎಂದು ಹೇಳುತ್ತಾರೆ. ಅದನ್ನು ಮುನಿಸಿಪಾಲಿಟಿಗಳಿಗೇಕೆ ವರ್ಗಾಯಿಸಬಾರದು ? ಸ್ಕೂಲು ಬೋರ್ಡುಗಳನ್ನು ಬೇಗ ರದ್ದು ಮಾಡಿ ಆಯಾ ಭಾಗದಲ್ಲಿರುವ ರೇಂಜು ಆಫೀಸುಗಳಿಗೆ ವಹಿಸಿ ರಾಜ್ಯದಾದ್ಯಂತ ಏಕರೂಪತೆಯನ್ನು ತರಬೇಕು, ಈ ರೀತಿ ಮಾಡಲು ಸರಕಾರ ಬೇಗ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಇನ್ನು ಮಂತ್ರಿಗಳ ವಿಷಯವಾಗಿ ನಾನು ಒಂದೇ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಮಂತ್ರಿಗಳಲ್ಲಿ ಒಮ್ಮತ ಇಲ್ಲ. ಮಂತ್ರಿಮಂಡಲವ ಠರಾವು ಸಮಗ್ರ ದೇಶಕ್ಕೆ, ಸಮಗ್ರ ನಾಡಿಗೆ, ರಾಜ್ಯಕ್ಕೆ ಒಂದೇ ರೀತಿಯಾಗಿದ್ದು ಏಕ ರೀತಿಯ ಸೂತ್ರವನ್ನು ಇಟ್ಟುಕೊಳ್ಳಬೇಕು. ಆ ಒಂದು ಧೋರಣೆಯನ್ನು ಇಟ್ಟುಕೊಳ್ಳುವುದಿಲ್ಲ. ಮದ್ಯಪಾನನಿರೋಧವನ್ನು ಸಡಿಲಗೊಳಿಸುವಾಗ ಕೆಲ ಕೆಲವು ತಾಲ್ಲೂಕುಗಳಿಂದ ಅಲ್ಲಿಯ ಮಂತ್ರಿಗಳು ವಿರೋಧ ಮಾಡಿದರು ಅಂತ ತಿಳಿದುಕೊಂಡು ಅಲ್ಲಿ ಪ್ರೊಹಿಬಿಷನ್ ಇಟ್ಟಿರಿ ಅನ್ನುವಂತಹ ಮಾತು ಕೇಳಿಬರುತ್ತದೆ. ಇದರಿಂದ ಏನಾಗುತ್ತದೆ ಎಂದರೆ, ಮಂತ್ರಿಗಳಲ್ಲಿ ಒಮ್ಮತ ಇಲ್ಲವೆಂಬುದು ಗೊತ್ತಾಗುತ್ತದೆ. ಮಂತ್ರಿಗಳು ತಮ್ಮ ಶಾಖೆಗೆ ಹೆಚ್ಚು ಹಣ ಬೇಕು ಎಂದು ಪ್ರತಿಯೊಬ್ಬರೂ ಕಚ್ಚಾಡುತ್ತಾ ಇದ್ದಾರೆ ಎಂಬ ಮಾತನ್ನು ಹೋದ ವರ್ಷ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದಾರೆ. ಯಾವ ಶಾಖೆಗೆ ಎಷ್ಟು ಬೇಕು ಎಂಬುದನ್ನು ಸಾಮೂಹಿಕವಾಗಿ ಪರಿಶೀಲನೆ ಮಾಡಿ ಆ ಪ್ರಕಾರ ಕೊಡದೆ ಅವರವರಲ್ಲೇ ಕಚ್ಚಾಡುತ್ತಾ, ಲಾಭ ಮಾಡಿಕೊಳ್ಳುವ ದೃಷ್ಟಿಯಿಂದ ಮುಖ್ಯಮಂತ್ರಿಗಳನ್ನು ಮುತ್ತಿಬಿಟ್ಟರು ಎಂಬ ಮಾತನ್ನು ಕೇಳುವಾಗ ಅಸಹ್ಯವಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಈ ಕಾಂಗ್ರೆಸ್ ತನ್ನ ಅಧಿಕಾರವನ್ನು ಬಿಡಬಾರದು, ದೇಶಾದ್ಯಂತ ತನ್ನದೇ ಆದ ಅಧಿಕಾರ ಇರಬೇಕೆಂಬ ವಿಚಾರವನ್ನು ಇಟ್ಟುಕೊಂಡು. ಪಿ. ಎಸ್. ಪಿ. ಆಗಲಿ, ಸೋಷಿಯಲಿಸ್ಟ್ ಪಾರ್ಟಿಯಾಗಲಿ ಇತರ ಪಾರ್ಟಿಗಳನ್ನೊಳಗೊಂಡು ರಚನೆ ಮಾಡಿರತಕ್ಕ ಸರ್ಕಾರಗಳನ್ನು ಉರುಳಿಸುವ ಪ್ರಯತ್ನದಲ್ಲಿ ತೊಡಗಿರುವುದನ್ನು ನಾವು ನೋಡುತ್ತಾ ಇದ್ದೇವೆ. ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಎಂಬ ಧ್ಯೇಯವನ್ನು ಕಾಂಗ್ರೆಸ್ ತನ್ನ ಹೊಣೆಗಾರಿಕೆಯನ್ನಾಗಿ ಮಾಡಿಕೊಂಡಿದೆ ಆದರೆ ಅಲ್ಲಿರತಕ್ಕ ಶ್ರೀಮಂತರಿಗೆ ಬಂಡವಾಳ ಶಾಹಿಗಳಿಗೆ ಸೋಶಿಯಲಿಸಮೂ ಬೇಡ, ಕಾಂಗ್ರೆಸ್ ಬಿಟ್ಟು ಹೋಗುವುದೂ ಬೇಡ, ಹೀಗಾಗಿ ಕಾಂಗ್ರೆಸ್‌ನ ಧೋರಣೆಗಳನ್ನು ತತ್ವಶಃ ಅನುಕರಣೆಯಲ್ಲಿ ತರುವುದಕ್ಕೆ ಆಗುತ್ತಿಲ್ಲ. ಕಾಂಗ್ರೆಸ್ ಈ ಒಂದು ರೋಗದಿಂದ ಬಳಲುತ್ತಾ ಇದೆ. ಇದರಿಂದ ರಾಜ್ಯಕ್ಕೆ ಸುಖವಾಗುವುದಿಲ್ಲ ಎಂಬುದನ್ನು ಅವರು ಅರಿತುಕೊಳ್ಳಬೇಕು.

ಸಾಮಾನ್ಯ ಜನರ ಹಿತದೃಷ್ಟಿಯಿಂದ ಕೆಲಸ ಮಾಡುವ ಹೊಣೆಗಾರಿಕೆಯನ್ನು ಹೊತ್ತು ಅದಕ್ಕೆ ತಕ್ಕಂತಹ ಬಡ್ಜೆಟ್‌ನ್ನು ಕಾರ್ಯರೂಪಕ್ಕೆ ತರವುದಾದರೆ ಒಳ್ಳೆಯದಾಗುತ್ತದೆ ಎಂಬ ಮಾತನ್ನು ಈ ಮಾನ್ಯ ಸಭೆಯ ಗಮನಕ್ಕೆ ತಂದು ಅಧ್ಯಕ್ಷರು ಇಷ್ಟು ವ್ಯಾಳ್ಯ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಐ. ಸೋಮಶೇಖರಪ್ಪ (ಹೊಸನಗರ).—ಮಾನ್ಯ ಸಭಾಪತಿಗಳೇ, ಮಾನ್ಯ ಆರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರತಕ್ಕ ಬಡ್ಜೆಟ್ಟನ್ನು ಸ್ವಲ್ಪಮಟ್ಟಿಗೆ ಅಭ್ಯಾಸ ಮಾಡಿದ್ದೇನೆ. ನನಗೆ ಒಂದು ವಿಷಯ ಇದರಲ್ಲಿ ಕಾಣುತ್ತಾ ಇಲ್ಲ. ಈ ರಾಜ್ಯದ ಸುಮಾರು 20 ಸಾವಿರ ಚದುರ ಮೈಲಿಯಲ್ಲಿರತಕ್ಕ 40 ಲಕ್ಷ ಜನಗಳ ಒಂದು ಉದ್ಧಾರದ ಬಗ್ಗೆ ಯಾವುದಾದರೂ ತರಹ ಒಂದು ವಿಶೇಷವಾದ ಯೋಜನೆಯೂ ಕಾಣುತ್ತಾ ಇಲ್ಲ, ನಮ್ಮ ಸರ್ಕಾರದವರು ಕಳೆದ ವರ್ಷ ಮಹಾಜನ್ ಸಮಿತಿ ಮುಂದೆ ಇಟ್ಟಿರತಕ್ಕ ಒಂದು ಮೆಮೊರ್‍ಯಾಂಡಂನಲ್ಲೂ ಸಹ ಈ ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಸರ್ಕಾರದ ಗಮನ ಏನಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಆ ಒಂದು ಮೆಮೋರ್‍ಯಾಂಡಂನಲ್ಲಿ ಇರತಕ್ಕ ಕೆಲವು ಸಾಲುಗಳನ್ನು ಓದ ಬಯಸುತ್ತೇನೆ.

"On account of the hilly terrain with ups and downs, on account of the forests and valleys, communication in the area is very difficult, amenities of life are few and the conditions of living are difficult.

Agricultural Development :

As at present, the malnad stands much in need of agricultural development to improve the economic condition. It is in the interest of the malnad area people that Bhalki and Khanapur should go with other malnad districts of Karwar, Dharwar to Chickmagalur and Hassan and Coorg and South Kanara to Mysore.''

ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ, ಸ್ಟೇಟ್ ರೀ ಆರ್ಗನೈಸೇಷನ್ ಕಮಿಟಿಯವರೂ ಸಹ ಮಹಾರಾಷ್ಟ್ರ, ಮೈಸೂರು ಮತ್ತು ಕೇರಳದಲ್ಲಿರತಕ್ಕ ಮಲೆನಾಡು ಪ್ರದೇಶವನ್ನು ವರ್ಗೀಕರಣ ಮಾಡಬೇಕಾದರೆ ಅಥವಾ ಪುನರ್ವಿಂಗಡಣೆ ಮಾಡುವ ಸಂದರ್ಭದಲ್ಲಿ ಒಂದು ಸ್ಪಷ್ಟವಾದ ಅಭಿಪ್ರಾಯಕ್ಕೆ ಬಂದಿದ್ದಾರೆ. ಅದೇನೆಂದರೆ 20 ಸಾವಿರ ಚದುರ ಮೈಲಿ ಇರತಕ್ಕ ಮಲೆನಾಡು ಪ್ರದೇಶ ಒಂದೇ ಒಂದು ಸರ್ಕಾರದ ಹಿಡಿತದಲ್ಲಿ ಅಥವಾ ಆಡಳಿತದಲ್ಲಿ ಬಂದರೆ ಹಿಂದುಳಿದಿರತಕ್ಕ ಆ ಪ್ರದೇಶವನ್ನು ಉತ್ತಮ ದರ್ಜೆಗೆ ತರುವುದಕ್ಕೆ ಸಾಧ್ಯವಾದೀತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರ ಒಂದು ವಾಕ್ಯವನ್ನು ಹೇಳುವುದಾದರೆ :

''The fact that practically the whole of Malnad will belong in future to one State is not an insignificant gain, and it may be expected that co-ordinated planning for these hilly areas will be easier.''

ಬೆಳಗಾಂ ಮತ್ತು ಕಾರವಾರ ಜಿಲ್ಲೆಯಲ್ಲಿರತಕ್ಕ ಕೆಲವು ಪ್ರದೇಶಗಳು ನ್ಯಾಯಬದ್ಧವಾಗಿ ಮಹಾರಾಷ್ಟ್ರಕೆ ಹೋಗುವಂತಹ ಪ್ರದೇಶಗಳಾಗಿದ್ದರೂ ಸಹ ಅದನ್ನು ಕರ್ನಾಟಕಕ್ಕೆ ಸೇರಿಸಿದ್ದಾರೆ. ಅದರ ಉದ್ದೇಶ ಒಂದೇ ಒಂದು ರಾಜ್ಯದ ಆಡಳಿತದಲ್ಲಿದ್ದರೆ ಮಲೆನಾಡು ಪ್ರದೇಶ ಮುಂದು ವರಿದೀತು ಎಂಬ ದೃಷ್ಟಿಯಿಂದ ಮಾಡಿದ್ದಾರೆ. ರಾಜ್ಯಪುನರ್ವಿಂಗಡಣೆಯಾಗಿ ಸುಮಾರು ಹನ್ನೆರಡು ವರ್ಷಗಳಾಗಿವೆ. 40 ಲಕ್ಷ ಪ್ರಜಾಸಂಖ್ಯೆಯಿರತಕ್ಕ ಮಲೆನಾಡು ಜನತೆಯ ಉದ್ಧಾರ ಯಾವ ರೀತಿಯಿಂದ ಆಗಬೇಕಾಗಿತ್ತೊ ಅದು ಆಗಿಲ್ಲ, ಕೆಲವು ರಾಜಕೀಯ ಬದಲಾವಣೆಗಳಿಂದ ಅದು ಆಗಿಲ್ಲ ಎಂದು ಕಾಣುತ್ತದೆ. 1958ರಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಅಂತ ಹೇಳಿ ಒಂದು ಬೋರ್ಡ್‌ನ್ನು ಮಾಡಿದ್ದರು. ಅದಾದ ನಂತರ ಬಂದ ಶ್ರೀಮಾನ್ ಜತ್ತಿಯವರು ಅದನ್ನು ತೆಗೆದುಹಾಕಿದರು, ಅದಕ್ಕೆ ಕಾರಣ ವೇನೋ ಇಲ್ಲಿಯವರೆಗೂ ತಿಳಿದಿಲ್ಲ. ನಮ್ಮ ರಾಜ್ಯದ ಅರ್ಥಸಚಿವರು ಮಲೆನಾಡಿನಿಂದ ಬರತಕ್ಕ ಒಬ್ಬ ವಕ್ತಿಗಳು ಅವರು ಆ ಭಾಗದ ಒಂದು ಜಿಲ್ಲೆಯನ್ನು ಪ್ರತಿನಿಧಿಸುತ್ತಾರೆ. ಅವರಾದರೂ ಈ ಒಂದು ಬಡ್ಜೆಟ್ಟನ್ನು ತಯಾರುಮಾಡುವ ಸಂದರ್ಭದಲ್ಲಿ ಮಲೆನಾಡಿನ ಹಿತದೃಷ್ಟಿಯನ್ನು ಯೋಚನೆ ಮಾಡಿದ್ದರೆ ಬಹಳಮಟ್ಟಿಗೆ ಚೆನ್ನಾಗಿತ್ತು ಎಂದು ಹೇಳಿ ನಾನು ಇವತ್ತು ಆಶಿಸುತ್ತೇನೆ. ಸರ್ಕಾರದವರಿಗೆ ನಾನು ಈ ಸಂದರ್ಭದಲ್ಲಿ ಒಂದು ಸಲಹೆ ಕೊಡಬಯಸುತ್ತೇನೆ. ಈ ಮಲೆನಾಡು ಅಭಿವೃದ್ಧಿಯ ಬಗ್ಗೆ ಮಲೆನಾಡು ಅಭಿವೃದ್ಧಿ ಬೋರ್ಡ್ ಎಂದು ಒಂದು ಬೋರ್ಡ್‌ನ್ನು ಸ್ಥಾಪನೆ ಮಾಡಬೇಕು. ಮಲೆನಾಡಿನಿಂದ ಅದರಲ್ಲೂ ಅರಣ್ಯ ಇಲಾಖೆಯಿಂದ ಬರತಕ್ಕ ಆದಾಯ ಸುಮಾರು 11 ಕೋಟಿ ರೂಪಾಯಿ ಬರುತ್ತಾ ಇದೆ. ಈ ಆದಾಯವನ್ನು ಹತ್ತು ವರ್ಷಗಳವರೆಗೂ ಸಹ ಮಲೆನಾಡಿನ ಅಭಿವೃದ್ಧಿಗಾಗಿಯೇ ಪ್ರತ್ಯೇಕವಾಗಿ ಇಡಬೇಕು, ಆ ರೀತಿ ಮಾಡಿದ್ದೇ ಆದರೆ ಬೇರೆ ಪ್ರದೇಶ ಯಾವ ಒಂದು ಉನ್ನತ ಮಟ್ಟಕ್ಕೆ ಬಂದಿದೆ ಆ ಮಟ್ಟಕ್ಕೆ ಮಲನಾಡು ಬಂದೀತು ಎಂದು ತಿಳಿಸಬಯಸುತ್ತೇನೆ. ಈ ಸಂದರ್ಭದಲ್ಲಿ ಒಂದು ಸಂತೋಷದ ಸುದ್ದಿಯನ್ನು ಈ ಸಭೆಯಲ್ಲಿ ಹೇಳ ಬಯಸುತ್ತೇನೆ. ಕೇಂದ್ರಸರ್ಕಾರದವರು ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಸುಮಾರು ಎರಡು ಕೋಟಿ ರೂಪಾಯಿಗಳನ್ನು ಮಂಜೂರುಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ಓದಿದ್ದೇನೆ, ಅದೇ ರೀತಿ ಯಲ್ಲಿ ರಾಜ್ಯಸರ್ಕಾರದವರೂ ಕೂಡ ಅದಕ್ಕೆ ಮ್ಯಾಚಿಂಗ್ ಗ್ರಾಂಟ್ ಎಂದರೆ ಕೇಂದ್ರ ಸರ್ಕಾರದವರು ಕೊಡತಕ್ಕ 2 ಕೋಟಿ ರೂಪಾಯಿಗಳ ಜೊತೆಗೆ ಸ್ವಲ್ಪ ಹಣವನ್ನು ಕೊಟ್ಟರೆ ಒಳ್ಳೆಯದಾದೀತು ಎಂದು ತಿಳಿದುಕೊಂಡಿದ್ದೇನೆ. ಈ ಸಭೆಯಲ್ಲಿ ಒಂದು ವಿಷಯವನ್ನು ಸ್ಪಷ್ಟವಾಗಿ ತಮ್ಮ ಅವ ಗಾಹನೆಗೆ ತರಬಯಸುತ್ತೇನೆ. ಮೈಸೂರು ರಾಜ್ಯದಲ್ಲಿರತಕ್ಕ ಶರಾವತಿಯಲ್ಲಿ ಸುಮಾರು 9 ಲಕ್ಷದ 60 ಸಾವಿರದ 600 ಕಿಲೋವಾಟ್ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿದೆ. ಅದೇ ರೀತಿ ಕಾಳೀ ನದಿಯೂ ಕೂಡ ಮಲೆನಾಡಿನ ಗರ್ಭದಲ್ಲಿರತಕ್ಕ ಒಂದು ಶಿಶು. ಕಾವೇರಿ, ತುಂಗ,

(ಶ್ರೀ ಐ. ಸೋಮಶೇಖರಪ್ಪ)

ಭದ್ರೆಯರು ಮಲೆನಾಡಿನಲ್ಲಿ ಹುಟ್ಟಿ ಬಯಲು ನಾಡಿನಲ್ಲಿ ಹರಿಯುತ್ತಾ ಇದ್ದಾರೆ. ಆದ್ದರಿಂದ ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಅದಕ್ಕೆ ಸಂಬಂಧಪಟ್ಟಂತೆ ಒಂದು ಬೋರ್ಡ್‌ನ್ನು ಸ್ಥಾಪನೆ ಮಾಡಬೇಕು ಆ ರೀತಿ ಮಾಡಿದ್ದೇ ಆದರೆ ಅದರ ಅಭಿವೃದ್ಧಿಯಾದೀತು ಎಂದು ನಾನು ತಿಳಿದುಕೊಂಡಿದ್ದೇನೆ. ನಾನಿನ್ನು ಭೂಕಂದಾಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಶಿವಮೊಗ್ಗದಲ್ಲಾಗಲೀ ಅಥವಾ ಸಾಗರದಲ್ಲಾಗಲಿ ಅಥವಾ ಬೇರೆ ಯಾವ ರೈತರೇ ಆಗಲಿ ಭೂಕಂದಾಯವನ್ನು ರದ್ದುಮಾಡಬೇಕೆಂದು ಯಾರೂ ಎಲ್ಲಿಯೂ ಹೇಳಲಿಲ್ಲ. ಆದರೆ ಹೊಸನಗರದಲ್ಲಿ ಒಂದು ರೈತರ ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ ಕಾಂಗ್ರೆಸ್ ಪಕ್ಷದವರು ನಾನ್‌ಕಾಂಗ್ರೆಸ್ ಪಕ್ಷಗಳವರು ಎಲ್ಲರೂ ಸೇರಿದ್ದರು. ಆ ಸಮ್ಮೇಳನವನ್ನು ವಿರೋಧ ಪಕ್ಷದ ಶ್ರೀ ಎಸ್. ಗೋಪಾಲಗೌಡರು ಉದ್ಘಾಟನೆ ಮಾಡಿದರು. ಆ ಸಮ್ಮೇಳನದಲ್ಲಿ ಸೇರಿದ್ದ ರೈತರೆಲ್ಲರೂ ಒಂದು ಒಮ್ಮತದಿಂದ ಹಿಂದೆ ಏನು ಕಂದಾಯವಿತ್ತೋ ಅದಕ್ಕೆ ಎರಡರಷ್ಟನ್ನು ತಾವು ಕೊಡುವುದಕ್ಕೆ ಸಿದ್ಧರಾಗಿದ್ದೇವೆ ಅದನ್ನು ಬದಲಾವಣೆ ಮಾಡಬಾರದೆಂಬ ತೀರ್ಮಾನಕ್ಕೆ ಬಂದರು. ಹಾಗೇ ಇನ್ನೊಂದು ಕಡೆಯಲ್ಲೂ ಒಂದು ರೈತರ ಸಮ್ಮೇಳನ ನಡೆಯಿತು. ಆ ಸಮ್ಮೇಳನದ ಉದ್ಘಾಟನೆಯನ್ನು ವಿರೋಧ ಪಕ್ಷದ ಶ್ರೀ ಬಂಗಾರಪ್ಪನವರು ನೆರವೇರಿಸಿದರು. ಆಗ ಅಲ್ಲಿ ಕಾಂಗ್ರೆಸ್ ಸದಸ್ಯರಾದ ಶ್ರೀ ಕೆ. ಎಚ್. ಶ್ರೀನಿವಾಸ್‌ರವರು ಭಾಷಣವನ್ನು ಮಾಡಿದರು. ಆ ಸಮ್ಮೇಳನದಲ್ಲಿ ಕೂಡ ಸೇರಿದ್ದವರೆಲ್ಲರೂ ಒಮ್ಮತದಿಂದ ಹಾಲಿ ಇರತಕ್ಕ ಕಂದಾಯವನ್ನು ರದ್ದು ಮಾಡಕೂಡದೆಂದೂ ಮತ್ತು ರೈತರು ಹಿಂದೇನು ಕಂದಾಯವನ್ನು ಕೊಡುತ್ತಿದ್ದರೋ ಅದಕ್ಕೆ ಎರಡರಷ್ಟನ್ನು ಕೊಡುವುದಕ್ಕೆ ಅವರು ಸಿದ್ಧರಾಗಿದ್ದಾರೆಂಬುದಾಗಿ ತೀರ್ಮಾನ ಮಾಡಿದ್ದಾರೆ. ಹಾಗಿರುವಾಗ ಕಂದಾಯವನ್ನು ರದ್ದು ಮಾಡಬೇಕೆಂದು ರೈತರು ಒತ್ತಾಯ ಮಾಡುತ್ತಿದ್ದಾರೆಂಬುದರಲ್ಲಿ ಅರ್ಥವಿಲ್ಲ.

ಇನ್ನು ನಮ್ಮ ರಾಜ್ಯದಲ್ಲಿ ಕೆಲವು ಇಲಾಖೆಗಳಿವೆ. ಅವುಗಳ ವ್ಯವಹಾರ ಮೂಗಿಗಿಂತ ಮೂಗುತಿ ದೊಡ್ಡದು ಅನ್ನುವಂತಿದೆ. ಉದಾಹರಣೆಗಾಗಿ ಹೇಳುವುದಾದರೆ—ನಮ್ಮ ಜನಾರೋಗ್ಯ ಇಲಾಖೆ. ನಮ್ಮಲ್ಲಿ ಒಂದು ಆಸ್ಪತ್ರೆ ಇದೆ. ಅದರ ಸಿಬ್ಬಂದಿ ವೆಚ್ಚ 12 ಸಾವಿರ. ಅಲ್ಲಿ ಔಷಧಿಗಾಗಿ ಖರ್ಚುಮಾಡುತ್ತಿರುವ ಮೊಬಲಗು ಕೇವಲ 2,400 ರೂಪಾಯಿಗಳು ಮಾತ್ರ ಅದೇ ರೀತಿ ಎನ್.ಇ.ಎಸ್. ಬ್ಲಾಕ್ ಈ ಇಲಾಖೆಯಲ್ಲಿ ಲೆಕ್ಕವಿಲ್ಲದಷ್ಟು ಹುದ್ದೆಗಳಿವೆ. 80 ಸಾವಿರ ರೂಪಾಯಿ ಖರ್ಚುಮಾಡತಕ್ಕ ತಾಲ್ಲೂಕ್ ಬೋರ್ಡಿನಲ್ಲೂ ಸಿಬ್ಬಂದಿಗಾಗಿ 27 ಸಾವಿರ ರೂಪಾಯಿ ಖರ್ಚಾಗುತ್ತಿದೆ. ಸರ್ಕಾರದವರು ಕೂಡಲೇ ಈ ಡಿಸ್ಪ್ಯಾರಿಟಿಯನ್ನು ಹೋಗಲಾಡಿಸಬೇಕೆಂದು ನಾನು ಬಿನ್ನಹ ಮಾಡಿಕೊಳ್ಳುತ್ತೇನೆ.

ಇನ್ನು ಸಾಮಾನ್ಯ ಆಡಳಿತದ ಬಗ್ಗೆ ನಾನು ಒಂದೆರಡು ಮಾತುಗಳನ್ನು ಆಡಲಿಚ್ಛಿಸುತ್ತೇನೆ. ಅನೇಕ ಇಲಾಖೆಗಳಲ್ಲಿ ಮುಖ್ಯಾಧಿಕಾರಿಗಳ ಹುದ್ದೆಗಳಿವೆ. ಅಲ್ಲಿ ಕೆಲಸ ಮಾಡತಕ್ಕ ಉನ್ನತಾಧಿಕಾರಿಗಳನ್ನು ಒಂದು ಸ್ಥಾನದಲ್ಲಿ 3 ವರ್ಷಗಳಿಗಿಂತ ಹೆಚ್ಚು ಕಾಲ ಇರುವುದಕ್ಕೆ ಅವಕಾಶ ಕೊಡಬಾರದು. ಅಂಥಾ ಇಲಾಖೆಗಳು ಯಾವುವೆಂದರೆ—ಡೈರೆಕ್ಟರ್ ಆಫ್ ಮೆಡಿಕಲ್ ಸರ್ವೀಸಸ್, ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್, ಚೀಫ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಮತ್ತು ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್. ಈ ಇಲಾಖೆಗಳಲ್ಲಿ ಹಾಗೂ ತೀರಾ ಹೆಚ್ಚೆಂದರೆ ಅವರು ಅಂಥಾ ದಕ್ಷರಾದ ಅಧಿಕಾರಿಗಳೆಂದು ಹೇಳುವುದಾದರೆ ಯಾವ ಸಂದರ್ಭದಲ್ಲಿಯೂ ಅವರು 5 ವರ್ಷಗಳಿಗಿಂತ ಹೆಚ್ಚುಕಾಲ ಇರುವುದಕ್ಕೆ ಅವಕಾಶ ಕೊಡಬಾರದು ಎಂದು ಹೇಳುತ್ತೇನೆ. ಹಾಗೆ ಅವರು ಒಂದೇ ಸ್ಥಾನದಲ್ಲಿ ಬಹಳ ಕಾಲ ಉಳಿದರೆ ಅಲ್ಲಿ ಕೆಲವು ಅಧಿಕಾರಿಗಳಿಗೆ ಅವರು ಅನ್‌ಡ್ಯೂ ಪ್ರಿಫರೆನ್ಸ್ ತೋರಿಸುವುದಕ್ಕೆ ಮತ್ತು ಸರ್ಕಾರದ ಮೇಲೆ ತಮ್ಮ ಒಂದು ಪ್ರಭಾವವನ್ನು ಬೀರುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಅದಕ್ಕೆ ಅವಕಾಶ ಕೊಡಬಾರದೆಂದು ನಾನು ಸರ್ಕಾರದವರಲ್ಲಿ ಬಿನ್ನಹ ಮಾಡಿಕೊಳ್ಳುತ್ತೇನೆ.

ಇನ್ನು ಹರಿಜನರ ಬಗ್ಗೆ ನನ್ನ ಕೆಲವು ಸ್ನೇಹಿತರು ಅವರಿಗೆ ಅನೇಕ ರೀತಿಯಲ್ಲಿ ಸೌಲಭ್ಯಗಳನ್ನು ಕೊಡಬೇಕೆಂದು ವಾದ ಮಾಡಿದ್ದಾರೆ. ಆದರೆ ನಾನು ಹೇಳುವುದಾದರೆ ಬಹಳಮಟ್ಟಿಗೆ ಬಹಳ ಕಳಕಳಿಯಿಂದ ತಮ್ಮಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ—ಅದೇನೆಂದರೆ, ಸರ್ಕಾರದವರು ಈ ವಿಚಾರದಲ್ಲಿ ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸಿಲ್ಲ ಎಂದು ಹೇಳಬೇಕಾಗಿದೆ. ಕೆಲವರು ಇಂಥ ಒಂದು ಅಪಾದನೆಯನ್ನು ಸರ್ಕಾರದವರ ಮೇಲೆ ಇಟ್ಟಿದ್ದಾರೆ. ಆದುದರಿಂದ ನಾನು ಈ ವಿಚಾರದಲ್ಲಿ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ಅರಿಕೆಮಾಡಿಕೊಳ್ಳುವುದೇನೆಂದರೆ—ಕಳೆದ 20 ವರ್ಷಗಳಿಂದ ಹರಿಜನರಿಗೆ ಉಳಲು ಎಷ್ಟೋ ಭೂಮಿಗಳನ್ನು ಕೊಟ್ಟಿದ್ದಾಗಿದೆ. ಆದರೆ ಅದರಲ್ಲಿ

ಕೇವಲ ಯಾರು ದಕ್ಷತೆಯನ್ನು ಇಟ್ಟುಕೊಂಡಿದ್ದರೋ ಅಂಥವರು ಮಾತ್ರ ಆ ಭೂಮಿಗಳನ್ನು ಉಳಿಸಿಕೊಂಡಿದ್ದಾರೆ. ಇನ್ನುಳಿದವರೇನಿದ್ದಾರೆ ಅವರೆಲ್ಲಾ ತಮಗೆ ಕೊಡಲಾಗಿದ್ದ ಭೂಮಿಯನ್ನು ಪರರಿಗೆ ಮಾರಾಟ ಮಾಡಿಕೊಂಡಿದ್ದಾರೆ. ಆದಕಾರಣ ಮಾನ್ಯಮಂತ್ರಿಗಳು ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಇನ್ನು ಮುಂದೆ ಹರಿಜನರು ಯಾರಿಗೂ ಭೂಮಿಯನ್ನು ಕೊಡಬಾರದೆಂದು ತಿಳುವಳಿಕೆಯನ್ನು ಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಹಾಗೆ ಸರ್ಕಾರದವರಿಗೆ ಭೂಮಿಯನ್ನು ಅವರಿಗೆ ಕೊಡಲೇಬೇಕು ಅನ್ನುವುದಾಗಿದ್ದರೆ ಅವರು ಕೊಡತಕ್ಕ ಆ ಭೂಮಿಯೇನಿದೆ ಅದನ್ನು ಬುಲ್‌ಡೋಜರ್ ಹೊಡೆಸಿ ಸಮಮಾಡಿ ಅದನ್ನು ವ್ಯವಸಾಯಕ್ಕೆ ಉತ್ತಮಗೊಳಿಸಿ ಅನಂತರ ಅವರಿಗೆ ಬೇಸಾಯಕ್ಕೆ ಬೇಕಾದ ಎತ್ತುಗಳು, ಬಿತ್ತನೆ ಬೀಜ ಮತ್ತು ಗೊಬ್ಬರ ಇವುಗಳನ್ನೆಲ್ಲಾ ಒದಗಿಸುವುದಾಗಿದ್ದರೆ ನನ್ನ ಅಭ್ಯಂತರವಿಲ್ಲ. ಭೂಮಿಯನ್ನು ಕೊಡುವುದಾದರೆ ನಾನು ಹೇಳಿದ ಕೆಲಸಗಳನ್ನೆಲ್ಲಾ ಮಾಡಿಸಿಕೊಟ್ಟರೆ ಅವರು ಆ ಭೂಮಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ನಮ್ಮ ಆರ್ಥಿಕ ಸಚಿವರು ಹಿಟ್ಟು ಇದ್ದಷ್ಟು ರೊಟ್ಟಿಯನ್ನು ಮಾಡಿದ್ದಾರೆ. ಹಾಗೆ ಅವರು ಮಾಡಿಟ್ಟಿರತಕ್ಕ ರೊಟ್ಟಿಯಾದರೋ ಬಹಳ ಶುಚಿಯಾದದ್ದು, ರುಚಿಕರವಾದದ್ದು ಮತ್ತು ಸುಂದರವಾದದ್ದು ಎಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಇ. ಪುಂಡಲೀಕಪ್ಪ (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, 1968–69ನೆಯ ಸಾಲಿನ ಬಡ್ಜೆಟನ್ನು ನಾನು ಸ್ವಾಗತಿಸುತ್ತ ಕೆಲವು ಸೂಚನೆಗಳನ್ನು ಸರ್ಕಾರಕ್ಕೆ ಕೊಡಬಯಸುತ್ತೇನೆ.

ಮೊಟ್ಟಮೊದಲನೆಯದಾಗಿ ನಾನು ಭೂಕಂದಾಯದ ವಿಷಯವನ್ನು ಹೇಳಬಯಸುತ್ತೇನೆ. ಈ ಹಿಂದೆ 1964ರಲ್ಲಿ ಭೂಕಂದಾಯದ ಬಗ್ಗೆ ಸರ್ಕಾರದವರು ರೀಸರ್ವೆ ಸೆಟಲ್‌ಮೆಂಟ್ ಎಂಬುದಾಗಿ ಮಾಡಿಸಿದರೋ ಆ ತರುವಾಯ ನಮ್ಮ ಹೈದ್ರಾಬಾದ್ ಕರ್ಣಾಟಕಕ್ಕೆ ಬಹಳ ಅನ್ಯಾಯವಾಗಿದೆ. ಕೆಲವು ತಾಲ್ಲೂಕುಗಳಲ್ಲಂತೂ (ನನ್ನ ಕ್ಷೇತ್ರದಲ್ಲಿ) ಆ ಅನ್ಯಾಯವನ್ನು ಹೇಳತೀರದಾಗಿದೆ. ಆದುದರಿಂದ ಈಗೇನು ಆ ರೀಸರ್ವೆ ಸೆಟಲ್‌ಮೆಂಟ್ ಎಂದು ಮಾಡಿದ್ದಾರೋ ಅದನ್ನು ಪುನರ್ ಚೌಕಾಸಿ ಮಾಡಿ ಹಾಲಿ ಭೂಮಿಯನ್ನು ಏನು ಅವರು 1—2—3 ಮತ್ತು 4ನೇ ತರಗತಿಗಳೆಂದು ವಿಭಾಗ ಮಾಡಿದ್ದಾರೋ ಹಾಗೆ ದರ್ಜೆಗಳನ್ನು ವಿಂಗಡಿಸುವುದರಲ್ಲಿ ಅವರು ಮೊದಲನೆಯ ದರ್ಜೆಯ ಭೂಮಿ ಎಂದು ಯಾವುದನ್ನು ವಿಂಗಡಿಸಿದ್ದಾರೋ ಅದು ಸರಿಯಲ್ಲ. ಆ ಭೂಮಿಯಲ್ಲಿ 16 ಆಣೆ ಪಿಂಡ (ಸಾರ) ಇದೆ ಎಂತ ಹೇಳಿ ಅದನ್ನು ಒಂದನೇ ದರ್ಜೆ ಭೂಮಿಯೆಂದು ತೀರ್ಮಾನ ಮಾಡಿದ್ದಾರೆ. ಆದರೆ ಅದರಲ್ಲಿ 16 ಆಣೆ ಪಿಂಡ (ಸಾರ)ವಿಲ್ಲ. ಮೇಲಾಗಿ ಅಲ್ಲಿ ಅನೇಕ ವರ್ಷಗಳಿಂದ ಮಳೆ ಬಾರದೆ ಪೀಕು ಸರಿಯಾಗಿ ಆಗಿಲ್ಲ. ಆದಾಗ್ಯೂ ಅಂಥ ಭೂಮಿಗಳನ್ನು ಒಂದನೇ ದರ್ಜೆ ಭೂಮಿಗಳೆಂದು ಕರೆದು ನೂರು ರೂಪಾಯಿಗಳ ಕಂದಾಯ ಕೊಡುತ್ತಿದ್ದ ಕಡೆ ಈ ದಿವಸ ಆ ಕಂದಾಯವನ್ನು 300–380 ರೂಪಾಯಿಗಳವರೆಗೂ ಏರಿಸಿದ್ದಾರೆ. ಹೀಗಾಗಿ ಅಲ್ಲಿಯ ರೈತರಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ಮಾನ್ಯ ರೆವಿನ್ಯೂ ಮಂತ್ರಿಗಳು ಅದನ್ನು ಪುನರ್ವಿಮರ್ಶೆ ಮಾಡಿ ಹಿಂದೆ ಅವರು ಯಾವ ಭೂಮಿಯನ್ನು ಒಂದನೇ ದರ್ಜೆಯೆಂದು ವಿಧಾಯಕ ಮಾಡಿದ್ದಾರೋ ಅದನ್ನು ಮೂರನೆ ದರ್ಜೆ ಭೂಮಿಗೆ ಇಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಈ ಗ್ರಾಮಾಧಿಕಾರಿಗಳನ್ನು ಕೆಲವು ದಿವಸಗಳಿಂದಲೂ ಅವರನ್ನು ಕೆಲಸದಿಂದ ತೆಗೆಯುತ್ತೇವೆ—ತೆಗೆಯುತ್ತೇವೆಂದು ಹೇಳುತ್ತಿದ್ದಾಗ್ಯೂ ಅವರನ್ನು ಇಲ್ಲಿಯವರೆಗೂ ಇನ್ನೂ ತೆಗೆದಿಲ್ಲ. ಹೀಗೆ ಹೇಳುವುದಕ್ಕೆ ಪ್ರಾರಂಭಮಾಡಿ 2 ವರ್ಷಗಳ ಮೇಲಾಯಿತು. ಅವರು ಹೇಗೂ ತಮ್ಮನ್ನು ಕೆಲಸದಿಂದ ತೆಗೆಯುತ್ತಾರೆಂದು ಅವರು ನಾವೇಕೆ ಕೆಲಸ ಮಾಡಬೇಕು ಎಂದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹೀಗಾಗಿ ಅತ್ತ ಸರ್ಕಾರಿ ಕೆಲಸವೂ ಸಾಗುತ್ತಿಲ್ಲ, ಇತ್ತ ಜನರ ಕೆಲಸವೂ ಆಗುತ್ತಿಲ್ಲ. ಸಾಮಾನ್ಯವಾಗಿ ವರ್ಷಂಪ್ರತಿ ಜನವರಿ 20ನೇ ತಾರೀಖಿನೊಳಗಾಗಿ ಭೂಕಂದಾಯದ ವಸೂಲಿಯನ್ನು ಮುಗಿಸಬೇಕಾಗಿತ್ತು. ಆದರೆ ಅದಕ್ಕೆ ಬೇಕಾದ ರಿಜಿಸ್ಟರ್ ಕಾಗದ ಪತ್ರಗಳನ್ನೊಂದನ್ನೂ ಅವರು ಸಿದ್ಧಪಡಿಸಿಕೊಂಡಿಲ್ಲ. ಹೀಗಾಗಿ ವಸೂಲಿ ಕೆಲಸ ಆಲಸ್ಯದಿಂದ ಸಾಗಿದೆ. ಇತ್ತೀಚೆಗೆ ರೈತರು ತಮ್ಮ ದವಸಧಾನ್ಯಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ತಮಗೆ ಅಗತ್ಯವಾಗಿದ್ದ ಬಟ್ಟೆಬರೆಗಳನ್ನು ಕೊಂಡುಬಿಟ್ಟಿದ್ದಾರೆ. ಆದುದರಿಂದ ಆ ಗ್ರಾಮಾಧಿಕಾರಿಗಳನ್ನು ತೀವ್ರಗತಿಯಿಂದ ತೆಗೆಯಬೇಕೆಂದು ನಾನು ಮಂತ್ರಿಗಳಲ್ಲಿ ವಿನಂತಿಮಾಡಿಕೊಳುತ್ತೇನೆ.

ಇನ್ನು ರೈತಾಪಿ ಜನರಲ್ಲಿ ಒಂದು ದೊಡ್ಡ ತೊಂದರೆ ಇದೆ. ಅವರು ಈ ದಿವಸ ಯಾವ ತಾಲ್ಲೂಕ್ ಕಛೇರಿ ಅಥವಾ ಒಂದು ಯಾವ ಆಫೀಸಿಗೆ ಹೋದರು ಅವರ ಕೆಲಸಗಳು ಆಗುತ್ತಿಲ್ಲ.

(ಶ್ರೀ ಇ. ಪುಂಡಲೀಕಪ್ಪ)

ಅವರು ತಮ್ಮ ಜೊತೆಯಲ್ಲಿ ತಾಲ್ಲೂಕ್ ಬೋರ್ಡಿನ ಅಧ್ಯಕ್ಷರನ್ನೂ ಅಥವಾ ಒಬ್ಬ ಎಂ. ಎಲ್. ಎ. ಅನ್ನೂ ಜೊತೆಯಲ್ಲಿ ಇಟ್ಟುಕೊಂಡು ಹೋಗದಿದ್ದರೆ ಅವರಿಗೆ ಅವರ ಕೆಲಸಗಳು ಆಗುತ್ತಿಲ್ಲಾ ಗತ್ಯಂತರವಿಲ್ಲ ಅವರ ಕೆಲಸಗಳಾಗಬೇಕಾದರೆ ಸ್ಥಳೀಯ ಕಛೇರಿಯಲ್ಲಿ ಕ್ಲಾರ್ಕ್‌ನನ್ನು ಹಿಡಿದುಕೊಂಡು ತಹಃಶೀಲ್ದಾರ್‌ರವರೆಗೂ ಸಂಭಾವನೆ ಕೊಡಬೇಕಾಗುತ್ತದೆ. ಆದುದರಿಂದ ರೈತರ ಕೆಲಸಗಳನ್ನು ತೀವ್ರಗತಿಯಿಂದ ಮಾಡಿಕೊಡುವಂತೆ ಸ್ಥಳೀಯ ಅಧಿಕಾರಿಗಳೆಲ್ಲರಿಗೂ ಸರ್ಕಾರದವರು ಒಂದು ಕಟ್ಟುನಿಟ್ಟಾಗಿ ಆದೇಶ ಕೊಡಬೇಕೆಂದು ಎಚ್ಚರಿಕೆ ಕೊಡಬಯಸುತ್ತೇನೆ ಇಲ್ಲವಾದರೆ ಈಗ ನಡೆಯುತ್ತಿರುವ ಅನ್ಯಾಯವನ್ನು ಪ್ರತಿಭಟಿಸಲು ಜನರು ತಯಾರಾಗಬಹುದು. ಸರ್ಕಾರದ ನೌಕರದಾರರು ರೈತರುಗಳಲ್ಲಿ ಅವರು ದೊಡ್ಡವರಾಗಲೀ ಸಣ್ಣವರಾಗಲಿ ಕಚೇರಿಗಳಿಗೆ ಹೋದರೆ ಅವರನ್ನು ಕೀಳುದೃಷ್ಟಿಯಿಂದ ನೋಡಬಾರದು. ಇದನ್ನು ತೆಗೆಯಬೇಕು ಅವರನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಸರ್ಕಾರದವರು ಅಧಿಕಾರಿಗಳಿಗೆ ಆದೇಶವನ್ನು ಕೊಡಬೇಕೆಂಬು ದಾಗಿ ನಮ್ಮ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದಲ್ಲದೆ ಅನೇಕ ಕಡೆಗಳಲ್ಲಿ ರೆವಿನ್ಯೂ ಇಲಾಖೆಯಲ್ಲಿ ಸ್ಥಳೀಯವರೇ ಅಧಿಕಾರಿಗಳಿರುವುದರಿಂದ ಆ ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗಾಯಿಸಬೇಕು. ಇಲ್ಲದಿದ್ದರೆ ಅವರು 8-10 ವರ್ಷಗಳು ಅಲ್ಲಿಯೇ ಇದ್ದು ರಾಜಕೀಯದೊಳಗೆ ಭಾಗವಹಿಸುವುದರಿಂದ ಹೆಚ್ಚಿನ ಹಾನಿಯಾಗುತ್ತದೆ. ಅಂತಹವರನ್ನೆಲ್ಲಾ ಸ್ಥಳದಲ್ಲಿಯೇ ಇರತಕ್ಕ ಇಲಾಖೆಗಳಲ್ಲಿ ನೇಮಿಸಬಾರದು. ಆಯಾ ತಾಲ್ಲೂಕಿನವರು ಆಯಾ ತಾಲ್ಲೂಕಿಗೆ ವರ್ಗಾಯಿಸದಂತೆ ವ್ಯವಸ್ಥೆ ಮಾಡಬೇಕು. ಜಿಲ್ಲೆಯವರನ್ನು ಬೇರೆ ಜಿಲ್ಲೆಗಳಿಗೆ ಹಾಕಬೇಕೆಂದು ನನ್ನ ಸೂಚನೆ.

6-30 P.M.

ಇನ್ನೊಂದು ಶಿಕ್ಷಣ ಖಾತೆಯ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಸಾಕಷ್ಟು ಪ್ರಗತಿ ಅನೇಕ ತಾಲ್ಲೂಕುಗಳಲ್ಲಿ ಆಗಿದ್ದರೂ ಕೆಲವು ತಾಲ್ಲೂಕುಗಳನ್ನು ಕಡೆಗಣಿಸಲಾಗಿದೆ. ನನ್ನ ಕ್ಷೇತ್ರವಾದ ಕುಷ್ಟಗಿ ತಾಲ್ಲೂಕಿನಲ್ಲಿ ಸರ್ಕಾರದ ಹೈಸ್ಕೂಲು ಕಟ್ಟಡ ಇಲ್ಲ. ಅನೇಕ ಸ್ಥಳಗಳಲ್ಲಿ ಹೈಸ್ಕೂಲು ಬಿಲ್ಡಿಂಗುಗಳಾಗಿವೆ. ಆದ್ದರಿಂದ ಶಿಕ್ಷಣಖಾತೆ ಮಂತ್ರಿಗಳಿಗೂ ಮತ್ತು ಲೋಕೋಪಯೋಗಿ ಶಾಖಾ ಸಚಿವರಿಗೂ ವಿನಂತಿ ಮಾಡಿಕೊಳ್ಳುವುದೇನೆಂದರೆ ನನ್ನ ತಾಲ್ಲೂಕು ಸ್ಥಳವಾದ ಕುಷ್ಟಗಿಯಲ್ಲಿ ಒಂದು ಹೈಸ್ಕೂಲ್ ಬಿಲ್ಡಿಂಗ್ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಪಿ.ಡಬ್ಲ್ಯು.ಡಿ. ಖಾತೆಯ ಬಗ್ಗೆ ಬಡ್ಜೆಟ್ಟಿನಲ್ಲಿ ನೋಡಿದರೆ ನಿಜವಾಗಿ ಹೊಸದಾಗಿ ನಮ್ಮ ಕ್ಷೇತ್ರಕ್ಕೆ ಒಂದು ಕೆಲಸವನ್ನು ಸಹ ಆ ಖಾತೆಯವರು ಮಾಡಿಲ್ಲ. ಏಕೆಂದರೆ ಮೊದಲಿನಿಂದಲೂ ಕಡೆಗಾಣಿಸಿದಂಥ ಪ್ರದೇಶವೆಂದು ಆ ರೀತಿ ಮಾಡಬಾರದು. ನಮ್ಮ ಮಂತ್ರಿಗಳು ಯಾರೇ ಆಗಲಿ, ಆರ್ಥಿಕ ಮಂತ್ರಿಗಳಾಗಲೀ ಹಿಂದುಳಿದ ಪ್ರದೇಶ ಅಂದರೆ ಕಡೆಗಾಣಿಸಿದಂಥ ಪ್ರದೇಶವೆಂದು ಯಾವಾಗಲೂ ನೋಡೋಣ, ಮಾಡೋಣವೆಂದು ಹೇಳದೆ ಅಲಕ್ಷ್ಯಮಾಡಬಾರದು. ಆ ಪ್ರದೇಶಗಳಲ್ಲಿ ಸರಿಯಾದ ಕೆಲಸಗಳನ್ನು ತೆಗೆದುಕೊಳ್ಳಬೇಕು. ದೋಪೇಹಾಳ, ತಾವರಗೆರೆ, ಹನುಮಸಾಗರ ಗಳಲ್ಲಿ ಈ ರಸ್ತೆ ಕೆಲಸಗಳು ನಡೆದು ಎಷ್ಟೋ ವರ್ಷಗಳಾದುವು. ಇವತ್ತಿನವರೆಗೂ ಪೂರ್ತಿ ಕೆಲಸ ಮುಗಿದಿರುವುದಿಲ್ಲ. ಆದ್ದರಿಂದ ಇನ್ನು ಮುಂದೆ ಲೋಕೋಪಯೋಗಿ ಶಾಖೆಯವರು ತೀವ್ರಗತಿ ಯಿಂದ ಕೆಲಸಕಾರ್ಯಗಳನ್ನು ಮಾಡಬೇಕು. ನಮ್ಮಲ್ಲಿ ನಿಜವಾಗಿ ಎರಡು ಡ್ಯಾಂಗಳನ್ನು ಕಟ್ಟುತ್ತಿರುವರು. ಆದರೆ ಆ ಡ್ಯಾಂಗಳಿಂದ ನಮ್ಮ ತಾಲ್ಲೂಕಿಗೆ ನೀರಾವರಿ ಆಗುವುದಿಲ್ಲ. ಈ ಕೆಳಗೆ ಕಾಣಿಸಿದ ಡ್ಯಾಂ ಕೆಲಸಗಳನ್ನು ತೆಗೆದುಕೊಂಡಲ್ಲಿ ಅದರಿಂದ ನಮ್ಮ ತಾಲ್ಲೂಕಿಗೆ ನೀರಾವರಿ ಆಗುತ್ತದೆ. ಅಂದರೆ, ವಿರೂಪಾಕ್ಷಪುರ, ಹುಲಿಯಾಪುರ ಡ್ಯಾಂಗಳ ಇವತ್ತಿನವರೆಗೂ ತೆಗೆದು ಕೊಂಡಿಲ್ಲ. ಅದರ ಕೆಲಸಕಾರ್ಯಗಳನ್ನು ಇನ್ನೂ ಪ್ರಾರಂಭಮಾಡಿಲ್ಲ. ಆದ್ದರಿಂದ ನಮ್ಮ ಕ್ಷೇತ್ರದಲ್ಲಿ ಎರಡು ಡ್ಯಾಂಗಳನ್ನು ಕಟ್ಟಿಸಿಕೊಟ್ಟರೆ ಅವೆರಡರಿಂದಲೂ ಹೆಚ್ಚಿನ ನೀರಾವರಿ ರೈತರಿಗೆ ಅನುಕೂಲ ವಾಗುತ್ತದೆ. ಅದಕ್ಕಾಗಿ ಆ ಡ್ಯಾಂಗಳನ್ನು ಕೂಡಲೇ ಕಟ್ಟಿಸಿಕೊಟ್ಟು ಅದರ ಬಗ್ಗೆ ತೀವ್ರಗತಿ ಯಿಂದ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಕ್ಷೇತ್ರದಲ್ಲಿ 170 ಹಳ್ಳಿಗಳಿವೆ. ಕೇವಲ 10-11 ಹಳ್ಳಿಗಳಿಗೆ ಮಾತ್ರ ದೀಪದ ವ್ಯವಸ್ಥೆಮಾಡಿದ್ದಾರೆ. ಇನ್ನೂ ತೀವ್ರಗತಿಯಿಂದ ಹೆಚ್ಚಿನ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಬೇಕು. ಮತ್ತೆ ಹೆಚ್ಚಿನ ಹಳ್ಳಿಗಳಿಗೆ ದೀಪ ಮುಟ್ಟಿಸುವ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿ ಕೊಳ್ಳುತ್ತೇನೆ.

ಇನ್ನೊಂದು ವಿಷಯ. ನಾನು ಅಧ್ಯಕ್ಷರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಅಧಿವೇಶನದಲ್ಲಿ ನಾನು ಯಾವಾಗಲೂ ಒಂದೇಸಾರಿ ಮಾತನಾಡುವುದು. ದಯವಿಟ್ಟು ನನಗೆ ಇನ್ನೂ ಐದು ನಿಮಿಷಗಳ ಕಾಲವನ್ನು ಹೆಚ್ಚಿಗೆ ಕೊಡಬೇಕೆಂದು ನಾನು ತಮ್ಮನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಸದಸ್ಯರ ಕ್ಷೇತ್ರದ ವಿಷಯದಲ್ಲಿ ಮುಂದೆ ಬೇಡಿಕೆಗಳು ಬಂದಾಗ ಮಾತನಾಡ ಬಹುದು. ಈಗ ಬಡ್ಜೆಟ್ ವಿಷಯವಾಗಿ ಮಾತನಾಡಲಿ.

ಶ್ರೀ ಇ. ಪುಂಡಲೀಕಪ್ಪ.—ವ್ಯವಸಾಯದ ಬಗ್ಗೆ ಹೇಳಬೇಕೆಂದರೆ; ಪ್ರತಿಯೊಂದು ಬ್ಲಾಕಿನಲ್ಲಿ ಕ್ಷೇತ್ರದ ಮಟ್ಟದಲ್ಲಿ ಇಬ್ಬರು ಮೂವರು ಅಧಿಕಾರಿಗಳು ಮಾತ್ರ ನಮ್ಮಲ್ಲಿ ಇರುತ್ತಾರೆ. ಅವರು ಸರಿಯಾಗಿ ಕೆಲಸ ಮಾಡುವುದಿಲ್ಲ. ತಿಂಗಳಿಗೆ 20 ದಿವಸಗಳಾದರೂ ಹಳ್ಳಿಗಳಲ್ಲಿ ಕ್ಯಾಂಪ್ ಮಾಡಿ ಹಳ್ಳಿಗಳ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಬೇಕೆಂದು ನಾನು ಸರ್ಕಾರದವರಿಗೆ ವಿನಂತಿ ಮಾಡುತ್ತೇನೆ.

ಇನ್ನು ನಮ್ಮ ಕ್ಷೇತ್ರದ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಮಾಡಬೇಕು. ಮತ್ತೆ ಸಹ ಕಾರಿ ರಂಗದಲ್ಲಿ ಚೆನ್ನಾಗಿ ಕೆಲಸಕಾರ್ಯಗಳು ನಡೆದಿಲ್ಲವೆಂದು ವಿರೋಧಿ ಪಾರ್ಟಿಯವರು ಹೇಳುತ್ತಾರೆ. ಅಂದಮೇಲೆ ಸಹಕಾರಿ ರಂಗದಲ್ಲಿ ಕಾಂಗ್ರೆಸ್ ಮತ್ತು ನಾನ್ ಕಾಂಗ್ರೆಸ್ ಎಂದು ಅಧಿಕಾರಿ ಗಳಿದ್ದಾರೆ. ನಾವೂ ಅವರೂ ಕೂಡಿ ಸಹಕರಿಸಿದರೇನೇ ಯಾವುದಾದರೂ ಕೆಲಸಗಳಾಗುತ್ತದೆ. ಇದನ್ನು ಬಿಟ್ಟು ವಿರೋಧಪಕ್ಷಗಳು ಸಹಕರಿಸದೇ ಚಳುವಳಿ ಮಾಡುತ್ತಿದ್ದರೆ ಹೇಗೆ? ಯಾವುದರಿಂದ ಜನರಿಗೆ ಅನುಕೂಲವಾಗುತ್ತದೋ ಅಂತಹ ಚಳುವಳಿಯನ್ನು ಮಾಡಬೇಕು. ಸಹಕಾರಿ ಚಳುವಳಿ ಯನ್ನು ಮಾಡುವುದರಿಂದ ಜನರಿಗೆ ಹೆಚ್ಚು ಪ್ರಯೋಜನವಾಗಬೇಕು. ನಮ್ಮಲ್ಲಿ ಸಹಕಾರಿ ಪ್ರದೇಶ ಯೂನಿಯನ್ಸ್ ಮತ್ತು ಜಿಲ್ಲಾ ಯೂನಿಯನ್ಸ್ ಇವೆ. ಅವುಗಳ ಮುಖಾಂತರ ಮಾತ್ರ ಚಳುವಳಿ ನಡೆಸಬೇಕು. ಅದಕ್ಕಾಗಿ ಸರ್ಕಾರದವರು ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕು. ಹೆಚ್ಚಿಗೆ ಹಣ ಸಹಾಯ ಮಾಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ರಾಯಚೂರಿನಲ್ಲಿ ನೂಲಿನ ಗಿರಣಿ ಸ್ಥಾಪನೆಯಾಗಿದೆ. ಅದಕ್ಕೆ ಸರ್ಕಾರದಿಂದ ಕೇವಲ ಷೇರ ಹಣ ಮಾತ್ರ ಸಿಕ್ಕಿದೆ. ಇದಲ್ಲದೆ ಇನ್ನೂ ಹೆಚ್ಚಿನ ಹಣ ಕೊಟ್ಟು ನಮ್ಮ ಜಿಲ್ಲೆಯ ಕೈಗಾರಿಕೆ ಬಗ್ಗೆ ಹೆಚ್ಚಿನ ಅನುಕೂಲಗಳನ್ನು ಸರ್ಕಾರದವರು ಕೊಡಬೇಕೆಂದು ನಮ್ಮ ಸರ್ಕಾರಕ್ಕೆ ನಾನು ವಿನಂತಿಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಒಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಕ್ಷೇತ್ರ ಬಹಳ ಹಿಂದುಳಿದಂಥ ಪ್ರದೇಶವಾಗಿರುವುದರಿಂದ ಎಲ್ಲಾ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಹೆಚ್ಚು ಹೆಚ್ಚಿಗೆ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ನನಗೆ ಮಾನ್ಯ ಸಭಾಧ್ಯಕ್ಷರು ಈ ಸಭೆಯಲ್ಲಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶ ವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri DIGAMBARA RAO B. KALMANKAR (Aland).—While opposing this budget, I want to make some observations on the budget, presented by the Hon'ble Minister for Finance. Now, it is said that the budget is a surplus budget, but it has been pointed out by the Hon'ble Member Mr. M. Y. Ghorpade that it is not a surplus budget, it is a deficit budget. But the deficit thatwas pointed out by Hon'ble Member Mr. Ghorpade is to the extent of 24 crores. But my submission is that the dificit is not only to the extent of 24 crores but it is to the extent of 40 crores. Now I want to point out some figures. In the budget, it has been said that the revenue is 194.74 crores and the expenditure is said to be about 182.76 crores and here it is shown that there is a surplus of 11·98 crores. Now, out of this expenditure of 182.76 crores, the outlay for plan is about 23.75 crores. This is the plan outlay. If

(SRI DIGAMBARA RAO B. KALMANKAR)

that is deducted from 182.76 crores, then what remains is only 159.01 crores, and the revenue expenditure that is going to be mad e i as follows :—

(1) 4.97 is for tax collection ;

(2) 38.86 towards debt Services ;

(3) 16.34 crores towards Administrative Services ;

(4) 83.35 crores towards Social and Developmental Services ;

(5) 26.02 crores towards Public Works ; Electricity and Irrigation ;

(6) 3.27 crores towards Pension ;

(7) 6.70 crores towards Forest.

The total of all this comes to about 174 crores 15 lakhs. That means, the budget provision is only 159.01 crores and that is to say, here there is a deficit of 15.50 crores. So, this deficit plus the deficit on hand at the opening, as shown, is to the order of 13.28 crores. Then it is admitted that 8 crores of rupees is going to be given towards Dearness Allowances as recommended by the various Commissions. If that is added, then the opening balance of 13.28 crores and then there is the deficit of 15 crores that we find here. When that 23 crores which is for plan outlay and if that is deducted then the total deficit will come to about 36.78 crores. So, my submission is even the figures admitted by Mr. Ghorpade are not correct, but the total deficit will be to the extent of Rs. 36.78 crores. It will be seen at the time of the next budget also. Besides this, there are other transfers made.

The loans that are being taken from the Centre are also mounting up. In order to have control over loans which are increasing as is seen from the figures, there is a provision in the Constitution. If grants are given, they are most welcome. But the loans that we are borrowing are becoming more and more burdensome and we are paying very heavy interest and we have to pay heavy sums towards loan repayment. Out of Rs. 36 crores that we are taking as loans, about Rs. 32 crores are to be spent for repayment. So in order to have control over these loans, there is an article in the Constitution. Article 293 says :

> (1) Subject to the provisions of this article, the executive power of a State extends to borrowing within the territory of India upon the security of the Consolidated Fund of the State within such limits, if any, as may from time to time be fixed by the Legislature of such State by law and to the giving of guarantees within such limits, if any, as may be fixed."

So, this legislature has got ample powers to make legislation so as to limit borrowings that are being resorted to by the Government. That is the only effective way whereby we can limit the borrowings which are

being squandered on various plans but which are not handled with necessary care and economy as is seen from various reports submitted by the Public Accounts Committee. At the outset, I have said that it is not common man's budget. It is also hinted in this Budget that if no assistance is forthcoming from the Centre to meet the expenses of dearness allowance that is to be paid which is about Rs. 8 crores, in that case we have to resort to taxation. That means, already overburdened common man is also going to be taxed to the extent of Rs. 8 crores. That itself will show how jugglery is made in presenting the budget as a surplus budget whereas in fact, it is not a surplus budget, it is a deficit budget to the extent of Rs. 40 crores. It is said that there is recession and also inflation at the same time. I want to refer to page 8-9 of the Budget speech wherein it is said :

> "I am happy to point out that there has been significant increase in production capacities in most of the industries, notably in the major industries such as Textiles, Sugar, Cement, Paper, Machine Tools and Chemicals, though some may have been temporarily affected by recession."

I disagree with this view. At page 11 it has been admitted that there was a set back to sugar production due to lack of sugarcane and many of the sugar factories will start full production in the coming season. The stage of recession will come only when there is over-production and that production is not being consumed or there is no capacity for consumption, there is less demand and there is no supply. That is not the case in our industries which are either in the Co-operative sector or Government-managed industries. Take for example MSK Mills. There was no proper production nor it can be said there is recession. On account of top heavy administration, mismanagement, indifference and favouritism, that particular mill became defunct. Similarly, it can be said regarding paper mills and sugar factories. They have suffered because of mismanagement and dearth of so many things. Still it is said there is recession. Due to various factors, there has not been proper production. So, the question of recession does not arise. These various terms are used very loosely, and not on the basis of actual fact. Now, regarding administration, they had incurred Rs. 15 crores last year, but it has increased to Rs. 16 crores. In certain districts, there are duplicate posts of Assistant Directors and Deputy Directors and they are doing the same work. They only collect data. They are superfluous and they can be abolished. I am very glad this year, for Upper Krishna Project a sum of Rs. 50 lakhs had been provided. But what we find is out of that Rs. 23 lakhs are spent on administration. For actual work, there is very little amount. Administration is consuming much much of our funds, I am glad that one project in Bidar District has been taken up and that is Karanja project, but the amount earmarked for it is very much less. There is no other major project in Hyderabad Karnatak. For various reasons, some projects are not taken. In Gulberga District, there are no irrigation works. Even as it is admitted,

(SRI DIGAMBARA RAO B. KALMAKAR)

very little amount is earmarked for minor irrigation. That is also defective. In view of that, our production is less. Regarding law and order, I think whatever has been done by the Police is not proper and they do not deserve to be spent that much. Law and Order in our State has been deteriorating to such an extent that the security of property and life has become very difficult.

Regarding medicine and health, I am very sorry that not much provision is made for that also in the Budget.

Of course for Education, there is provision in this Budget. What type of education we are getting, that also is doubtful. The other day, it was pointedly shown in the Upper House what type of books are being prescribed to be supplied to libraries for boys and girls and the quality of education they are getting. That also requires to be improved.

Regarding Survey and Settlement, the Hon'ble Member Sri Pundalik has already said that there is a lot of injustice done and it requires to be improved.

† ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ).—ಸನ್ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ಅರ್ಥ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ 1968—69ನೇ ಸಾಲಿನ ಆಯವ್ಯಯ ಅಂದಾಜು ಏನಿದೆ, ಅದರಲ್ಲಿ 11.98 ಕೋಟಿ ರೂಪಾಯಿಗಳ ರೆವಿನ್ಯೂ ಹೆಚ್ಚುವರಿ ಕಂಡುಬರುತ್ತದೆ. ಇರುವಂಥ ಪರಿಸ್ಥಿತಿಯಲ್ಲಿ ಅತ್ಯುತ್ತಮವಾದಂಥ ಹಾಗೂ ರಾಜ್ಯದ ಬಗ್ಗೆ ಪ್ರಾಮಾಣಿಕವಾದಂಥ ವಿಚಾರಗಳನ್ನು ನೀಡಿರುವ ಈ ಬಡ್ಜೆಟ್ ಭಾಷಣವನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. ಮುಖ್ಯವಾಗಿ ಈ ಭಾಷಣದ ಮೇಲೆ ಬಂದಂಥ ಟೀಕೆಗಳನ್ನು ಗಮನಿಸಿದರೆ, ಸರ್ಕಾರದವರು ಸಿಕ್ಕಾಪಟ್ಟೆ ಖರ್ಚು ಮಾಡುತ್ತಿದ್ದಾರೆ, ಸಾಲವನ್ನು ವಿಪರೀತವಾಗಿ ಮಾಡುತ್ತಿದ್ದಾರೆ. ಮನಸ್ಸು ಬಂದಂತೆ ಆಡಳಿತವನ್ನು ನಡೆಸುತ್ತಿದ್ದಾರೆ ಎನ್ನುವಂಥ ಆರೋಪವನ್ನು ನಾವು ಅನೇಕ ಸಲ ಕೇಳಿದ್ದೇವೆ. ರಾಜ್ಯದ ಆದಾಯ ಕಳೆದ ಹತ್ತು ವರ್ಷಗಳಲ್ಲಿ ಹೆಚ್ಚಿದೆ. ಉದಾಹರಣೆಗೆ ಹೇಳುವುದಾದರೆ, 1957-58ರಲ್ಲಿ 58.15 ಕೋಟಿ ರೂಪಾಯಿಯಷ್ಟಿದ್ದ ರಾಜ್ಯದಾಯವು 1968—69ರಲ್ಲಿ 194.74 ಕೋಟಿ ರೂಪಾಯಿಗೇರಿ, ಸೇಕಡ 235ರಷ್ಟು ಹೆಚ್ಚುವುದೆಂದು ಬಡ್ಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಅದೇ ರೀತಿ ರಾಜ್ಯದ ವೆಚ್ಚವೂ ಹೆಚ್ಚಿದೆ. ಅಂದರೆ 100ಕ್ಕೆ 218ರಷ್ಟು ರಾಜ್ಯದ ವೆಚ್ಚ ಹೆಚ್ಚಿದೆ. ಅಂದರೆ 1957-58ರಲ್ಲಿ 69.91 ಕೋಟಿ ರೂಪಾಯಿಗಳ ಖರ್ಚು ಇದ್ದರೆ 1968-69ರಲ್ಲಿ 221.81 ಕೋಟಿ ರೂಪಾಯಿಗಳಿಗೇರಿದೆ, ಇದರಂತೆ ರಾಜ್ಯದ ಸಾಲವೂ 100ಕ್ಕೆ 263ರಷ್ಟು ಹೆಚ್ಚಾಗಿದೆ. ನಮ್ಮ ರಾಜ್ಯದ ಆಸ್ತಿಯೂ ಕೂಡ 100ಕ್ಕೆ 369ರಷ್ಟು ಹೆಚ್ಚಾಗಿದೆ. 1957-58ರಿಂದ 1968-69ರವರೆಗೆ ಇದ್ದ ಪರಿಸ್ಥಿತಿಯನ್ನು ನೋಡುವುದಾದರೆ, ರಾಜ್ಯದ ಬಂಡವಾಳ ಸ್ವತ್ತು 1957-58ರಲ್ಲಿ 115.91 ಕೋಟಿ ರೂಪಾಯಿಗಳಷ್ಟಿದ್ದರೆ, 1967-68ರ ಅಂತ್ಯದ ಹೊತ್ತಿಗೆ 434 96 ಕೋಟಿ ರೂಪಾಯಿಗಳಿಗೇರಿದೆ. ಅಂದರ 100ಕ್ಕೆ 275ರಷು ಹೆಚ್ಚಿದೆ. ಅದೇ ರೀತಿ ಸಾಲಗಳ ಮರುಸಂದಾಯದಿಂದ ಸರ್ಕಾರಕ್ಕೆ ಬರತಕ್ಕ ಹಣ 15.98 ಕೋಟಿ ರೂಪಾಯಿಗಳಿಂದ 142.84 ಕೋಟಿ ರೂಪಾಯಿಗಳಿಗೇರಿ ಸೇಕಡ 794ರಷ್ಟು ಹೆಚ್ಚಿದೆ. ಈ ಅಂಕಿ ಅಂಶಗಳನ್ನು ಹಾಗೂ ಇನ್ನೂ ಹಲವಾರು ಪ್ರಾಮುಖ್ಯವಾದಂಥ ಅಂಕಿಅಂಶಗಳನ್ನು ಯಾವುದೇ ರೀತಿಯಿಂದ ಈ ಸಭೆಗೆ ಮರೆಮಾಚದೆ, ಬಹುಶಃ ಯಾವ ಬಡ್ಜೆಟ್ ಭಾಷಣದಲ್ಲೂ ನೀಡದಿದ್ದ ಅಂಕಿಅಂಶಗಳನ್ನು ಈ ಸಾರಿಯ ಬಡ್ಜೆಟ್ ಭಾಷಣದಲ್ಲಿ ಕೊಟ್ಟಿದ್ದಾರೆ. ರಾಜ್ಯದ ಆರ್ಥಿಕ ಸಚಿವರು ಈ ಸಭೆಯ ಮುಂದೆ ಇಟ್ಟಿರುವ ಬಡ್ಜೆಟ್ ಭಾಷಣದಲ್ಲಿ ಕಾಣುವುದೆಂದರೆ, ರಾಜ್ಯದ ವೆಚ್ಚ ಎಷ್ಟು ಹೆಚ್ಚಾಗಿದೆಯೋ ಅದಕ್ಕಿಂತ ಆದಾಯ ಪ್ರಮಾಣವೂ ಸಹ ಹೆಚ್ಚಾಗಿದೆ,

ಮತ್ತು ರಾಜ್ಯದ ಸಾಲ ಎಷ್ಟು ಹೆಚ್ಚಾಗಿದೆಯೋ ಅದಕ್ಕಿಂತ ಹೆಚ್ಚು ಆಸ್ತಿ ಹೆಚ್ಚಾಗಿದೆ. ಇದರ ಬಗ್ಗೆ ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಈ ರೀತಿ ಹೇಳುತ್ತಾರೆ:

Page 40: (Budget speech by the Hon'ble Finance Minister)

> "If one has to have liquid assets proportionate to the debt, it means that no development can be expected. Government of a Welfare State borrows to invest for the benefit of the present and future generations."

ಸರ್ಕಾರದ ಆಸ್ತಿಯ ಬಗ್ಗೆ ಯಾವುದೋ ಒಂದು ರೀತಿಯ ಟೀಕೆಗಳು ಕೇಳಿ ಬಂದವು. ಹರಕು ಮುರುಕು ರಸ್ತೆ, ಸೇತುವೆ ಮುಂತಾದವನ್ನೆಲ್ಲಾ ಸೇರಿಸಿಕೊಂಡು 434 ಕೋಟಿ ರೂಪಾಯಿಗಳ ಆಸ್ತಿಯಿದೆಯೆಂದು ಸರ್ಕಾರದವರು ಹೇಳುತ್ತಿದ್ದಾರೆ ಎಂಬುದಾಗಿ. ಈ ಆಸ್ತಿಯಲ್ಲಿ ರಸ್ತೆಗಳನ್ನಾಗಲೀ, ಕಟ್ಟಡಗಳನ್ನಾಗಲೀ ಸೇರಿಸಿಲ್ಲ. ಮುಖ್ಯವಾಗಿ ಈ ಆಸ್ತಿಯಲ್ಲಿ ಬರತಕ್ಕದ್ದು ಎಂದರೆ: ಪ್ರಾಜೆಕ್ಟ್‌ಗಳು ವಿದ್ಯುಚ್ಛಕ್ತಿ ಪ್ರಾಜೆಕ್ಟ್‌ಗಳು ಮತ್ತು ಇತರೇ ಮುಖ್ಯವಾದಂಥವುಗಳು ಸೇರಿವೆಯೇ ಹೊರತು ಚಿಲ್ಲರೆ ಸಾಮಾನುಗಳ ಲೆಕ್ಕವನ್ನು ಗಣನೆಗೆ ತೆಗೆದುಕೊಂಡಿಲ್ಲ. ಈ ವಿಚಾರವಾಗಿ ಮಾನ್ಯ ಆರ್ಥಿಕ ಮಂತ್ರಿಗಳು ಉತ್ತರ ಕೊಡುವಾಗ ಇನ್ನೂ ಹೆಚ್ಚು ಹೇಳಬಹುದು. ಯಾವ ಒಂದು ದೇಶ ಬಡತನದಲ್ಲಿರುತ್ತದೋ, ಅಲ್ಲಿಯ ಸರ್ಕಾರವೂ ಸಾಲ ಮಾಡಬೇಕಾಗುತ್ತದೆ. ಸಾಲ ಮಾಡದೆ ಒಂದು ದೇಶ ಪ್ರಗತಿ ಸಾಧನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಒಂದು ಗಾದೆ ಇದೆ, ಹುಚ್ಚು ಬಿಡುವವರೆಗೆ ಮದುವೆಯಾಗುವುದಿಲ್ಲ, ಮದುವೆಯಾಗುವವರೆಗೆ ಹುಚ್ಚು ಬಿಡುವುದಿಲ್ಲ ಎಂಬಂತೆ. ನಮ್ಮಲ್ಲಿ ಹಣವಿಲ್ಲವೆಂದು ಕೆಲಸ ಮಾಡದಿರುವುದಕ್ಕೂ ಆಗುವುದಿಲ್ಲ; ಸಾಲ ಮಾಡಿ ಕೆಲಸ ಮಾಡಿಸಿದರೆ ನಾವು ಹೆಚ್ಚಿಗೆ ಉತ್ಪಾದನೆ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂಥ ವಿಷವೃತ್ತಕ್ಕೆ ಯಾವುದೇ ಹಿಂದುಳಿದ ದೇಶಗಳು ಸಿಕ್ಕಿಕೊಳ್ಳುವುದು ಸ್ವಾಭಾವಿಕ. ಆದ್ದರಿಂದ ಕೆಲವೊಂದು ರೀತಿಯ ಖೋತಾ ಬಡ್ಜೆಟ್ ಮೂಲಕವಾಗಲೀ ಮತ್ತು ಹೊರದೇಶಗಳಿಂದ ಸಾಲ ಪಡೆದುಕೊಂಡಾಗಲೀ ಒಂದು ದೇಶದ ಅಭಿವೃದ್ಧಿಯನ್ನು ಸಾಧನೆ ಮಾಡಬೇಕಾಗುತ್ತದೆ. ನಮ್ಮ ರಾಜ್ಯಸರ್ಕಾರದವರು ಕೂಡ ಇದೇ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಈ ಪದ್ಧತಿಯಲ್ಲಿ ಏನಾದರೂ ತಪ್ಪಿದ್ದರೆ, ಈ ಶಾಸನಸಭೆಯಲ್ಲಿರುವ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಕೊಡುವುದು ಅತ್ಯಾವಶ್ಯಕವಾಗಿರುತ್ತದೆ. ಈ ಬಡ್ಜೆಟ್ ಭಾಷಣದಲ್ಲಿ ಪ್ರಾಮಾಣಿಕವಾದಂಥ ಒಂದು ಚಿತ್ರ ನಮಗೆ ಕಾಣುತ್ತಿದೆ. ಇದರಲ್ಲಿ ಹೇಳಿರುವ ಅಂಶಗಳು ಸಾಕಷ್ಟು ತೃಪ್ತಿಕರವಾಗಿಲ್ಲದಿದ್ದರೂ ಕೂಡ ಸ್ವಾಗತಿಸಬೇಕಾದಂಥ ಕೆಲವಾರು ಅಂಶಗಳಿವೆ.

ಇನ್ನು ಮಲೆನಾಡಿನ ಬಗ್ಗೆ ಒಂದು ಸಮಗ್ರವಾದಂಥ ಯೋಜನೆ ಇರಬೇಕೆಂದು ಅನೇಕ ಮಾನ್ಯ ಸದಸ್ಯರುಗಳು ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆ. ಇದರ ವಿಷಯ ಪ್ರತ್ಯೇಕವಾಯಿತು. ಅದರ ಮಲೆನಾಡಿನ ರಸ್ತೆಗಳು ಮತ್ತು ಕೆರೆಗಳು ಮತ್ತು ಇನ್ನಿತರ ಪ್ರಾಮುಖ್ಯವಾದಂಥ ವಿಷಯಗಳ ಬಗ್ಗೆ ಒಂದು ವಿಶೇಷವಾದಂಥ ಗಮನವನ್ನು ಈ ಬಡ್ಜೆಟ್‌ನಲ್ಲಿ ತೋರಿಸಿದಂತೆ ಕಾಣುತ್ತಿಲ್ಲ. ಮಲೆನಾಡು ಪ್ರದೇಶಗಳಲ್ಲಿ ಸಹಸ್ರಾರು ಕೆರೆಗಳಿವೆ. ಇವುಗಳ ಪೈಕಿ ಹೆಚ್ಚಿನವುಗಳಲ್ಲಿ ಹೂಳು ತುಂಬಿದೆ. ಇತ್ತೀಚೆಗೆ ಜಲ ಇರಬೇಕಾದಂಥ ಕೆರೆಗಳಲ್ಲಿ ಕೂಡ ಹೂಳು ತುಂಬಿದೆ. ಆದ್ದರಿಂದ ಈ ಕೆರೆಗಳ ಹೂಳನ್ನು ತೆಗೆಸಿ ತೂಬುಗಳನ್ನು ಸರಿಪಡಿಸಿದರೆ ವ್ಯವಸಾಯಕ್ಕೆ ಅನುಕೂಲವಾಗುತ್ತದೆ. ಮತ್ತೆ ಕೆಲವು ಕೆರೆಗಳ ದಂಡೆಯನ್ನು ಎತ್ತರಿಸಿದರೆ ನೀರು ನಿಲ್ಲುವುದಕ್ಕೆ ಅನುಕೂಲವಾಗುತ್ತದೆ. ಇಷ್ಟು ಹೊರತು ಇನ್ನು ಯಾವುದೇ ರೀತಿಯ ನೀರಾವರಿ ಯೋಜನೆಯನ್ನು ಮಲೆನಾಡಿನಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೊಸ ಕೆರೆಗಳನ್ನು ಕಟ್ಟಿಸುವುದಕ್ಕೆ ಕೂಡ ಆಗುವುದಿಲ್ಲ, ನೀರಾವರಿ ಬಾವಿಗಳನ್ನು ತೆಗೆಸಿದರೂ ಕೂಡ ಯಶಸ್ವಿಯಾಗುವುದಿಲ್ಲ. ಆದ್ದರಿಂದ ಕೆರೆಗಳಲ್ಲಿರುವ ಹೂಳನ್ನು ತೆಗೆಸುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಬೇಕು.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದಂತೆ ಇರುವ ರಸ್ತೆಗಳು ಮತ್ತು ಸೇತುವೆಗಳು, ಲೋಕೋಪಯೋಗಿ ಇಲಾಖೆಗೆ ಸೇರದಿರುವಂತೆ ಇರುವ ರಸ್ತೆಗಳು ಮತ್ತು ಸೇತುವೆಗಳ ರಿಪೇರಿ ಕೆಲಸವನ್ನು ಮತ್ತು ಕೆಲವು ಹೊಸ ಸೇತುವೆಗಳನ್ನು ಮಾಡಿಸಿ ಕೊಡದಿದ್ದರೆ ಅಲ್ಲಿಯ ಜನರಿಗೆ ಕಷ್ಟವಾಗುತ್ತದೆ. ಈ ಬಗ್ಗೆಯಾದರೂ ಸರ್ಕಾರದವರು ವಿಶೇಷವಾದಂಥ ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಲೆವಿ ಪದ್ಧತಿಯ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳು ಈ ಸಭೆಯ ಮುಂದೆ ಬಂದಿವೆ. ಲೆವಿಯನ್ನು ವಸೂಲು ಮಾಡುತ್ತಿರುವುದು ದೂರದೃಷ್ಟಿಯಿಂದ ಇರಬಹುದು. ಸಾಮಾನ್ಯ ಜನರಿಗೆ

(ಶ್ರೀ ಕೆ. ಎಚ್. ಶ್ರೀನಿವಾಸ್)

ಕಡಿಮೆ ಬೆಳೆಯಲ್ಲಿ ಆಹಾರಧಾನ್ಯವನ್ನು ಒದಗಿಸಬೇಕೆಂಬ ದೃಷ್ಟಿಯಿಂದ ಸರ್ಕಾರದವರು ಲೆವಿಯನ್ನು ವಸೂಲು ಮಾಡುತ್ತಿರಬಹುದು. ಕಾನೂನು ಪ್ರಕಾರವಾಗಿ ರೈತರಿಂದ ಲೆವಿಯನ್ನು ವಸೂಲು ಮಾಡುತ್ತಿಲ್ಲ. ಈ ವಿಚಾರದಲ್ಲಿ ರೈತರಿಗೆ ರಕ್ಷಣೆ ಇಲ್ಲವಾಗಿದೆ. ಮತ್ತು ಅಧಿಕಾರಿಗಳು ಈ ವಿಚಾರದಲ್ಲಿ ರೈತರಿಗೆ ಕಿರುಕುಳ ಕೊಡುತ್ತಿರುವುದಲ್ಲದೆ, ಅಧಿಕಾರವನ್ನು ದುರುಪಯೋಗ ಮಾಡಿ ಕೊಳ್ಳುವುದಕ್ಕೆ ಅವಕಾಶವಾಗಿದೆ. ಆದ್ದರಿಂದ ಈ ಲೆವಿ ಪದ್ಧತಿಯನ್ನು ತೆಗೆದು ಇದಕ್ಕೆ ಬದಲಿ ವ್ಯವಸ್ಥೆಯನ್ನು ಮಾಡುವುದು ಒಳ್ಳೆಯದು. ಈ ವರ್ಷ ಲೆವಿ ವಸೂಲಿ ಪ್ರಾರಂಭವಾಗಿರುವುದರಿಂದ ಮುಂದಿನ ವರ್ಷದಿಂದಲಾದರೂ ಈ ಪದ್ಧತಿಯನ್ನು ಕೈಬಿಡುವುದು ಒಳ್ಳೆಯದೆಂದು ನಾನು ಸರ್ಕಾರಕ್ಕೆ ತೀವ್ರವಾಗಿ ಒತ್ತಾಯ ಮಾಡುತ್ತಿದ್ದೇನೆ. ಈಗೇನಾದರೂ ತೆಗೆದರೆ ಕೊಟ್ಟವನು ಕೋಡಂಗಿ, ಕೊಡದವನು ವೀರಭದ್ರ ಎಂಬಂತೆ ಆಗುತ್ತದೆ. ಆದ್ದರಿಂದ ಈ ಪದ್ಧತಿಯನ್ನು ಈ ವರ್ಷಕ್ಕೆ ಮಾನವೀಯತೆಯಾದಂಥ ರೀತಿಯಲ್ಲಿ ಮುಂದುವರೆಸಿ ಮುಂದಿನ ವರ್ಷದಿಂದ ರದ್ದುಗೊಳಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸಕ್ಕಾಗಿ ನ್ಯಾಯವಾಗಿಯೂ ವಿಶೇಷವಾದಂಥ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಇನ್ನು ಮುಂದೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವುದಕ್ಕೆ ಬದಲು ವಿದ್ಯಾಭ್ಯಾಸದ ಗುಣವನ್ನು ಅಧಿಕಗೊಳಿಸುವುದರ ಕಡೆಗೆ ಗಮನ ಹರಿಸುವುದು ಒಳ್ಳೆಯ ದೆಂದು ಕಾಣುತ್ತದೆ. ಇತ್ತೀಚೆಗೆ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿದೆ. ಯಾರು ವಿದ್ಯಾವಂತ ರಾಗುತ್ತಾರೋ ಅಂತಹವರು ಸ್ವಾವಲಂಬಿಗಳಾಗುವಂತಹ ಒಂದು ತತ್ವವನ್ನು ಕಂಡುಹಿಡಿಯಬೇಕೇ ವಿನಾ ನಿರುದ್ಯೋಗತನ ಹೆಚ್ಚಾಗುವುದರ ಕಡೆಗೆ ಗಮನ ಕೊಡಬಾರದೆಂದು ವಿನಂತಿ ಮಾಡಿ ಕೊಳ್ಳುತ್ತೇನೆ. ಮತ್ತು ಇನ್ನು ಬೇರೆ ಎಲ್ಲಾ ರಂಗಗಳಲ್ಲಿಯೂ ಭ್ರಷ್ಟಾಚಾರ ಕಂಡುಬರುತ್ತಿದೆ. ಇದಕ್ಕೆ ಮೂಲಭೂತವಾದ ನಮ್ಮ ನೈತಿಕ ಮೌಲ್ಯವೇ ಕಾರಣವೆಂದು ಹೇಳಬೇಕಾಗಿದೆ. ನಮ್ಮ ರಾಷ್ಟ್ರ ಧರ್ಮವನ್ನು ಅಪೇಕ್ಷೆ ಮಾಡತಕ್ಕ ರಾಷ್ಟ್ರವಾಗಿರಬಹುದು. ಯಾವುದೇ ರಾಷ್ಟ್ರವು ನಿರಪೇಕ್ಷಿತವಾಗಿರಲು ಸಾಧ್ಯವಿಲ್ಲ. ಆದ್ದರಿಂದ ಉತ್ತಮವಾದಂತಹ ಜೀವನ ಮೌಲ್ಯವನ್ನು ಅವರು ಧೃಡಪಡಿಸಿಕೊಂಡಿರತಕ್ಕಂತಹ ವಿದ್ಯಾಭ್ಯಾಸ ಮತ್ತು ಅಂಥ ನೈತಿಕ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡಬೇಕಾದುದು ಅತ್ಯಾವಶ್ಯಕ. ಇಂದು ವಿದ್ಯಾರ್ಥಿಗಳ ಚಳವಳಿಯು ದಿನನಿತ್ಯದ ಮಾತಾಗಿದೆ, ಯಾವುದೇ ವಿಚಾರ ಬಂದರೂ ಅದಕ್ಕೆ ಚಳವಳಿಯಾಗುತ್ತಿದೆ. ದೇಶದ ನೈತಿಕ ಮತ್ತು ಇನ್ನಿತರ ಭವಿಷ್ಯ ಉಳಿಯಬೇಕಾದರೆ, ಎಲ್ಲಾ ರಾಜಕೀಯ ಪಕ್ಷಗಳು ವಿದ್ಯಾರ್ಥಿಗಳನ್ನು ಚಳವಳಿಯಿಂದ ದೂರ ಇಡಬೇಕಾಗಿದೆ ಮತ್ತು ಏನಾದರೂ ಒಂದು ಒಡಂಬಡಿಕೆಗೆ ಬರುವುದಕ್ಕೆ ಪ್ರಯತ್ನ ಮಾಡಬೇಕು. ಅದೇ ರೀತಿ ವಿದ್ಯಾರ್ಥಿಗಳ ಒಂದು ಸಮಸ್ಯೆಗಾಗಿ ತಕ್ಷಣ ಒಂದು ಪರಿಹಾರವನ್ನು ಕಂಡುಹಿಡಿ ಯುವುದು ಶಾಲೆ ಕಾಲೇಜಿನವರ ಮತ್ತು ಪೋಷಕರ ಕರ್ತವ್ಯ ಮತ್ತು ಇದಕ್ಕೆ ಸರ್ಕಾರದವರು ಮತ್ತು ವಿರೋಧಪಕ್ಷದವರು ತೀವ್ರಗಮನವನ್ನು ಹರಿಸಬೇಕು ಎಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಹಾಗೆ ಮಾಡಿದರೆ ಮಾತ್ರ ಶಾಸನ ಸುವ್ಯವಸ್ಥೆಯಾಗಿ ಬೆಳೆಯುತ್ತದೆ. ಅದಲ್ಲದೆ ಕೇವಲ ಪೋಲೀಸ ಖಾತೆಯ ಕೈಯಲ್ಲಾಗಲಿ ಅಥವಾ ರಿಸರ್ವ್ ಪೋಲೀಸರಿಂದಾಗಲಿ ಶಾಂತಿಯನ್ನು ಕಾಪಾಡತಕ್ಕದ್ದು ಸಾಧ್ಯವಾಗಲಾರದು.

7-00 P.M.

ಇನ್ನು ಭ್ರಷ್ಟಾಚಾರ ವಿಚಾರಗಳ ಬಗ್ಗೆ ಅನೇಕ ಪ್ರಸ್ತಾಪಗಳು ಬಂದಿವೆ. ಸರ್ಕಾರಕ್ಕೆ ಕೆಲವು ಸಂದರ್ಭಗಳಲ್ಲಿ ತನ್ನ ಆಡಳಿತ ಯಂತ್ರದ ಮೇಲೆ ಇರಬೇಕಾದಷ್ಟು ಹಿಡಿತವಿದೆಯೋ ಎಂಬ ಅನು ಮಾನಕ್ಕೂ ಆಸ್ಪದ ಇದೆ. ನಿನ್ನೆ ಮಾನ್ಯ ಕಂದಾಯ ಮಂತ್ರಿಗಳು ಹೇಳಿದರು—ಯಾರನ್ನಾದರೂ, ಯಾರ ಬಗ್ಗೆಯಾದರೂ ಹೇಳಿ, ಕ್ರಮ ತೆಗೆದುಕೊಳ್ಳಬಹುದಲ್ಲ ಎಂದು. ಎಷ್ಟೋ ಸಂದರ್ಭಗಳಲ್ಲಿ ಒಂದೆರಡು ವರ್ಷಗಳ ಕಾಲ ಒಬ್ಬ ಅಧಿಕಾರಿಯ ಭ್ರಷ್ಟಾಚಾರ ಹೇಳಿದರೂ ಕೂಡ ಏನೂ ಆಗುವುದಿಲ್ಲ. ಕೊನೆಗೆ ಅವ ರನ್ನು ಮತ್ತೊಂದು ಕಡೆಗೆ ಟ್ರಾನ್ಸ್‌ಫರ್ ಮಾಡುತ್ತಾರೆ. ಇದರಿಂದ ನಮ್ಮ ಕಷ್ಟವನ್ನು ಇನ್ನೊಂದು ಕ್ಷೇತ್ರಕ್ಕೆ ಕೊಟ್ಟಂತೆ ಆಗುತ್ತದೆ. ಅವರನ್ನು ಹಿಡಿದು ಶಿಕ್ಷೆ ಮಾಡತಕ್ಕಂಥದ್ದು ಏಕೆ ಸರ್ಕಾರಕ್ಕೆ ಸಾಧ್ಯ ವಾಗಲಿಲ್ಲ. ಇದನ್ನು ಪರಿಹರಿಸಲು ತೀವ್ರವಾಗಿ ಗಮನವನ್ನು ಹರಿಸಬೇಕು. ಕೆಲವು ಸರ್ಕಾರದ ಜಟಿಲವಾದ ಪದ್ಧತಿಯ ಕಾರಣದಿಂದ ಈ ಭ್ರಷ್ಟಾಚಾರಕ್ಕೆ ಕಾರಣವಾಗಿದೆ. ಇವತ್ತಿನ ದಿವಸ ತಾಲ್ಲೂಕು ಅಫೀಸಿನಲ್ಲಿ ಯಾವುದೇ, ಪಹಣಿ, ಆರ್. ಆರ್. ಇಂಡೆಕ್ಸ್ ದಾಖಲು ಇವೆಲ್ಲಕ್ಕೂ ರೈತನು ಕೈತುಂಬ ಹಣವನ್ನು ಚೆಲ್ಲಬೇಕಾಗಿದೆ. ಈ ಬಗ್ಗೆ ಒಂದು ಸಲಹೆಯನ್ನು ಕೊಡಬಯಸುತ್ತೇನೆ.

ಹಿಮಾಚಲ ಪ್ರದೇಶದಲ್ಲಿ ಪಹಣಿ ಆರ್. ಆರ್. ಇಂಡೆಕ್ಸ್ ದಾಖಲಿನ ಬದಲು ರೈತರಿಗೆ ಎಲ್ಲಾ ವಿಷಯಗಳನ್ನೂ ಕ್ರೋಢೀಕರಿಸಿ, ಒಂದು ಕಿಸಾನ್ ಬುಕ್ ಎಂಬ ಒಂದು ಬ್ಯಾಂಕ್ ಪಾಸ್ ಬುಕ್ ತರದ್ದು ಇದೆ. ಅದನ್ನೂ ಇಲ್ಲಿ ದಯವಿಟ್ಟು ಪರಿಶೀಲಿಸಬೇಕೆಂದು ಕಂದಾಯ ಮಂತ್ರಿಯವರಲ್ಲಿ ಹೇಳಿಕೊಳ್ಳುತ್ತೇನೆ. ಭ್ರಷ್ಟಾಚಾರದ ಬಗ್ಗೆ ನಮ್ಮ ಕರ್ತವ್ಯ ಕೂಡ ಇದೆ. ನಾವು ಯಾರಾದರೂ ಲಂಚ ಹೊಡೆಯು ಸಿಕ್ಕಿಬಿದ್ದರೆ, ಅಂಥವರಿಗೆ ರಕ್ಷಣೆ ಕೊಡುತ್ತೇವೆ. ನಮ್ಮ ಜನರ ಮನೋಭಾವ ನೋಡಿದರೆ, ಯಾವುದೇ ಅಧಿಕಾರಿ ಮಾರ್ಕೆಟ್ ದರದಲ್ಲಿ ಲಂಚ ತೆಗೆದು, ತನಗೆ ಬೇಕಾದ ಕೆಲಸ ಮಾಡಬಹುದೇ ಹೊರತು, ತನಗೆ ಅನಾನುಕೂಲವಾದರೂ ಚಿಂತೆ ಇಲ್ಲ, ಸರ್ಕಾರದ ಅಧಿಕಾರಿ ನಿಷ್ಪಕ್ಷಪಾತವಾದ ರೀತಿಯಲ್ಲಿ ಕೆಲಸಮಾಡಬೇಕೆಂದು ಜನತೆಯು ಕೂಡ ಬಯಸುವುದಿಲ್ಲ. ಇಂಥ ಒಂದು ಪ್ರಾಮಾಣಿಕತೆಯ ನಿರೀಕ್ಷಣೆ, ಮತ್ತು ಅವರಲ್ಲಿ ಬದಲಾವಣೆ ಆಗುವಂತೆ ಒಂದು ಹೆಚ್ಚಿನ ರೀತಿಯ ಚಳವಳಿ ಆಗಬೇಕಾದುದು ಅತ್ಯಾವಶ್ಯಕ. ಅದು ಬಿಟ್ಟು ಕೇವಲ ಜನತೆಯ ಮನಸ್ಸನ್ನು ಕೆಡಿಸುವ ಮಟ್ಟದಲ್ಲಿ ಆದರೆ ಏನೂ ಪ್ರಯೋಜನವಿಲ್ಲ. ಉನ್ನತ ಶಾಸಕರ ಬಗ್ಗೆ ಮಂತ್ರಿಗಳ ಬಗ್ಗೆ ಆಗತಕ್ಕಂತಹ ಭ್ರಷ್ಟಾಚಾರವನ್ನು, ಕೇವಲ ಅರ್ಜಿಗಳಿಂದ, ಕೇವಲ ಸಂಶಯದಿಂದ, ಕೇವಲ ಸಂದೇಹದ ಆಧಾರದ ಮೇಲೆ ಕಂಡುಹಿಡಿಯಲಿಕ್ಕೆ ಸಾಧ್ಯವಿಲ್ಲ. ವಿರೋಧ ಪಕ್ಷದವರು ಮಾಡತಕ್ಕ ಅಪಾದನೆಗಳನ್ನು ಗಮನಿಸುವುದಾದರೆ, ಮಂತ್ರಿಗಳ ಬದಲು ಕೇವಲ ವಿಚಾರಣಾ ಮಂಡಳಿ ಇಡಬೇಕಾದ ಸಂದರ್ಭ ಬರಬಹುದು. ಆದರೆ ಉನ್ನತ ಮಟ್ಟದಲ್ಲಿ, ಆಡಳಿತ ಪಕ್ಷದಲ್ಲಿ ಸಂದೇಹ ಬಂದಾಗ ಅದನ್ನು ನಿವಾರಣೆ ಮಾಡಬೇಕಾದ ಅವಕಾಶ ಇರಬೇಕು. ಇಲ್ಲದಿದ್ದರೆ, ನಮ್ಮ ರಾಜ್ಯದ ಆಡಳಿತವೂ ಸುವ್ಯವಸ್ಥಿತವಾಗಿ ನಡೆಯಲಾರದು. ಅಂಥ ಅಪಾದನೆಗಳನ್ನು, ಆದಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ, ಸಂತಾನಂ ಕಮಿಟಿ ಶಿಫಾರಸು, ಮತ್ತು ಇತ್ತೀಚೆಗೆ ಆಡಳಿತ ಸುಧಾರಣಾ ಮಂಡಳಿ ಮಾಡಿರತಕ್ಕ ಲೋಕಪಾಲ್ ಮತ್ತು ಲೋಕ ಆಯುಕ್ತ ಎಂಬುದನ್ನು ಬಹಳ ಶೀಘ್ರವಾಗಿ ಕಾರ್ಯಗತ ಮಾಡಬೇಕು. ಮತ್ತು ಇದು ಪ್ರಜಾಪ್ರಭುತ್ವದ ರಕ್ಷಣೆಯ ದೃಷ್ಟಿಯಿಂದ ಅತ್ಯಂತ ಅವಶ್ಯಕವೆಂದು ನಾನು ಹೇಳಬಯಸುತ್ತೇನೆ. ಮತ್ತು ಯಾರು, ಎಲ್ಲಿಯಾದರೂ ಅಪಾದನೆ ಮಾಡಲಿ, ಆ ಅಪಾದನೆಗಳನ್ನು ಮಾಡಿ ತಲೆ ತಪ್ಪಿಸಿಕೊಂಡು ಹೋಗುವಂತೆ ಇರಬಾರದು. ಅದನ್ನು ರುಜುವಾತು ಪಡಿಸುವ ಜವಾಬ್ದಾರಿಯ ವ್ಯವಸ್ಥೆಯೂ ಅದರ ಜೊತೆಗೆ ಆಗಬೇಕೆಂದು ನಾನು ಸೂಚಿಸುತ್ತೇನೆ. ಇನ್ನು ಒಂದೇ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಇವತ್ತಿನ ದಿವಸ ವಿರೋಧಪಕ್ಷದ ನನ್ನ ಅನೇಕ ಮಿತ್ರರು ಅನೇಕ ವಿಷಯಗಳ ಬಗ್ಗೆ ಅಭಿಪ್ರಾಯ ಗಳನ್ನು ಕೊಟ್ಟಿದ್ದಾರೆ. ನಾನು ರಾಜ್ಯಪಾಲರ ಭಾಷಣದ ಮೇಲೆ ನಡೆದ ಚರ್ಚೆಯಲ್ಲಿ ಅವರು ವಿಶೇಷವಾದಂತಹ ಅಂಕಿ ಅಂಶಗಳನ್ನು ಹಿಡಿದುಕೊಂಡು ಸರ್ಕಾರದವರನ್ನು ಬಾರಿಸುತ್ತಾರೆಂದು ನಂಬಿಕೊಂಡಿದ್ದೆ. ಆದರೆ ಹಾಗೆ ಅದು ಆಗಲಿಲ್ಲ. ಬಹುಶಃ ಬಜೆಟ್ ಭಾಷಣಕ್ಕಾಗಿ ಕಾದಿರಿಸಿ ಕೊಂಡಿದ್ದಾರೆಂದು ತಿಳಿದುಕೊಂಡಿದ್ದೆ. ಆದರೆ, ಈಗಲಾದರೂ ಕೂಡ ಬರದೇ ಇದ್ದದ್ದು ನನ್ನನ್ನು ಬಹಳ ವಿಷಾದಕ್ಕೆ ಒಳಗು ಮಾಡಿದೆ. ಈ ಬಜೆಟ್ ಭಾಷಣದಲ್ಲಿ ಬಾಲಕರು ಕೂಡ ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ಎಲ್ಲಾ ಅಂಕಿ ಅಂಶಗಳನ್ನು ವಿವರಿಸಿದ್ದಾರೆ. ಆದರೆ ಮೇಲೆ ತೀರಾ ಪ್ರೌಢವಾದಂತಹ ಚರ್ಚೆ ಮಾಡದೆ, ಕೇವಲ ಪ್ರಚಾರಕ್ಕಾಗಿ ಟೀಕೆ ಮಾಡಿದರೆ, ಅದು ಅಷ್ಟು ನ್ಯಾಯವಲ್ಲ. ಭಾಷಾ ಬಗ್ಗೆಯಾಗಲಿ, ಶಾಸನದ ಬಗ್ಗೆಯಾಗಲಿ, ಕೈಗಾರಿಕೆಯ ನೀತಿ ಕುಟುಂಬ ಯೋಜನೆಯ ವಿಷಯ ದಲ್ಲಾಗಲಿ, ವಿರೋಧ ಪಕ್ಷದ ಅನೇಕ ಸದಸ್ಯರು ಒಂದಕ್ಕೊಂದು ತದ್ವಿರುದ್ಧವಾಗಿ ಅಭಿಪ್ರಾಯ ಗಳನ್ನು ಕೊಟ್ಟಿದ್ದಾರೆ. ಹಾಗೆ ದೂಷಣೆ ಸಭಾತ್ಯಾಗ ಮಾಡುವುದರಲ್ಲಿ ಮಾತ್ರ ಇವರಲ್ಲಿ ಒಗ್ಗಟ್ಟು ಇರುವುದಲ್ಲದೆ, ಬೇರೆ ಯಾವುದರಲ್ಲೂ ಒಂದೇ ಅಭಿಪ್ರಾಯ ಇಲ್ಲ ಎಂಬುದನ್ನು ನಾನು ಬಿಚ್ಚು ಮನಸ್ಸಿನಿಂದ ಹೇಳಬಯಸುತ್ತೇನೆ. ಇನ್ನು ಕೆಲವರು, ಶ್ರೀ ವಾಟಾಳ್ ನಾಗರಾಜ್ ಅವರು ನಾನಾ ರೀತಿಯ ಸವಾಲುಗಳನ್ನು ಹಾಕುತ್ತಿದ್ದಾರೆ. ಒಂದು ಸಾರಿ ಚಿಕ್ಕಪೇಟೆಗೆ ಬರುತ್ತೀರಾ ? ಎಂದು ಕೇಳುತ್ತಾರೆ, ಒಂದು ಸಾರಿ ನನ್ನ ವಿರುದ್ಧ ಮುಖ್ಯ ಮಂತ್ರಿಯವರು ಚುನಾವಣೆಗೆ ನಿಲ್ಲುತ್ತೀರಾ, ಎಂದು ಕೇಳುತ್ತಿದ್ದಾರೆ. ಹೀಗೆಲ್ಲಾ ಹಲವಾರು ಸ್ವಕಲ್ಪಿತವಾದಂತಹ ಸವಾಲನ್ನು ಹಾಕಿಕೊಳ್ಳುವುದಕ್ಕಿಂತ ಸಹಜವಾಗಿ ಎಲ್ಲಿ ದೇಶದ ಕಷ್ಟ ಪರಿಸ್ಥಿತಿಯನ್ನು ಎದುರಿಸಬೇಕಾಗಿರುತ್ತದೆ, ಅಲ್ಲಿ ಪ್ರಾಮಾಣಿಕತೆಯಿಂದ, ಸಂಘಟನೆಯಿಂದ ಪ್ರಯತ್ನ ಮಾಡಿದರೆ, ಅದರಿಂದ ನಮಗೆ ಬಹಳ ಪ್ರಯೋಜನವಾಗಬಹುದೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri P. B. NANDIHALI (Uchgaon).—Mr. Speaker, Sir, I know that all are tired to listen to me; but, still I desire to make a few remarks on the Budget Estimates for the year 1968-69. All the members are not happy to listen the Marathi Member and so we beg your leave to go in Maharashtra. Unfortunately so long we are arrested here

(SRI P. B. NANDIHALI)

forcibly, we have to express our bitter remarks. Sir, the hon'ble Finance Minister has presented a budget showing a surplus of Rs. 11.98 crores. He calls it a surplus budget but several hon'ble members on both sides have said that it is not a surplus budget. It is nothing but a debt budget and deficit budget which is deceiving the Common people. I must appreciate the Finance Minister for having referred to the burning issue of language in his Budget Speech. He has accepted the three language formula on behalf of the Government. But he has further said :

> "As there are certain apprehensions in some quarters, I hope that steps will be taken to solve the problem to the satisfaction of all the persons concerned, keeping in view the paramount importance of maintaining national solidarity and unity of the country".

Some members expressed the fear that this three language formula will be a burden on our students and there should not be the burden of Hindi language. I wish to bring to the notice of this august House the plight of the Marathi speaking people in this regard. If the Government of Mysore is to accept this three language formula, it is welcome because Hindi must be accepted as the national language and it was accepted by Mahatma Gandhi and it is the only link language. But, we, Marathi speaking people in the border areas will have to study four languages because our mother-tongue is Marathi and we must learn that language also along with these three languages. So, it has become very difficult for Marathi people who stay in Mysore State. That is why we are begging that we may be sent back to Maharashtra. As the Finance Minister remembers the burning issue of the language, it is not out of place if I say that the burning problem of the Marathi people with regard to the border issue should also be remembered by him and I expect the same noble policy from the Finance Minister and the Government that they should accept the democratic principle, linguistic principle which considers village as the unit, linguistic majority, geographical contiguity and the wishes of the people. This is the only principle which can solve all the problems in this country. The burning border problem will also affect the budget of the State. So long as the border dispute between Mysore and Maharashtra is not solved, satisfactorily you will have to engage extra police and spend your funds on that to break down the movements that are going on in this regard and which will go on, I am definite, until this issue is solved democratically. That amout may as well be utilised for the other developmental works in the State. Marathi people have burnt the report of the Mahajan Commission ; Kerala and Maharashtra Government have buried it and the Central Government is trying to have the concensus and evolve a proper solution to give justice to these people. It means they have given consent to forget the Mahajan

Report—which is partial, undemocratic, without principle and inconsistent. I request the Mysore Government to accept some democratic principle and solve this question once and for all so that the burden of the extra expenditure in this regard may be saved.

Sir, this budget is not a budget for the common people, of the common people and by the common people. There is no proper provision for the common people in the Budget for the landless labourers, for the poor people and for the minorities. Government is giving certain facilities to the Scheduled Castes and Scheduled Tribes in accordance with the Constitutional provisions and they are not enough. This is like giving a few drops of water to a man who is very thirsty, to quench his thirst, which is impossible. Even a cart-man of a village while driving his bullock-cart, uses his special rope and ties it to the stronger bullock and helps the weaker bullock and he works smoothly. But how is it that our Government does not understand that they are not giving special help, special assistance to the weaker section in this State ? I do not see anywhere in the budget where special provisions having been made for the poor people. The slogan of the ruling party to have the idea of a socialistic pattern of society is imaginary and deceiving. I regret to say that there is no programme for the upliftment of the poor. The landlords and the rich are taking full advantage of this budget and the poor are thrown in a deep valley of poverty and misery. It is a great failure of democracy even after twenty years of our achieving independence and we see starving people in this State and throughout the country as well.

Sir, in this budget we see the debt burden ; there is borrowing from the public and also from the Central Government. By this policy, we cannot be self-sufficient and self-dependent. This policy of borrowing and begging must be minimised. "On page 39 the Finance Minister has given the total debt including amounts due to Government of India, Public Loans and other at the end of 1968–69 as Rs. 342·80 crores. This is besides the outstanding balances under Unfunded Debt and deposits of Rs. 26.64 crores ." Sir, loans must be taken and also given. But, while so doing, we must look to the benefit of the people. It must be utilised for the productive purpose and it must yield sufficient returns. The loans must be created for productive purpose. The Government must be in a position to return the loans. The Government should not see the momentary satisfaction to show some development but they must get the fruit of progress. They must yeild sufficien return not only for this generation but also for the future generation.

The Hon'ble Finance Minister has expressed with great eloquence about the development of industries. He has proudly said that he has not only visited Calcutta, Bombay etc., but also America, Japan and he has given a long list of industrialists. These are all from the capitalists who are on the top of the mountain of progress. Government has invested crores of rupees and getting an yield of only 9 to 10 per cent as return. The Finance Minister has said that he would not call everything is perfect. According to me, nothing is perfect here. Sir,

(SRI P. B. NANDIHALI)

people at large are the important factor; there progress is important but to-day the whole machinery of the Government is giving more scope to the rich and the poor are considerably neglected in this country. There is no excuse for this regressive policy.

To speak about administration I should say that every where there is malpractice, corruption and so on. My Hon'ble friend Sri Srinivasa expressed his opinion about the corruption and said...... of course I do not follow Kannada; but if I am correct there will not be any use of transfers of officers to stop corruption. He told it to the Revenue Minister. I am also of the same opinion. In this connection I remember a story. There was a Minister who was very particular about good administration and to do justice to the people. One big officers was there who was most corrupt. The Minister transferred him taking the opinion of the people to the sea shore and entrusted him with the duty to count the number of waves in the sea so that there should be no scope for corruption. The officer was a very wise man. Next day he ordered that no body should go in the sea with or without boat, without his permission. So from next day all the boatmen stopped their work as the officer did not allow them to go. At night the poor fishermen could not cook or take meals. One night one by one, they came and gave huge amounts to the officers. So, easily without any effort the officer got the money. The fishermen again went to the Minister and told them all the facts. The Minister went to the officer; bowed down before him and asked him what wealth he wanted. He immediately dismissed him. This is an example I have brought to your notice and it is not necessary to go to foreign countries for experience and to waste money. Chatrapati Sivaji Maharaj entrusted duties to one of his relatives to collect taxes. This person began to harass the people while collecting taxes. One poor peasant came to Chatrapati Sivaji Maharaj and told him the facts. He immediately changed his dress at night and went to his relative he examined him and after knowing the facts he immediately arrested him there. So, such drastic policy is required to check this blackmarket, corruption, malpractice and all those things.

I am thankful to the Chair and I must thank the Hon'ble members who listened to me.

MR. DEPUTY SPEAKER.—The House stands adjourned to meet tomorrow at 8-30 A. M.

The House adjourned at Twenty-five Minutes past Seven of the Clock to meet again at Thirty Minutes past Eight of the Clock on Saturday, 9th March 1968.

———